ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 9 ಮಂಗಳವಾರ 2024

₹4

ಸಂಪುಟ: 45 | ಸಂಚಿಕೆ: 84 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮುಡಾ ಹಗರಣ

ಶ್ರೀಮತಿ ಪಾರ್ವತಿಯವರು ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಎಂಬ ಕಾರಣಕ್ಕೇ ಇಷ್ಟೆಲ್ಲಾ ರಾದ್ಧಾಂತ

ಮೈಸೂರು, ಜು.8– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ವಿಷಯದಲ್ಲಿ ಕಳೆದ ಕೆಲವು ದಿನಗಳಿಂದ ಆಕಾಶವೇ ಕಳಚಿ ಬಿದ್ದು ಹೋದಂತೆ ಆರೋಪ–ಆಪಾದನೆಗಳು ಸದ್ದು ಮಾಡುತ್ತಿವೆ. ಅದು ಮುಡಾದಿಂದ ಪರಿಹಾರವಾಗಿ ನಿವೇಶನ ಪಡೆದಿರುವ



ಶ್ರೀಮತಿ ಪಾರ್ವತಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಎಂಬ ಒಂದೇ ಕಾರಣಕ್ಕಾಗಿಯೇ ಇಷ್ಟೆಲ್ಲಾ ಆಪಾದನೆಗಳು ಕೇಳಿ ಬರುತ್ತಿವೆ. ಆದರೆ ಇದರಲ್ಲಿ ಸತ್ಯಾಂಶ ಎಷ್ಟಿದೆ ಎಂಬುದನ್ನು ತನಿಖೆಯೇ ಬಹಿರಂಗಪಡಿಸಬೇಕಿದೆ ಎಂದು ಮಾಜಿ ಮುಡಾ ಅಧ್ಯಕ್ಷರೂ ಆದ ವಿಧಾನ ಪರಿಷತ್ ಮಾಜಿ ಸದಸ್ಯರಾದ ಸಂದೇಶ್ ನಾಗರಾಜ್ ಅಭಿಪ್ರಾಯಪಟ್ಟಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಒಬ್ಬ ದಕ್ಷ ಆಡಳಿತಗಾರ. ಅವರು ಕಾನೂನಿಗೆ ಗೌರವ ಕೊಡುವಂತಹ ವ್ಯಕ್ತಿ. ಮುಡಾದಲ್ಲಿ ನಿವೇಶನ ಹಂಚಿಕೆ, ಪರಿಹಾರ ಮುಂತಾದ ನಿರ್ಣಯ–ನಿರ್ಧಾರಗಳು ಮೊದಲಿನಿಂದಲೂ ನಡೆದುಕೊಂಡು ಬಂದಿವೆ. ಅದರಂತೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಶ್ರೀಮತಿ ಪಾರ್ವತಿ ಅವರಿಗೂ ಪರಿಹಾರವಾಗಿ ನಿವೇಶನ ನೀಡಲಾಗಿದೆ. ಬೇರೆಯವರಿಗೆ ಅನುಸರಿಸಲಾಗುವ ಮಾನದಂಡವೇ ಇಲ್ಲಿಯೂ ಅನ್ವಯಿಸಿದೆ. ಆದರೆ ವಿರೋಧ ಮಾಡಬೇಕೆಂಬ ಉದ್ದೇಶದಿಂದಲೇ ಕೆಲವರು ಇದನ್ನು ಹಗರಣವನ್ನಾಗಿ ಮಾಡಿದ್ದಾರೆ. ಇದು ಸಲ್ಲದು ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮಾಜಿ ಸಚಿವರು ಆದ ಶಾಸಕ ಎಸ್.ಟಿ. ಸೋಮಶೇಖರ್ ಅವರು ಶಾಸಕರು ಮುಡಾ ಸದಸ್ಯರಾಗುವುದಕ್ಕೆ ಆಕ್ಷೇಪಿಸುತ್ತಿರುವುದು ಸ್ವಾಗತಾರ್ಹ ಸಂಗತಿ. ಸರ್ಕಾರ ಮೊದಲು ಇದರ ಬಗ್ಗೆ ತೀರ್ಮಾನ ಕೈಗೊಳ್ಳಬೇಕು. ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ (ಬಿಡಿಎ) ದಲ್ಲಿರುವಂತೆ ಮುಡಾದಲ್ಲಿಯೂ ಆಡಳಿತ ವ್ಯವಸ್ಥೆ ರೂಪಿಸಬೇಕಿದೆ. ಯಾವುದೇ ಕಾರಣಕ್ಕೂ ಶಾಸಕರು ಇನ್ನಿತರ ಸದಸ್ಯರನ್ನು ಮುಡಾದಲ್ಲಿ ಇರಬಿಡಕೂಡದು ಎಂದು ಮೈಸೂರಿನ ಖ್ಯಾತ ಉದ್ಯಮಿಯೂ ಆದ ಸಂದೇಶ್ ನಾಗರಾಜ್ ಅಭಿಪ್ರಾಯಪಟ್ಟಿದ್ದಾರೆ. ಗಮನಾರ್ಹ ಸಂಗತಿ ಎಂದರೆ ಮೈಸೂರಿನ ಸುಗಮ ಸಂಚಾರ ವ್ಯವಸ್ಥೆಗೆ ವರದಾನ ವಾಗಿರುವ ಹೊರ ವರ್ತುಲ ರಸ್ತೆ ನಿರ್ಮಾಣಕ್ಕೆ ಸಂದೇಶ್ ನಾಗರಾಜರೇ ಕಾರಣಕರ್ತರು ಎಂಬುದನ್ನಿಲ್ಲಿ ಸ್ಮರಿಸಬಹುದು.

ರಸ್ತೆ ಡಿವೈಡರ್‌ಗೆ ಕಾರು ಡಿಕ್ಕಿ: ಪ್ರಯಾಣಿಕರು ಪಾರು



ಮೈಸೂರು, ಜು.8(ಎಂಕೆ)– ಕಾರೊಂದು ರಸ್ತೆ ಡಿವೈಡರ್‌ಗೆ ಡಿಕ್ಕಿ ಹೊಡೆದು ಜಖಂಗೊಂಡಿರುವ ಘಟನೆ ಸೋಮವಾರ ರಾತ್ರಿ ಬೋಗಾದಿ ಮುಖ್ಯ ರಸ್ತೆಯಲ್ಲಿ ನಡೆದಿದೆ.

ಬೋಗಾದಿ–ಗದ್ದಿಗೆ ಮುಖ್ಯರಸ್ತೆ (ಬೋಗಾದಿ 2ನೇ ಹಂತ, ಹರ್ಷ ಬಾರ್ ಸಮೀಪ)ಯಲ್ಲಿ ಸೋಮವಾರ ರಾತ್ರಿ 10 ಗಂಟೆಗೆ ಸುಮಾರಿಗೆ ಹುಂಡೈ ಕಾರು (ಕೆಎ.01.ಎಂಬಿ.1284) ರಸ್ತೆ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಕಾರಿನ ಮುಂಭಾಗ ಸಂಪೂರ್ಣ ಜಖಂ ಗೊಂಡಿದ್ದು, ಅದೃಷ್ಟವಶಾತ್ ಕಾರಿನಲ್ಲಿದ್ದ ಮೂವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಳೆದ ನಾಲ್ಕೈದು ದಿನಗಳ ಹಿಂದೆಯಷ್ಟೇ ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ರಸ್ತೆ ಡಿವೈಡರ್ ಮೇಲೆ ಹತ್ತಿತ್ತು. ಈ ರಸ್ತೆಗೆ ಹೊಂದಿಕೊಂಡಿರುವ ತಿರುವಿರುವ ಜಾಗದಲ್ಲಿ ಕಾರುಗಳನ್ನು ತಿರುಗಿಸಲು ಸಾಧ್ಯವಾಗದ ರೀತಿಯಲ್ಲಿ ಅವೈಜ್ಞಾನಿಕವಾಗಿ ಡಿವೈಡರ್ ಅಳವಡಿಸಲಾಗಿದೆ. ವಾರಕ್ಕೊಂದು ಅಪಘಾತಗಳಾಗುತ್ತಿವೆ. ಸಂಚಾರ ಪೊಲೀಸರು ಅಪಘಾತ ನಡೆದಾಗ ಸ್ಥಳಕ್ಕೆ ಬಂದು ಹೋಗುತ್ತಾರೆಯೇ ಹೊರತು ಸೂಕ್ತ ಪರಿಹಾರ ಕೈಗೊಂಡಿಲ್ಲ ಎಂದು ಸ್ಥಳೀಯ ನಿವಾಸಿಗಳು 'ಮೈಸೂರು ಮಿತ್ರ'ನಲ್ಲಿ ದೂರಿದ್ದಾರೆ.

ಮುಂಗಾರು ಮಳೆ ಆರ್ಭಟ– ಬೋಟ್‌ಗಳಲ್ಲಿ ಜನ, ಸಾಕುಪ್ರಾಣಿಗಳ ರಕ್ಷಣೆ



ಬೆಂಗಳೂರು: ಜುಲೈ ಮೊದಲ ವಾರದಲ್ಲೇ ರಾಜ್ಯದಲ್ಲಿ ಭರ್ಜರಿ ಮುಂಗಾರು ಮಳೆಯ ಆರ್ಭಟ ಜೋರಾಗಿದೆ. ಸಾಮಾನ್ಯವಾಗಿ 58 ಮಿಲಿಮೀಟರ್ ಮಳೆಯಾಗುತ್ತಿದ್ದ ಜುಲೈ ಮೊದಲವಾರದಲ್ಲಿ ಈ ಬಾರಿ 78 ಮಿಲಿಮೀಟರ್ ಮಳೆಯಾಗಿದೆ. ಇದು ಹಿಂದಿನ ಪ್ರಮಾಣಕ್ಕಿಂತ ಶೇ.25ಕ್ಕೂ ಹೆಚ್ಚಾಗಿದೆ.

ಕರಾವಳಿ ಭಾಗದಲ್ಲಿ ಕಳೆದೊಂದು ವಾರದಲ್ಲಿ ನಿರೀಕ್ಷೆಗಿಂತ ಹೆಚ್ಚು ಮಳೆ ಸುರಿದಿದೆ. ಕಳೆದ 24 ಗಂಟೆಗಳಲ್ಲಿ ಉತ್ತರ ಕನ್ನಡದಲ್ಲಿ 264 ಮಿಲಿಮೀಟರ್, ಉಡುಪಿಯಲ್ಲಿ 210 ಮಿಲಿಮೀಟರ್, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 168 ಮಿಲಿಮೀಟರ್ ಮಳೆಯಾಗಿದೆ. ಪರಿಣಾಮ ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ನದಿ ತೊರೆಗಳೆಲ್ಲಾ ಉಕ್ಕಿ ಹರಿಯುತ್ತಿದ್ದು, ಹಲವೆಡೆ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ.

ಉಡುಪಿ ನಗರ ಜಲಾವೃತವಾಗಿದೆ. ಇಂದ್ರಾಣಿ ತೀರ್ಥ ನದಿ ಹರಿಯುವಲ್ಲೆಲ್ಲಾ ಜನಜೀವನ ಅಸ್ತವ್ಯಸ್ತವಾಗಿದೆ. ಮಗು, ವೃದ್ಧ ಮಹಿಳೆಯನ್ನು ರಕ್ಷಣೆ ಮಾಡಲಾಗಿದೆ. ಕೃಷ್ಣ ಮಠ ಪಾರ್ಕಿಂಗ್ ಏರಿಯಾ ಜಲಾವೃತವಾಗಿದೆ.

ಉಡುಪಿಯ ಮೂಡುಬೆಟ್ಟು–ಕೊಡವೂರು ರಸ್ತೆ ಜಲಾವೃತವಾಗಿದ್ದು. ಭಾರೀ ಮಳೆ ನೀರಿನ ನಡುವೆ ಖಾಸಗಿ ಬಸ್ಸು ಓಡಾಟ ನಡೆಸಿದೆ. ಉಡುಪಿಯ ಕಡಿಯಾಳಿಯಲ್ಲಿರುವ ಹೋಟೆಲ್ ಒಳಗೆಲ್ಲಾ ನೀರು ನುಗ್ಗಿದೆ, ಮಠದ ಬೆಟ್ಟು ವ್ಯಾಪ್ತಿಯ ಬನ್ನಂಜೆ ಶನೇಶ್ವರ ಮಂದಿರ ಜಲಾವೃತವಾಗಿದೆ.

ಉಡುಪಿಯ ಚಕ್ರತೀರ್ಥ–ಸಗ್ರಿ–ಗುಂಡಿಬೈಲು–ಕಲ್ಸಂಕ ವ್ಯಾಪ್ತಿಯಲ್ಲಿ ಪ್ರವಾಹ ಸ್ಥಿತಿಯಿದೆ. ಬೋಟ್‌ಗಳ ಮೂಲಕ ಜನರ ರಕ್ಷಣೆ ಮಾಡಲಾಗ್ತಿದೆ. ಜನರ ಜೊತೆ ನಾಯಿ ಬೆಕ್ಕುಗಳನ್ನು ಕಾಪಾಡಲಾಗ್ತಿದೆ.

ಉಡುಪಿಯ ಮಣಿಪಾಲದ ರಸ್ತೆಗಳಲ್ಲಿ ನದಿಯಂತೆ ನೀರು ಹರಿದಿದೆ. ಹಲವು ಲೇಔಟ್‌ಗಳು ಜಲಾವೃತವಾಗಿವೆ.

ಹೊನ್ನಾವರದ ಗುಂಡಬಾಳ ನದಿ ಉಕ್ಕೇರಿದ್ದು, ನದಿಪಾತ್ರದ ತೋಟ–ಮನೆಗಳಿಗೆ ನೀರು ನುಗ್ಗಿದೆ.. ಕ್ಷಣ ಕ್ಷಣಕ್ಕೂ ನೀರಿನ ಮಟ್ಟ ಹೆಚ್ಚಾಗ್ತಿದ್ದು, ಗುಡ್ಡೆಬಾಳ ಗ್ರಾಮದ ಜನ ಆತಂಕದಲ್ಲಿದ್ದಾರೆ.

ಅರಬ್ಬಿ ಸಮುದ್ರ ತೀರದಲ್ಲಿ ಅಲೆಗಳ ಆರ್ಭಟ ಹೆಚ್ಚಿದ್ದು, ಅಂಕೋಲದ ತರಂಗ ಮೇಟ್ ಭಾಗದಲ್ಲಿ ಕಡಲ ಕೊರೆತದಿಂದ ತೆಂಗಿನ ಮರಗಳು ಉರುಳಿವೆ. ತಡೆಗೋಡೆ ಕೊಚ್ಚಿಹೋಗಿದೆ. ಮಲೆನಾಡು, ದಕ್ಷಿಣ ಒಳನಾಡು, ಉತ್ತರ ಒಳನಾಡಿನ ಹಲವೆಡೆ ಉತ್ತಮ ಮಳೆ ಸುರಿಯುತ್ತಿದೆ.

ಆರ್.ಅಶ್ವತ್ಥನಾರಾಯಣ ನಿಧನ

ಮೈಸೂರು, ಜು.8– ಮೈಸೂರಿನ ಬನ್ನಿಮಂಟಪ ನಿವಾಸಿ ಹಾಗೂ ಕೆಟಿ ಸ್ಟ್ರೀಟ್‌ನ ಶ್ರೀ ರಾಮಲಿಂಗ ಚೌಡೇಶ್ವರಿ ದೇವಸ್ಥಾನದ ಕಾರ್ಯದರ್ಶಿ ಆರ್.ಅಶ್ವತ್ಥನಾರಾಯಣ (84) ವಯೋಸಹಜ ಅನಾರೋಗ್ಯದಿಂದ ಸೋಮವಾರ ನಿಧನರಾದರು.



ಮೃತರು ಪತ್ನಿ, ನಾಲ್ವರು ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ನಾಳೆ (ಮಂಗಳವಾರ ಜು.9) ಸಂಜೆ 5ಕ್ಕೆ ಬನ್ನಿಮಂಟಪದ ಜೋಡಿ ತೆಂಗಿನ ಮರ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಸರ್ಕಾರಿ ಭೂಮಿ ಖಾಸಗಿಯವರಿಗೆ ನೀಡುವುದನ್ನು ವಿರೋಧಿಸಿ ಕರ್ನಾಟಕ ಪ್ರಾಂತ ರೈತ ಸಂಘ ಪ್ರತಿಭಟನೆ

ಮೈಸೂರು,ಜು.8(ಎಂಟಿವೈ)– ಸರ್ಕಾರಿ ಭೂಮಿಯನ್ನು ಖಾಸಗಿ ವ್ಯಕ್ತಿಗಳಿಗೆ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ಸಂಘದ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ, ಸರ್ಕಾರಿ ಭೂಮಿಯನ್ನು ಖಾಸಗಿ ವ್ಯಕ್ತಿಗಳಿಗೆ ನೀಡಲು ಮುಂದಾಗಿರುವ ಕ್ರಮದಿಂದ ಹಿಂದೆ ಸರಿಯಬೇಕು. ಬಗರ್‌ಹುಕುಂ ಸಾಗುವಳಿದಾರರಿಗೆ ಸಾಗುವಳಿ ಪತ್ರ ನೀಡಬೇಕು. ಹಾಲಿಗೆ ಪ್ರೋತ್ಸಾಹ ಧನ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ್ ಸೂರ್ಯ ಮಾತನಾಡಿ, ರಾಜ್ಯ ಸರ್ಕಾರ ಮುಂದಿನ 8 ತಿಂಗಳ ಒಳಗೆ ಅರ್ಜಿ ವಿಲೇವಾರಿ ಮಾಡುವುದಾಗಿ ಹೇಳಿರುವುದು ಸ್ವಾಗತಾರ್ಹ. ಜತೆಗೆ ಜಿಲ್ಲೆಯ ಎಲ್ಲಾ ತಾಲೂಕುಗಳ ಸಾವಿರಾರು ಎಕರೆ ಜಮೀನು ಪಕ್ಕ ಪೋಡಿಯಾಗದೆ ಹಾಗೆಯೇ ಉಳಿದಿದೆ. ಇದರಿಂದ ರೈತರಿಗೆ ತಮ್ಮ ಮಕ್ಕಳಿಗೆ ಜಮೀನು ವರ್ಗಾಯಿಸಲು, ಅಭಿವೃದ್ಧಿ ಮಾಡಲು ಕಷ್ಟಕರವಾಗಿದೆ. ಆದ್ದರಿಂದ ಜಮೀನುಗಳ ಪೋಡು ಮಾಡಲು ಜಿಲ್ಲಾಡಳಿತಕ್ಕೆ ಸೂಚನೆ ನೀಡುವಂತೆ ಒತ್ತಾಯಿಸಿದರು.

ಬಗರ್‌ಹುಕುಂ ಸಾಗುವಳಿದಾರರು ಈಗಾಗಲೇ ಹಕ್ಕುಪತ್ರಕ್ಕಾಗಿ ಫಾರಂ 51, 53 ಹಾಗೂ 57 ಸಲ್ಲಿಸಿರುವ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಲು ತಾಲೂಕು ಮಟ್ಟದಲ್ಲಿ ಸಮಿತಿ ನೇಮಿಸಬೇಕು. ಸರ್ಕಾರಿ ಜಮೀನು ಖಾಸಗಿಯವರಿಗೆ ಗುತ್ತಿಗೆ ನೀಡಬಾರದು. ನಗರದ 10 ಕಿಮೀ ವ್ಯಾಪ್ತಿ ಹಾಗೂ ಅರಣ್ಯ ಭೂಮಿಯಲ್ಲಿನ ಬಡ ಬಗರ್‌ಹುಕುಂ ಸಾಗುವಳಿದಾರರ ಭೂಕಬಳಿಕೆ ತಕ್ಷಣ ನಿಲ್ಲಿಸಬೇಕು. ಹಕ್ಕುಪತ್ರ ವಿತರಣೆಗೆ ಅಡ್ಡಿಯಾಗಿರುವ ಕಾಯಿದೆ ತಿದ್ದುಪಡಿ ಮಾಡಬೇಕು. ಗೋವುಗಳ ಸಮೀಕ್ಷೆ ಮಾಡಿ ಹಸುಗಳಿಗೆ ಅಗತ್ಯವಾದ ಭೂಮಿಯನ್ನು ಬಿಟ್ಟು ಉಳಿದ ಜಮೀನನ್ನು ರೈತರಿಗೆ ಹಂಚಲು ಕ್ರಮ ಕೈಗೊಳ್ಳಬೇಕು.

ಆದಿವಾಸಿಯೇತರ ಅರಣ್ಯ ಭೂಮಿ ಬಡ ಸಾಗುವಳಿದಾರರಿಗೆ ಹಕ್ಕುಪತ್ರ ದೊರೆಯುವಂತೆ ಅರಣ್ಯ ಹಕ್ಕು ಮಾನ್ಯತಾ ಕಾಯಿದೆಗೆ ತಿದ್ದುಪಡಿ ಮಾಡಿ ಹಕ್ಕು ಪತ್ರ ವಿತರಿಸಬೇಕು. ಹಾಲಿನ ಉತ್ಪನ್ನಗಳ ಮೇಲೆ ವಿಧಿಸಿರುವ ಜಿಎಸ್‌ಟಿ ವಾಪಸ್ ಪಡೆಯಬೇಕು. ರಾಜ್ಯ ಸರ್ಕಾರ ಹಾಲು ಉತ್ಪಾದಕರಿಗೆ ಬಾಕಿ ಇರುವ ಪ್ರೋತ್ಸಾಹ ಧನವನ್ನು ಕೂಡಲೇ ಬಿಡುಗಡೆ ಮಾಡಬೇಕು. ರೈತರಿಗೆ ಸಾಗುವಳಿ ಪತ್ರ ನೀಡುವ ಹಾಗೂ ರೈತರ ಸಮಸ್ಯೆ ಚರ್ಚಿಸಲು ಕೂಡಲೇ ಸಭೆ ಕರೆಯಬೇಕು ಎಂದು ಒತ್ತಾಯಿಸಿದರು.

ಜಿಎಸ್‌ಟಿ ತೆರಿಗೆ ಜಾರಿಯಿಂದ ದೇಶದಲ್ಲಿ 9 ಕೋಟಿ ಹಾಲು ಉತ್ಪಾದಕರ ಕುಟುಂಬಗಳೂ ಎರಡು ರೀತಿಯ ತೆರಿಗೆ ಸೇರಿ ಶೇ.17ರಿಂದ 30ರಷ್ಟು ತೆರಿಗೆ ಪಾವತಿಸುತ್ತಿದ್ದಾರೆ. ಹಾಲಿಗೆ ಜಿಎಸ್‌ಟಿ ವಿಧಿಸಿರುವುದರಿಂದ ರೈತ ಕುಟುಂಬ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದ್ದು, ಹಾಲಿ ಉತ್ಪನ್ನಗಳ ಮೇಲಿನ ಜಿಎಸ್‌ಟಿ ವಾಪಸ್ ಪಡೆಯಬೇಕು ಎಂದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಗೌರಿಪುರ ಚಿಕ್ಕಣ್ಣೇಗೌಡ, ಉಪಾಧ್ಯಕ್ಷರಾದ ಕೆ.ಬಸವರಾಜ್, ಬಿ.ಎಂ.ಶಿವಣ್ಣ, ವೀರಭದ್ರಪ್ಪ, ಹಳ್ಳದಕೊಪ್ಪಲು ಪುಟ್ಟರಾಜ, ಸಿದ್ದಯ್ಯ, ಸಹ ಕಾರ್ಯದರ್ಶಿಗಳಾದ ಪುಟ್ಟರಾಚ, ಕೆಂಪಣ್ಣ, ಸಣ್ಣನಾಯ್ಕ, ಚೌಡಮ್ಮ, ಕೆಂಪಮ್ಮ, ಸಾಕಮ್ಮ, ಮೂರ್ತಿ, ರಾಜೇಶ್, ತೋಟಪ್ಪ, ಚಂದರಾಜ್, ಗೋಪಾಲ್ ಇನ್ನಿತರರು ಪಾಲ್ಗೊಂಡಿದ್ದರು.

ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು, ಜು.8–ಬೆಂಗಳೂರಿನ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಹ ಶಿಕ್ಷಕರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ತಾಲೂಕಿನ ಅರ್ಹ ಶಿಕ್ಷಕರು ನಿಗದಿತ ದಿನಾಂಕದೊಳಗೆ ಅರ್ಜಿ ಹಾಗೂ ಅಗತ್ಯ ದಾಖಲೆಗಳನ್ನು https://nationalawardstoteachers.education.govt.in ಮೂಲಕ ಜುಲೈ 15ರೊಳಗೆ ಸಲ್ಲಿಸಬೇಕು ಎಂದು ತಿ.ನರಸೀಪುರ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ತಿಳಿಸಿದ್ದಾರೆ.

ಅಮ್ಮ ಕೊಡವ ಸಮಾಜದ ವಾರ್ಷಿಕ ಮಹಾಸಭೆ



ಮೈಸೂರಿನ ದಾಸಪ್ರಕಾಶ್ ಹೋಟೆಲ್‌ನಲ್ಲಿ ಮೈಸೂರು 'ಅಮ್ಮ ಕೊಡವ ಸಮಾಜ'ದ ವಾರ್ಷಿಕ ಮಹಾಸಭೆ, ಅಧ್ಯಕ್ಷ ಎನ್.ಯು. ಸಂತೋಷ್ ಅಧ್ಯಕ್ಷತೆಯಲ್ಲಿ ನಡೆಯಿತು. ಈ ವೇಳೆ ಉಪಾಧ್ಯಕ್ಷ ಸುಬ್ಬಮ್ಮಯ್ಯ, ಕಾರ್ಯದರ್ಶಿ ಹೆಚ್.ಎಸ್.ರಾಧಾ, ಖಜಾಂಚಿ ಸಿ.ಕೆ.ಉಮೇಶ್ ಹಾಗೂ ಸಮಿತಿ ಸದಸ್ಯರು ಭಾಗವಹಿಸಿದ್ದರು. ಶ್ರೀಮತಿ ರೂಪ ಉಮೇಶ್ ನಿರೂಪಿಸಿ, ಎನ್.ಕೆ.ರಾಜು ಸ್ವಾಗತಿಸಿದರೆ, ಸಿ.ಬಿ.ಗಿರೀಶ್ ವಂದಿಸಿದರು.

ಜನ ಜಾಗೃತರಾದರೆ ಡೆಂಗ್ಯೂ ನಿಯಂತ್ರಿಸಬಹುದು

ಸ್ವಯಂಪ್ರೇರಿತ ರಕ್ತದಾನ ಶಿಬಿರ ಉದ್ಘಾಟಿಸಿದ ಸುಯೋಗ್ ಆಸ್ಪತ್ರೆ ಸಂಸ್ಥಾಪಕ ಡಾ.ಎಸ್.ಪಿ.ಯೋಗಣ್ಣ ಅಭಿಮತ

ಮೈಸೂರು, ಜು. 8– ಜನರು ಜಾಗೃತರಾದರೆ ಡೆಂಗ್ಯೂನಂತಹ ಮಾರಕ ರೋಗಗಳನ್ನು ನಿಯಂತ್ರಿಸಬಹುದು' ಎಂದು ಸುಯೋಗ್ ಆಸ್ಪತ್ರೆ ಸಂಸ್ಥಾಪಕ ಡಾ.ಎಸ್.ಪಿ.ಯೋಗಣ್ಣ ಹೇಳಿದರು.



ಮೈಸೂರಿನ ಮಹದೇವಪುರ ಆರೋಗ್ಯ–ಕ್ಷೇಮ ಉಪಕೇಂದ್ರದಲ್ಲಿ ಜನಸೇವಕ ಯುವ ಬ್ರಿಗೇಡ್ ವತಿಯಿಂದ ಸ್ವಯಂಪ್ರೇರಿತ ರಕ್ತದಾನ ಶಿಬಿರ ನಡೆಯಿತು.

ಮೈಸೂರಿನ ಮಹದೇವಪುರ ಆರೋಗ್ಯ ಮತ್ತು ಕ್ಷೇಮ ಉಪಕೇಂದ್ರದಲ್ಲಿ ಜನ ಸೇವಕ ಯುವ ಬ್ರಿಗೇಡ್ ವತಿಯಿಂದ ವಿಶ್ವ ಯೋಗ ದಿನ ಹಾಗೂ ವೈದ್ಯರ ದಿನಾಚರಣೆ ಅಂಗವಾಗಿ ಉಚಿತ ಹೃದಯ ಸಂಬಂಧಿತ ಆರೋಗ್ಯ ತಪಾಸಣೆ ಶಿಬಿರ ಹಾಗೂ ಸ್ವಯಂಪ್ರೇರಿತ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಮನೆಯ ಸುತ್ತಮುತ್ತಲಿನ ಪರಿಸರವನ್ನು ಶುಚಿಯಾಗಿಟ್ಟುಕೊಳ್ಳಬೇಕು. ಮನೆಯ ಅಕ್ಕಪಕ್ಕ ನೀರು ನಿಲ್ಲದಂತೆ ನೋಡಿಕೊಳ್ಳಬೇಕು ಎಂದು ಜನರಿಗೆ ತಿಳಿ ಹೇಳಿದರು.

ಡೆಂಗ್ಯೂ ಮಾರಕ ರೋಗ. ತೀವ್ರ ತಲೆ ನೋವು, ತೀವ್ರವಾದ ಸ್ನಾಯು ಅಥವಾ ಕೀಲು ನೋವು, ವಾಂತಿ, ಕಣ್ಣು ನೋವು, ವಾಕರಿಕೆ ಮತ್ತು ಚರ್ಮದ ದದ್ದುಗಳು ಕಂಡಬಂದರೆ ತಕ್ಷಣ ಸಮೀಪದ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬೇಕು ಎಂದು ಸಲಹೆ ನೀಡಿದರು.

ಜೀವಧಾರ ರಕ್ತನಿಧಿ ನಿರ್ದೇಶಕ ಗಿರೀಶ್ ಮಾತನಾಡಿ, ದೇಹಕ್ಕೆ ಆಹಾರ ಹೇಗೆ ಅಗತ್ಯವೋ, ಹಾಗೆಯೇ ಪ್ರತಿನಿತ್ಯ ಯೋಗ ಮತ್ತು ಧ್ಯಾನದ ಅಭ್ಯಾಸ ಅವಶ್ಯಕವಾಗಿವೆ. ಅಷ್ಟಾಂಗ ಯೋಗದ ಅನುಷ್ಠಾನದಿಂದ ಚಿತ್ತಚಂಚಲತೆ ನಿವಾರಣೆಯಾಗಿ ಮಾನಸಿಕ ಸ್ಥಿರತೆ ದೊರೆತು ವಿವೇಕ ಲಭಿಸುವುದು. ಶ್ವಾಸಕೋಶ ಸಂಬಂಧಿ ರೋಗಗಳಿಗೆ ಯೋಗ ಅತ್ಯಂತ ಪರಿಣಾಮಕಾರಿಯಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಯೋಗ ಅಳವಡಿಸಿಕೊಳ್ಳಬೇಕು ಎಂದು ಡಾ.ಯೋಗಣ್ಣ ಸಲಹೆ ನೀಡಿದರು.

ಆರೋಗ್ಯ ತಪಾಸಣಾ ಶಿಬಿರದಲ್ಲಿ 100ಕ್ಕೂ ಹೆಚ್ಚು ಜನ ಹಿಮೋಗ್ಲೋಬಿನ್, ರಕ್ತದ ಗುಂಪು, ಸಕ್ಕರೆ ಪ್ರಮಾಣ, ಥೈರಾಯ್ಡ್ ಪರೀಕ್ಷೆ, ಹೆಚ್‌ಬಿಎ1ಸಿ (ಸಕ್ಕರೆ ಕಾಯಿಲೆ ಪರೀಕ್ಷೆ), ಅಲ್ಟ್ರಾಸೋನೋಗ್ರಫಿ, ಇಸಿಜಿ ಹೃದಯದ ಪರೀಕ್ಷೆ ಮಾಡಿಸಿಕೊಂಡರು. ಇದೇ ಸಂದರ್ಭದಲ್ಲಿ 30ಕ್ಕೂ ಹೆಚ್ಚು ಜನ ಸ್ವಯಂಪ್ರೇರಿತ ರಕ್ತದಾನ ಮಾಡಿದರು

ಜನಸೇವಕ ಯುವ ಬ್ರಿಗೇಡ್ ಅಧ್ಯಕ್ಷ ಡಿ.ರಾಘವೇಂದ್ರ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮತ್ತು ಸಮರ್ಥ ಶಕ್ತಿ ಸೇವಾ ಸಂಸ್ಥೆ ಅಧ್ಯಕ್ಷರಾದ ಮೋನಿಕಾ ಎಂ, ಮೈಸೂರು ಜಿಲ್ಲಾ ಯುವ ಮೋರ್ಚಾ ಕಾರ್ಯದರ್ಶಿ ಕಿರಣ್ ನಾಯ್ಡು, ಬಿಜೆಪಿ ತಾಲೂಕು ಮಹಿಳಾ ಮೋರ್ಚಾ ಅಧ್ಯಕ್ಷರಾದ ಸವಿತಾ ಪುಟ್ಟೇಗೌಡ, ಸಮಾಜ ಸೇವಕರಾದ ಕಲ್ಪನಾ ಹಾಗೂ ನವೀನ ಗೌಡ ಇನ್ನಿತರರು ಹಾಜರಿದ್ದರು.

ಆರ್‌ಓ ಘಟಕಗಳ ನೀರಿನ ಗುಣಮಟ್ಟ ಪರೀಕ್ಷಾ ವರದಿ ಪ್ರದರ್ಶನಕ್ಕೆ ಸೂಚನೆ

ಮೈಸೂರು,ಜು.8(ಎಸ್‌ಪಿಎನ್)–ಖಾಸಗಿ ಆರ್‌ಓ ಘಟಕಗಳ ನಿರ್ವಾಹಕರು, ಸಾರ್ವಜನಿಕರ ಹಿತದೃಷ್ಟಿಯಿಂದ ತಮ್ಮತಮ್ಮ ಘಟಕಗಳ ಪ್ರತಿ 15 ದಿನಗಳಿಗೊಮ್ಮೆ ನೀರಿನ ಗುಣಮಟ್ಟ ಪರೀಕ್ಷಿಸಿದ ವರದಿಯನ್ನು ಘಟಕಗಳ ಮುಂದೆ ಪ್ರದರ್ಶಿಸಬೇಕು. ನೀರಿನ ಉನ್ನತ ಗುಣಮಟ್ಟ ಮತ್ತು ಸುರಕ್ಷತೆ ಕಾಪಾಡಲು ಪ್ರತಿ 15 ದಿನಗಳಿಗೊಮ್ಮೆ BIS Established water testing laboratory/Engineering college/ Govt Research Laboratoryಗಳಲ್ಲಿ ಪರೀಕ್ಷಿಸಿ, ವರದಿಯನ್ನು ತಮ್ಮ ಘಟಕಗಳ ಮುಂದೆ ಪ್ರದರ್ಶಿಸಬೇಕು. ಸದರಿ ಘಟಕಗಳಲ್ಲಿ ಉಪಯೋಗದಲ್ಲಿರುವ ಎಲ್ಲಾ ಉಪಕರಣಗಳು BIS/ISO ಪ್ರಮಾಣ ಪತ್ರ ಹೊಂದಿರಬೇಕು. ಆರ್‌ಓ ಘಟಕಗಳ ನಿಯಮಿತ ನಿರ್ವಹಣೆ ಕಡ್ಡಾಯವಾಗಿದ್ದು, ಈ ನಿರ್ಣಯವನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ವಾಣಿವಿಲಾಸ ವಾಟರ್ ವರ್ಕ್ಸ್ ನೀರು ಸರಬರಾಜು–ಒಳಚರಂಡಿ ವಿಭಾಗ(ಪಶ್ಚಿಮ) ಪ್ರಕಟಣೆಯಲ್ಲಿ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.07.2024 ಮಂಗಳವಾರ, ಮಳೆ ನಕ್ಷತ್ರ : ಪುನರ್ವಸು 6.07.2024 ರಿಂದ 19.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆನ್ನುನೋವಿಗೆ ಕಾರಣಗಳು, ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ತಜ್ಞ ವೈದ್ಯರಿಂದ ಸಲಹೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ಜೆಎಸ್‌ಎಸ್ ಮಹಾ ವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ–2024, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ವರ್ತುಲ ರಸ್ತೆ, ಬೆಳಗ್ಗೆ 10ರಿಂದ.

■ **ಸಹಾರ ಮಹಿಳಾ ಸ್ವ ಸಹಾಯ ಸಂಘ, ಸಹಾರ ಹ್ಯಾಂಡಿಕ್ರಾಫ್ಟ್, ಹ್ಯಾಂಡ್‌ಲೂಮ್ ಅಸೋಸಿಯೇಷನ್:** ಸಹಾರ ಆರ್ಟ್ ಅಂಡ್ ಕ್ರಾಫ್ಟ್ ಶಾಪಿಂಗ್ ಫೆಸ್ಟಿವಲ್–2024 ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಹಳೇ ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಫೌಂಡೇಷನ್ ಮತ್ತು ಬಿವಿ.ಎ. ವಿದ್ಯಾರ್ಥಿಗಳಿಂದ ಮಂಡಲ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀಕಲಾನಿಕೇತನ ಸ್ಕೂಲ್ ಆಫ್ ಆರ್ಟ್, ವಿಜಯನಗರ, ಬೆಳಗ್ಗೆ 10 ರಿಂದ.

■ **ಪ್ರವಾಸಿ ವಾಹನ ಚಾಲಕರ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್.ನಾಗರಾಜು, ಸ್ಥಳ: ಜಿಲ್ಲಾ ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ :** ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ, ಸಂಜೆ 7.30ಕ್ಕೆ ಹೊರೆಯಲ್ಲಿ ವರಪೂಜಾ ಮಹೋತ್ಸವ, ಸ್ಥಳ: ಕೋಟೆ ತ್ರಿನೇಶ್ವರ ದೇವಸ್ಥಾನ, ಅರಮನೆ ಆವರಣ, ಸಂಜೆ 7 ಗಂಟೆಗೆ.

■ **ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ :** 10ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಬೆಳಗ್ಗೆ 9 ಗಂಟೆಗೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಮೂರ್ತಿ ಮಂಗಳವಾದ್ಯದೊಂದಿಗೆ ಮೆರವಣಿಗೆ, ಶ್ರೀ ಚಾಮುಂಡೇಶ್ವರಿ ಅಮ್ಮನವರ ಮೂರ್ತಿ ಪ್ರತಿಷ್ಠಾಪನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 7ಕ್ಕೆ ವೇದಿಕೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಶ್ರೀಮತಿ ಸುನಂದ ಪಾಲನೇತ್ರ, ಭಾವಸಾರ ಕ್ಷತ್ರಿಯ ಮಂಡಳಿ ಅಧ್ಯಕ್ಷ ಶಿವಾಜಿರಾವ್ ರಂಪೂರೆ, ವಿಠ್ಠಲ ರುಕ್ಮಿಣಿ ಕನ್ವೆನ್ಷನ್ ಹಾಲ್ ಅಧ್ಯಕ್ಷ ಜಯರಾಮ್‌ರಾವ್ ಲಾಳಿಗೆ, ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಅಧ್ಯಕ್ಷ ಬಿ.ಟಿ. ಮಂಜುನಾಥ್ ಬಕರೆ, ಸಮಿತಿ ವತಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಂಜೆ 7.30ಕ್ಕೆ ಆರತಿ ಕಾರ್ಯಕ್ರಮ, ಸ್ಥಳ: ಸೇವಾ ಸಮಿತಿ ಆವರಣ, ಕುವೆಂಪುನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 "ಶ್ರದ್ಧೆಯ ಶಿಲ್ಪ" –ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು., 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಗೀತಾ. ವೈ ಪುಟ್ಟಿ, ವ್ಯಾಖ್ಯಾನ : ಡಾ.ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಅ.ನ.ಕೃ ಅವರ "ಉದಯರಾಗ" ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ : ಉಮೇಶ್ ಎಸ್.ಎಸ್., 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎನ್.ವಿ. ಸತ್ಯನಾರಾಯಣ–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ– ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಚೈತ್ರಿಕಾ ಹಾಗೂ ಕಾರ್ತಿಕ್

ಮಧ್ಯಾಹ್ನ: 12.05 ವನಿತಾ ವಿಹಾರ : ಹೀಗಿದೆ ನೋಡಿ ನಮ್ ಜೋಡಿ, ಭಾಗವಹಿಸುವವರು: ಡಾ. ಧರಣಿ ದೇವಿ ಮಾಲಗತ್ತಿ ಹಾಗೂ ಡಾ. ಅರವಿಂದ ಮಾಲಗತ್ತಿ, ಪ್ರಸ್ತುತಿ : ಅಬ್ದುಲ್ ರಶೀದ್, 12.30 ದೇವರನಾಮ–ಹೆಚ್. ವಿ. ಪದ್ಮಿನಿ, 12.45 ಆಕಾಶವಾಣಿ ಜಾತ್ರಾ ವಿಶೇಷ: ಮೈಸೂರು ಜಿಲ್ಲೆ, ತಿರುಮಕೂಡಲು ನರಸೀಪುರ ತಾಲೂಕು ತಲಕಾಡು ಹೋಬಳಿ ಮುಡುಕುತೊರೆ ಜಾತ್ರಾ ವಿಶೇಷ ಹಂಚಿಕೊಳ್ಳುತ್ತಾರೆ, ಜಾನಪದ ವಿದ್ವಾಂಸ ಡಾ. ಕೃಷ್ಣಮೂರ್ತಿ ಹನೂರು ಹಾಗೂ ನೀಲಗಾರ ಗಾಯಕ ಡಾ. ಮೈಸೂರು ಗುರುರಾಜ್, ಪ್ರಸ್ತುತಿ : ಅಬ್ದುಲ್ ರಶೀದ್, 1.20 ಭಾವಗೀತೆಗಳು–ವಾಸುದೇವ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಸ್. ರಾಕೇಶ್–ಕೊಳಲು ವಾದನ, 4.00 ಕಥಾ ಕಾಲಕ್ಷೇಪ–ಭೀಷ್ಮಾಚಾರ್ಯ, ಪ್ರಸ್ತುತಿ: ಸಂತ ಕೇಶವದಾಸರು, 6.50 ಕೃಷಿರಂಗ: ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಗುಣಮಟ್ಟದ ಕಚ್ಚಾ ರೇಷ್ಮೆ ಉತ್ಪಾದನೆಗಾಗಿ ಸುಧಾರಿತ ಕ್ರಾಸ್ ಬ್ರೀಡ್ ತಳಿಗಳು ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಶಿವಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ. ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 8.00 ಕ್ರೀಡಾಲೋಕ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಚಿಟ್ಟಿ ಬಾಬು–ವೀಣಾವಾದನ, 10.00 ಚೈತ್ರವನ ಲಕ್ಷ್ಮೀಶನ ಜೈಮಿನಿ ಭಾರತ ಕಾವ್ಯದ ಸಮಗ್ರ ವಾಚನ ವ್ಯಾಖ್ಯಾನ, ವಾಚನ–ಹೆಚ್.ಎಲ್.ಶ್ರೀಕಂಠ, ವ್ಯಾಖ್ಯಾನ : ಹೆಚ್.ಎಸ್.ಗೋಪಾಲ್, ಪ್ರಸ್ತುತಿ: ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

ನಂಜನಗೂಡಿನಲ್ಲಿಂದು

■ **ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ :** ಶ್ರೀ ಗಿರಿಜಾ ಕಲ್ಯಾಣ, ವರಪೂಜಾ ಮಹೋತ್ಸವ, ಸಂಜೆ 5ರಿಂದ ಸ್ಯಾಕ್ಸೋಫೋನ್, ಸಂಜೆ 6ರಿಂದ ನಾದಸ್ವರ ವಾದನ, ಸ್ಥಳ: ಶ್ರೀಕಂಠೇಶ್ವರ ದೇವಾಲಯ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜುಲೈ 9 ಮಂಗಳವಾರ 2024

45

ಸಂಪುಟ: 45 | ಸಂಚಿಕೆ: 84 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ರಾಜಕಾರಣಿಗಳು, ಅಧಿಕಾರಿಗಳು ಜನಸೇವಕರು...

■ ಜಿಲ್ಲಾಧಿಕಾರಿಗಳು ಮಹಾರಾಜರು ಎಂಬ ಭಾವನೆ ಇದ್ದರೆ ಜನಸೇವೆ ಸಾಧ್ಯವಿಲ್ಲ; ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು ■ ಡಿಸಿಗಳು, ಸಿಇಓಗಳು, ಉಸ್ತುವಾರಿ ಕಾರ್ಯದರ್ಶಿಗಳ ಸಭೆ ■ ಆಡಳಿತ ನಿರೀಕ್ಷಿತ ಮಟ್ಟದಲ್ಲಿ ನಡೆಯುತ್ತಿಲ್ಲ; ಅಸಮಾಧಾನ ■ ಈಗ ಕಾರ್ಯಾಂಗ, ಶಾಸಕಾಂಗ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ: ಬೇಸರ ■ 40 ವರ್ಷದಿಂದ ಸಚಿವನಾಗಿ ನೋಡುತ್ತಿದ್ದೇನೆ; ರಾಜಕಾರಣಿ, ಅಧಿಕಾರಿಗಳಲ್ಲಿ ಆಡಳಿತ ಪರಿಣಾಮಕಾರಿಯಾಗಿಲ್ಲ

ಬೆಂಗಳೂರು, ಜು. 8(ಕೆಎಂಶಿ)– ನಿರೀಕ್ಷಿತ ಮಟ್ಟದಲ್ಲಿ ಆಡಳಿತ ಪರಿಣಾಮಕಾರಿಯಾಗಿ ನಡೆಯುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಇಂದಿಲ್ಲಿ ಒಪ್ಪಿಕೊಂಡಿದ್ದಾರೆ. ಅಂದು ಭ್ರಷ್ಟಾಚಾರ ಹೇಗಿತ್ತು, ಇಂದು ಹೇಗಿದೆ ಎಂದು ನೋಡಿದಾಗ ಕಾರ್ಯಾಂಗ ಮತ್ತು ಶಾಸಕಾಂಗ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದು ಕಂಡುಬರುತ್ತದೆ ಎಂದಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಜಿಲ್ಲಾಧಿಕಾರಿ ಮತ್ತು ಮುಖ್ಯಕಾರ್ಯ ನಿರ್ವಹಣಾಧಿಕಾರಿ ಮತ್ತು ಉಸ್ತುವಾರಿ ಕಾರ್ಯದರ್ಶಿಗಳ ಸಭೆಯಲ್ಲಿ ಮಾತನಾಡಿ, ಜಿಲ್ಲಾಧಿಕಾರಿಗಳು ಮಹಾರಾಜರು ಎನ್ನುವ ಭಾವನೆ ಇದ್ದರೆ ಜನಸೇವೆ ಸಾಧ್ಯವಿಲ್ಲ ಎಂದರು.

ರಾಜಕಾರಣಿಗಳು ಮತ್ತು ಅಧಿಕಾರಿಗಳು ಜನಸೇವಕರು ಎನ್ನುವುದನ್ನು ನೆನಪಿನಲ್ಲಿಟ್ಟುಕೊಂಡು ಜನರ ಕೆಲಸ ಮಾಡಿ ಎಂದು ಕಿವಿಮಾತು ಹೇಳಿದರು. ನಾವು ಅನೇಕ ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರೂ ಅವು ಅನುಷ್ಠಾನಕ್ಕೆ ಬರುತ್ತಿಲ್ಲ ಎಂದರೆ ಏನರ್ಥ, ನಾವು ಪರಿಣಾಮಕಾರಿಯಾಗಿ ಆಡಳಿತ ನಡೆಸುತ್ತಿಲ್ಲ ಎಂಬರ್ಥ ಅಲ್ಲವೇ ಎಂದು ಪ್ರಶ್ನಿಸಿದರು. ನಾನು ಮಂತ್ರಿಯಾಗಿ 40 ವರ್ಷಗಳಾದವು, ಈ ನಾಲ್ಕು ದಶಕಗಳಿಂದ ಅಧಿಕಾರಿಗಳ ಕಾರ್ಯವೈಖರಿಯನ್ನು ನೋಡುತ್ತಿದ್ದೇನೆ. ರಾಜಕಾರಣಿಗಳು, ಅಧಿಕಾರಿಗಳು ಅನುಭವದ ಮೇಲೆ ಆಡಳಿತ ಹೆಚ್ಚು ಪರಿಣಾಮಕಾರಿಯಾಗಬೇಕು. ಆದರೆ, ನಿರೀಕ್ಷಿತ ಮಟ್ಟದಲ್ಲಿ ಪರಿಣಾಮಕಾರಿಯಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಮನ್ವಯದಿಂದ ಕಾರ್ಯ ನಿರ್ವಹಿಸಿ: ಸಭೆ ಕರೆದಿರುವುದು ನಿಮ್ಮನ್ನು ಟೀಕೆ ಮಾಡಲು ಅಲ್ಲ, ಜಿಲ್ಲೆಯಲ್ಲಿ ಅಭಿವೃದ್ಧಿ ● 9ನೇ ಪುಟಕ್ಕೆ



ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಜಿಲ್ಲಾಧಿಕಾರಿ, ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ಉಸ್ತುವಾರಿ ಕಾರ್ಯದರ್ಶಿಗಳ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇತರರಿದ್ದಾರೆ.

ಡೆಂಗ್ಯೂ ನಿಯಂತ್ರಣಕ್ಕೆ ಸಮರೋಪಾದಿ ಕೆಲಸ ಮಾಡಿ


ರಾಜ್ಯದಲ್ಲಿ ಡೆಂಗ್ಯೂ ನಿಯಂತ್ರಣಕ್ಕೆ ಸಮರೋಪಾದಿಯಲ್ಲಿ ಕೆಲಸ ಮಾಡಿ. ಡಿಸಿ, ಡಿಎಚ್‌ಓಗಳು ತಾಲೂಕು ಮಟ್ಟದ ಅಧಿಕಾರಿಗಳ ಜೊತೆ ಸಭೆ ನಡೆಸಿ ಕ್ಷಿಪ್ರವಾಗಿ ಕಾರ್ಯಪ್ರವೃತ್ತರಾಗಿ. ಇದುವರೆಗೆ ಉದಾಸೀನ, ನಿರ್ಲಕ್ಷ್ಯ, ಕರ್ತವ್ಯಲೋಪಕ್ಕೆ ಕೆಳಹಂತದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುತ್ತಿತ್ತು. ಇನ್ನು ಮುಂದೆ ಹಿರಿಯ ಅಧಿಕಾರಿಗಳನ್ನೂ ಹೊಣೆ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಕೆಲವು ಜಿಲ್ಲೆಗಳಲ್ಲಿ ಕುಸಿತ ಕಂಡಿದೆ. ಮುಖ್ಯಮಂತ್ರಿಗಳು, ಈ ಬಾರಿ ಪರೀಕ್ಷೆಯಲ್ಲಿ ನಕಲು ಮಾಡುವುದನ್ನು ಸಂಪೂರ್ಣ ತಡೆಗಟ್ಟಿರುವುದು ಶ್ಲಾಘನೀಯ. ಈ ಕಾರಣಕ್ಕೆ ಫಲಿತಾಂಶ ಕುಸಿತ ಆಯಿತು ಎನ್ನುವ ಸಮರ್ಥನೆ ಸರಿಯಲ್ಲ ಎಂದರು.

ಮೈಸೂರು ಜಿಲ್ಲೆಯಲ್ಲಿ 14 ಸಕ್ರಿಯ ಡೆಂಗ್ಯೂ ಪ್ರಕರಣಗಳು

ಮಾರ್ಟಾಲಿಟಿ ರೇಟ್ ಕಡಿಮೆ; ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ ಮಾಹಿತಿ



ಕುಮಾರಸ್ವಾಮಿ



ಮೈಸೂರು, ಜು.8(ಪಿಎಂ)– ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಈ ವರ್ಷದ ಜನವರಿಯಿಂದ ಈವರೆಗೆ ಒಟ್ಟು 496 ಮಂದಿಯಲ್ಲಿ ಡೆಂಗ್ಯೂ ಪಾಸಿಟಿವ್ ಕಂಡು ಬಂದಿದ್ದು, ಪ್ರಸ್ತುತ 14 ಸಕ್ರಿಯ ಪ್ರಕರಣಗಳು ಜಿಲ್ಲೆಯಲ್ಲಿವೆ (ಸೋಮವಾರದ ಮಧ್ಯಾಹ್ನ ವೇಳೆಗೆ). ಜಿಲ್ಲೆಯಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಿದ್ದರೂ ಮರಣ ಪ್ರಮಾಣ (ಮಾರ್ಟಾಲಿಟಿ ರೇಟ್) ಕಡಿಮೆ ಇದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ತಿಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಕಳೆದ ವರ್ಷಕ್ಕೆ ಹೋಲಿಸಿದರೆ ಜಿಲ್ಲೆಯಲ್ಲಿ ಈ ವರ್ಷ ಶೇ.34ರಷ್ಟು ಪರೀಕ್ಷೆಯ ಪ್ರಮಾಣ ಹೆಚ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಿದ್ದರೂ ಜಿಲ್ಲೆಯಲ್ಲಿ ಮಾರ್ಟಾಲಿಟಿ ರೇಟ್ ಕಡಿಮೆ ಇದೆ. ಎಲ್ಲಾ ಸೋಂಕಿತರು 2ರಿಂದ 3 ದಿನಗಳಲ್ಲಿ ಗುಣಮುಖಗೊಳ್ಳುತ್ತಿದ್ದಾರೆ ಎಂದರು. ● 9ನೇ ಪುಟಕ್ಕೆ

ಅನರ್ಹ ಬಿಪಿಎಲ್ ಕಾರ್ಡ್‌ಗಳ ಅರ್ಹರಿಗೆ ಕಲ್ಪಿಸಿ!

ಬೆಂಗಳೂರು, ಜು. 8(ಕೆಎಂಶಿ)– ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಿ ಅರ್ಹರಿಗೆ ನೀಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಧಿಕಾರಿಗಳಿಗೆ ಆದೇಶ ಮಾಡಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಉಸ್ತುವಾರಿ ಕಾರ್ಯದರ್ಶಿಗಳ ಸಭೆಯಲ್ಲಿ ಈ ಸೂಚನೆ ನೀಡಿದ್ದಾರೆ.

ಶೇಕಡ 80ರಷ್ಟು ಕುಟುಂಬಗಳು ಬಿಪಿಎಲ್ ಕಾರ್ಡ್ ಹೊಂದಿವೆ, ತಮಿಳುನಾಡಿನಲ್ಲಿ ಶೇಕಡ 40ರಷ್ಟಿದೆ, ನೀತಿ ಆಯೋಗದ ಪ್ರಕಾರ ರಾಜ್ಯದಲ್ಲಿ ಪ್ರಸ್ತುತ ಬಡತನ ರೇಖೆಗಿಂತ ಕೆಳಗಿರುವವರ ಪ್ರಮಾಣ ಶೇಕಡ 5.67 ಇರಬೇಕು. ಆದರೆ, ರಾಜ್ಯದಲ್ಲಿ 1.27 ಕೋಟಿ ● 9ನೇ ಪುಟಕ್ಕೆ

ಕಲುಷಿತ ನೀರಿನಿಂದ ಜನರಿಗೆ ತೊಂದರೆಯಾದರೆ ಸಂಬಂಧಿಸಿದ ಅಧಿಕಾರಿಯೇ ಹೊಣೆ

15 ದಿನಕ್ಕೊಮ್ಮೆ ಜಲಮೂಲಗಳ ಪರೀಕ್ಷಿಸುತ್ತಾ ಇರಬೇಕು: ಸಿಎಂ



ಬೆಂಗಳೂರು, ಜು. 8(ಕೆಎಂಶಿ)– ಕಲುಷಿತ ನೀರು ಪೂರೈಕೆಯಿಂದ ಜನತೆಗೆ ತೊಂದರೆ ಉಂಟಾದರೆ ಸಂಬಂಧಪಟ್ಟ ಅಧಿಕಾರಿಯನ್ನು ನೇರ ಜವಾಬ್ದಾರಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಎಚ್ಚರಿಸಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಉಸ್ತುವಾರಿ ಕಾರ್ಯದರ್ಶಿಗಳ ಸಭೆಯಲ್ಲಿ ಮಾತನಾಡಿದ ಅವರು, ತುಕ್ಕು ಹಿಡಿದ ಹಳೆಯ ಪೈಪ್ ಬದಲಾಯಿಸಬೇಕು, ಪ್ರತಿ 15 ದಿನಗಳಿಗೊಮ್ಮೆ ನೀರಿನ ಮೂಲ ಹಾಗೂ ವಿತರಣಾ ಬಿಂದುವಿನಲ್ಲಿನ ನೀರಿನ ಗುಣಮಟ್ಟವನ್ನು ಪ್ರಯೋಗಾಲಯದಲ್ಲಿ ಕಡ್ಡಾಯವಾಗಿ ಪರೀಕ್ಷೆ ಮಾಡಬೇಕು, ನೀರಿನ ಗುಣಮಟ್ಟ ಪರೀಕ್ಷೆಯಲ್ಲಿ ವಿಫಲವಾದರೆ ಅಂತಹ ಕಡೆಗಳಿಗೆ ಹೊಸ ಮೂಲದಿಂದ ನೀರು ಪೂರೈಕೆ ಮಾಡಬೇಕು ಎಂದರು. ಎಲ್ಲಾ ಜಿಲ್ಲೆಗಳಲ್ಲಿ ಆದಷ್ಟು ಬೇಗ ಘನ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಆರಂಭಿಸಬೇಕು, ಇನ್ನೂ 55 ಕಡೆಗಳಲ್ಲಿ ಘನತ್ಯಾಜ್ಯ ಘಟಕಗಳ ನಿರ್ಮಾಣ ಪ್ರಕ್ರಿಯೆ ನಡೆಯುತ್ತಿದ್ದು, ● 6ನೇ ಪುಟಕ್ಕೆ

ಸಿದ್ದರಾಮಯ್ಯರ ಪತ್ನಿ ಪಾರ್ವತಿಯವರಿಗೆ ಮುಡಾದಿಂದ ನಷ್ಟವೇ ಹೊರತು ಲಾಭವಾಗಿಲ್ಲ

ಪ್ರಕರಣ ಸಂಬಂಧ ಶಾಸಕ ಕೆ.ಹರೀಶ್‌ಗೌಡರ ವಿವರಣೆ

- ನಿಯಮಾನುಸಾರ ಪಾರ್ವತಿಯವರು ನಿವೇಶನ ಪಡೆದಿದ್ದಾರೆ
- ಕೆಸರೆಯಲ್ಲಿ ಲಭ್ಯವಿಲ್ಲದ ಕಾರಣ ವಿಜಯನಗರದಲ್ಲಿ ನಿವೇಶನ ಪಡೆದಿದ್ದಾರೆ
- ಶೇಕಡ 50:50 ಅನುಪಾತದ ಬಗ್ಗೆ ಮುಡಾ ಸಭೆಯಲ್ಲಿ ಚರ್ಚೆ
- ಸಭೆ ನಿರ್ಣಯವಿಲ್ಲದೆ ಮಂಜೂರಾತಿ ಬೇಡವೆಂದು ತೀರ್ಮಾನ




ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಶಾಸಕ ಕೆ.ಹರೀಶ್‌ಗೌಡ ಮಾತನಾಡಿದರು. ಮುಡಾ ಅಧ್ಯಕ್ಷ ಕೆ.ಮರೀಗೌಡ, ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ಡಾ.ತಿಮ್ಮಯ್ಯ, ಮಾಜಿ ಮೇಯರ್ ಪುಷ್ಪಲತಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜು.8(ಬಿಎಲ್‌ಯು)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಶೇಕಡ 50:50 ಅನುಪಾತದ ನಿವೇಶನ ಮಂಜೂರಾತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಶ್ರೀಮತಿ ಪಾರ್ವತಿಯವರಿಗೆ ಲಾಭದ ಬದಲು ನಷ್ಟವಾಗಿದೆ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಸ್ಪಷ್ಟಪಡಿಸಿದ್ದಾರೆ. ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾರ್ವತಿಯವರಿಗೆ ನಷ್ಟವಾಗಿದ್ದರೂ ನಿವೇಶನ ಮಂಜೂರಾತಿಯಲ್ಲಿ ಲಾಭ ಮಾಡಿಕೊಂಡಿದ್ದಾರೆ ಎಂದು ಸಿದ್ದರಾಮಯ್ಯನವರ ವಿರುದ್ಧ ಆಧಾರ ರಹಿತ ಆರೋಪ ಮಾಡಲಾಗುತ್ತಿದೆ.

ಕೆಸರೆ ಸರ್ವೆ ನಂಬರ್ 464 ರಲ್ಲಿನ 3.16 ಎಕರೆ ಜಮೀನನ್ನು ಪಾರ್ವತಿಯವರ ಅಣ್ಣ ಮಲ್ಲಿಕಾರ್ಜುನ ಸ್ವಾಮಿ ಖರೀದಿಸಿದ್ದರು. ತರುವಾಯ ಪಾರ್ವತಿಯವರಿಗೆ ದಾನವಾಗಿ ಆ ಜಮೀನು ● 6ನೇ ಪುಟಕ್ಕೆ

ಎಂಎಲ್‌ಸಿ ವಿಶ್ವನಾಥ್ ಮುಡಾದ 'ದುಬಾರಿ' ಫಲಾನುಭವಿ!

ಬದಲಿ ನಿವೇಶನ ಪಡೆದ ಬಗ್ಗೆ ದಾಖಲಾತಿ ಸಮೇತ ಮುಡಾ ಅಧ್ಯಕ್ಷ ಕೆ.ಮರಿಗೌಡರ ಮಾಹಿತಿ



ವಿಶ್ವನಾಥ್

ಮೈಸೂರು, ಜು.8(ಬಿಎಲ್‌ಯು)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಶ್ರೀಮತಿ ಪಾರ್ವತಿ ಅವರು ಅಕ್ರಮವಾಗಿ ನಿವೇಶನ ಪಡೆದಿದ್ದಾರೆಂದು ಆರೋಪ ಮಾಡಿದ್ದ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅವರಿಗೆ ಈಗ ಬದಲಿ ನಿವೇಶನ ಪಡೆದ ಆರೋಪ ಸುತ್ತಿಕೊಂಡಿದೆ.

ನಗರದ ಜಲದರ್ಶಿನಿ ಅತಿಥಿಗೃಹದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಈ ಸಂಬಂಧ ದಾಖಲಾತಿ ಸಮೇತ ಆಪಾದನೆ ಮಾಡಿದ ಮುಡಾ ಅಧ್ಯಕ್ಷ ಮರೀಗೌಡ, ಮುಡಾ ಅಕ್ರಮಗಳ ಬಗ್ಗೆ ಮಾತನಾಡುವ ವಿಶ್ವನಾಥ್ ಅವರೇ ಬದಲಿ ನಿವೇಶನವನ್ನು ಪಡೆದಿದ್ದು, ಮತ್ತೊಬ್ಬರ ಬಗ್ಗೆ ಮಾತನಾಡುವ ನೈತಿಕತೆ ಕಳೆದುಕೊಂಡಿದ್ದಾರೆ ಎಂದು ಟೀಕಿಸಿದರು. ಮೈಸೂರಿನ ದೇವನೂರು 3ನೇ ಹಂತದಲ್ಲಿ ವಿಶ್ವನಾಥ್ ಪತ್ನಿ ಶಾಂತಮ್ಮ ಅವರಿಗೆ 40x60 ಅಳತೆಯ 2525ನೇ ಸಂಖ್ಯೆಯ ನಿವೇಶನ ಮಂಜೂರಾಗಿತ್ತು. ಆದರೆ ಆ ನಿವೇಶನದ ಮೌಲ್ಯ ಕಡಿಮೆ ಇರುವ ಕಾರಣ ರಿಂಗ್ ರಸ್ತೆಯ ಆರ್‌ಟಿಓ ಕಚೇರಿ ● 6ನೇ ಪುಟಕ್ಕೆ

ಮುಡಾದಲ್ಲಿ ನೂರಾರು ಮೂಲ ಕಡತಗಳೇ ನಾಪತ್ತೆ!



ಮುಡಾ ಕಚೇರಿ ರೆಕಾರ್ಡ್ ರೂಂ

ತನಿಖಾಧಿಕಾರಿಗಳ ಸೂಚನೆಯಂತೆ ರೆಕಾರ್ಡ್ ರೂಂ ಜಾಲಾಡುತ್ತಿರುವ ಸಿಬ್ಬಂದಿ

ಮೈಸೂರು, ಜು. 8(ಆರ್‌ಕೆ)–ನಿವೇಶನಗಳ ಹಂಚಿಕೆಯಲ್ಲಿ ಭಾರಿ ಪ್ರಮಾಣದ ಅವ್ಯವಹಾರ ಬೆಳಕಿಗೆ ಬರುತ್ತಿದ್ದಂತೆಯೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನೂರಾರು ಮೂಲ ಕಡತಗಳೇ ನಾಪತ್ತೆಯಾಗಿರುವ ಆಘಾತಕಾರಿ ವಿಷಯ ಕೇಳಿಬರುತ್ತಿದೆ. ಹಗರಣ ಸಂಬಂಧ ತನಿಖೆ ಆರಂಭಿಸಿರುವ ಹಿರಿಯ ಐಎಎಸ್ ಅಧಿಕಾರಿ ವೆಂಕಟಾಚಲಪತಿ ನೇತೃತ್ವದ ನಾಲ್ವರು ಅಧಿಕಾರಿಗಳ ಒಳಗೊಂಡ ತಂಡ, 50:50 ಅನುಪಾತದಡಿ ಹಂಚಿಕೆ ಮಾಡಿರುವ ನಿವೇಶನಗಳ ಕಡತಗಳ ಕೇಳುತ್ತಿದ್ದಾರೆ. ಆಯುಕ್ತರು ಕೂಡಲೇ ಅವುಗಳ ಒದಗಿಸುವಂತೆ ಹೇಳಿದರೆ, ಅಂತಹ ಯಾವ ಮೂಲ ದಾಖಲೆಗಳೂ ಸಿಗುತ್ತಿಲ್ಲ ಎಂದು ಹುಡುಕಿ ಹುಡುಕಿ ಸುಸ್ತಾದ ಸಿಬ್ಬಂದಿ ತಮ್ಮ ಅಸಹಾಯಕತೆ ವ್ಯಕ್ತಪಡಿಸುತ್ತಿದ್ದಾರೆ.

ಲಭ್ಯವಿರುವ ಕಡತಗಳಲ್ಲಿ ಅಧೀನ ಅಧಿಕಾರಿಗಳು ಬರೆದಿರುವ ನಕಾರಾತ್ಮಕ ಶಿಫಾರಸುಗಳುಳ್ಳ (ನೆಗೆಟಿವ್ ಒಪಿನಿಯನ್) ಹಾಳೆಗಳನ್ನೇ ಕಿತ್ತೆಸೆಯಲಾಗಿದ್ದು, ನಿವೇಶನ ನೀಡಬಹುದು ಎಂದಿರುವ ಕಡತಗಳ ಹಾಳೆಗಳನ್ನು ಮಾತ್ರ ಉಳಿಸಲಾಗಿದೆ ಎಂದು ಸಿಬ್ಬಂದಿ, ತನಿಖಾಧಿಕಾರಿಗಳಿಗೆ ವಿವರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ರೆಕಾರ್ಡ್ ರೂಂ (ಅಭಿಲೇಖಾಲಯ), ಸೈಟ್ ಸೆಕ್ಷನ್, ಎಲ್ಲಾ 8 ವಲಯ ಕಚೇರಿಗಳು, ವಿಶೇಷ ತಹಸೀಲ್ದಾರ್ ಕಚೇರಿಗಳು, ತಾಂತ್ರಿಕ ಶಾಖೆ, ವಿಶೇಷ ಭೂ ಸ್ವಾಧೀನಾಧಿಕಾರಿ ಕಚೇರಿ, ಕಾರ್ಯದರ್ಶಿ ಕಚೇರಿ, ● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹುಡುಗಿ : ಒಂದು ಕವನ ಹೇಳು ಪ್ಲೀಸ್...
ಹುಡುಗ : ನಿನ್ನ ನೋಡಿದಾಗ ನಾ ನನ್ನ ಮರೆತೆ...
ಹುಡುಗಿ : ವಾಹ್... ಸೂಪರ್... ಆಮೇಲೆ?
ಹುಡುಗ : ನಿನ್ನ ಫ್ರೆಂಡ್ ನನ್ನ ನೋಡಿದ್ಮೇಲೆ ನಿನ್ನನ್ನೇ ಮರೆತೆ!

ಮೈಸೂರು ಮಿತ್ರ
ಮಂಗಳವಾರ, 9 ಜುಲೈ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಬೇಕಾದವರೆಲ್ಲಾ ಕೈಬಿಟ್ಟಾಗ, ಧೈರ್ಯ ಕಳೆದುಕೊಂಡಾಗ, ಸೋಲುತ್ತಿದ್ದೇವೆ ಎಂದು ಭಯ ಪಟ್ಟಾಗ, ಯಾವುದೇ ದಾರಿ ಕಾಣಿಸದೆ ಇದ್ದಾಗ, ನಮ್ಮನ್ನು ಗೆಲುವಿನ ಕಡೆಗೆ ನಡೆಸುವ ಮತ್ತು ಧೈರ್ಯ ತುಂಬುವ ಒಂದೇ ಒಂದು ಮಾತು 'ರಾಯರಿದ್ದಾರೆ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿನ್ನಲ್ಲಿ ನೀ ಹುಡುಕು, ಅರಿಷಡ್ವರ್ಗಗಳ ಹೊರ ಹಾಕು.

ನಿಮ್ಮ ಪತ್ರಗಳು

■ ಮೈಸೂರು ನಗರಪಾಲಿಕೆಯ ಸಂಬಂಧಿಸಿದ ಅಧಿಕಾರಿಯನ್ನೇ ಇದಕ್ಕೆ ಹೊಣೆ ಮಾಡಬೇಕು!



ಮಾನ್ಯರೇ,

ಯಾದವಗಿರಿ ಅಂಡರ್ ಬ್ರಿಡ್ಜ್ ಕಡೆಯಿಂದ ಬಂದು ಮೈಸೂರಿನ ಹೈವೇ ಸರ್ಕಲ್ ಪ್ರವೇಶಿಸುವ ಜಾಗದಲ್ಲಿ ಯಾವುದೋ ಕೇಬಲ್ ಹೂಳುವ ಸಲುವಾಗಿ ಹಳ್ಳ ತೆಗೆದು, ಅದನ್ನು ಸರಿಯಾಗಿ ಮುಚ್ಚದೇ, ಅಲ್ಲೀಗ ಕೊರಕಲು ಉಂಟಾಗಿದೆ. ಸುಮಾರು ಮೂರ್ನಾಲ್ಕು ತಿಂಗಳಿಂದ ಈ ಕೊರಕಲು ದಾಟುವಲ್ಲಿ ಹಲವು ದ್ವಿಚಕ್ರ ವಾಹನ ಸವಾರರು ತೀವ್ರ ಪ್ರಯಾಸಪಡುತ್ತಿದ್ದಾರೆ. ಎಲ್ಲಾ ರೀತಿಯ ವಾಹನಗಳು ಇದನ್ನು ದಾಟುವಾಗ ಹರಸಾಹಸ ಪಡಬೇಕಾಗಿದೆ. ಸೋಮವಾರ ಓರ್ವ ತಾಯಿ ಸ್ಕೂಟರ್‌ನಲ್ಲಿ ತನ್ನ ಮಗು ಕೂರಿಸಿಕೊಂಡು ಹೋಗುತ್ತಿದ್ದು, ಈ ಕೊರಕಲು ದಾಟುವ ವೇಳೆ ಆಯತಪ್ಪಿ ಕೆಳಗೆ ಬೀಳುವ ಹಂತದಲ್ಲಿ ಅದೃಷ್ಟವಶಾತ್ ವಾರೆಯಾದರೂ ಸಾವರಿಸಿಕೊಂಡು ನಿಂತರು. ಇಲ್ಲದಿದ್ದರೆ ತಾಯಿ-ಮಗು ಬಿದ್ದು ಅನಾಹುತವೇ ಸಂಭವಿಸುತ್ತಿತ್ತು. ಇದಕ್ಕೆ ಯಾರು ಹೊಣೆ?

–ಶಂಕರ್, ಯಾದವಗಿರಿ, ಮೈಸೂರು.

ಟಿಪ್ಪಣಿ: ಈ ಕೊರಕಲು ಸಂಬಂಧ, ಇದರಿಂದ ಜನರಿಗೆ ಆಗುತ್ತಿರುವ ಸಮಸ್ಯೆ ಬಗ್ಗೆ 'ಮೈಸೂರು ಮಿತ್ರ' ಜೂನ್ 25ರಂದೇ ಪಾಲಿಕೆ ಇಂಜಿನಿಯರ್ ಸಿಂಧು ಎಂಬುವವರ ಗಮನ ಸೆಳೆದಾಗ 'ಆಯ್ತು... ಮಾಡೋಣ... ಹೇಳುತ್ತೇನೆ... ಆಯ್ತು... ಆಯ್ತು...' ಎಂದು ಹೇಳಿದ್ದಷ್ಟೆ. ಬಹುಶಃ ಈ ಮಾರ್ಗದಲ್ಲಿ ಅವರು ನಿತ್ಯವೂ ಸಂಚರಿಸುವಂತಿದ್ದರೆ ಅವರಿಗೆ ಈ ಸಮಸ್ಯೆ ಮನವರಿಕೆ ಆಗುತ್ತಿತ್ತು. ಮೈಸೂರು ಸುರಕ್ಷಾ ನಗರಿ ಕನಸು ನನಸಾಗುವುದೇ!

■ ಮುಡಾ ಕಾರಾಗೃಹವಾಗಲಿ!

ಮಾನ್ಯರೆ,

"ಮುಡಾದಲ್ಲಿ ಹಗರಣ ಮಾಮೂಲಿ..." ಎಂದಿದ್ದಾರೆ ಶಾಸಕ ಎಸ್.ಟಿ.ಸೋಮಶೇಖರ್! (ಮೈಸೂರು ಮಿತ್ರ 08.07.2024) ಶಾಸಕರ ಈ ಅಮೃತವಾಣಿಯನ್ನು ಕೇಳಿದ ತಕ್ಷಣ "ಮಠ" ಚಿತ್ರದ ಒಂದು ಗೀತೆಯು ನೆನಪಾಯಿತು!

'ಕಳ್ರನ್ನೆಲ್ಲ ಜೈಲಿಗೆ ಹಾಕೋದಾದ್ರೆ... ಊರಿಗೇ ಬೇಲಿ ಹಾಕಬೇಕಲ್ವಾ?'

ಹೌದು. ಮುಡಾ ಹಗರಣದ ಕಳ್ರನ್ನೆಲ್ಲಾ ಜೈಲಿಗೆ ಹಾಕೋದಾದ್ರೆ ಇಡೀ ಮುಡಾ ಕಚೇರಿಯನ್ನೇ ಜೈಲನ್ನಾಗಿ ಪರಿವರ್ತಿಸಬೇಕಾದೀತು!

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

■ ಅಪಾಯಕ್ಕೆ ಆಹ್ವಾನ ನೀಡುತ್ತಿರುವ ವಿದ್ಯುತ್ ಕಂಬ



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಅರೇನಹಳ್ಳಿ ಮತ್ತು ದೊರೆಕೆರೆ ನೀಲಂಗಾಲ ಗ್ರಾಮಗಳ ನಡುವಿನ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಕೊಣದ ಪಕ್ಕದಲ್ಲಿರುವ ಈ ವಿದ್ಯುತ್ ಕಂಬವು ಸಂಪೂರ್ಣ ಬಾಗಿ ಅಪಾಯಕ್ಕೆ ಆಹ್ವಾನ ನೀಡುತ್ತಿದೆ. ಇಲ್ಲಿ ನಿತ್ಯವೂ ಸಾಕು ಪ್ರಾಣಿಗಳು, ಜನರು ಹಾಗೂ ವಾಹನಗಳ ಓಡಾಟದ ಸಂಖ್ಯೆ ಹೆಚ್ಚಾಗಿದೆ. ಈ ವಿದ್ಯುತ್ ಕಂಬವು ಅಡ್ಡ ರಸ್ತೆಗೆ ಹೊಂದಿಕೊಂಡಂತೆ ಇದ್ದು ಅಲ್ಲಿ ಅದರ ಹಿಡಿತಕ್ಕೆ ಹಾಕಿರುವ ಗೈವೈರ್ ಸಹ ಸಡಿಲಗೊಂಡು ಇತ್ತ ರಸ್ತೆಗೆ ಬಾಗಿದೆ. ಗೈವೈರ್ ಇರುವ ಜಾಗವು ಗದ್ದೆ ಬಯಲು ಶೀತಾಂಶವಾದ್ದರಿಂದ ಅಷ್ಟು ಹಿಡಿತ ಸಾಧಿಸಲು ಸಾಧ್ಯವಿಲ್ಲ. ಹಾಗಾಗಿ ಕಂಬಕ್ಕೆ ಬಿಗಿಯಿಲ್ಲದೇ ಇತ್ತ ಬಾಗಿದೆ. ಇದರ ಮೇಲೆ ಯಾವುದೋ ಬಳ್ಳಿಗಳು ಬೆಳೆದು ರಾತ್ರಿ ವೇಳೆ ನೋಡಿದರೆ ಯಾರೋ ನಿಂತಂತೆ ಭಾಸವಾಗುತ್ತದೆ. ಇದನ್ನು ಕಂಡರೂ ಕಾಣದಂತೆ ಇಲ್ಲಿಯೇ ತಿರುಗಾಡುವ ಅರೇನಹಳ್ಳಿ ಗ್ರಾಮ ಪಂಚಾಯತ್ ಸದಸ್ಯರು ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದಾರೆ. ಇನ್ನು ಮುಂದಾದರೂ ಈ ವಿದ್ಯುತ್ ಕಂಬದ ಬದಲಾವಣೆ ಅಥವಾ ದುರಸ್ತಿಗೆ ಹತ್ತಿರದ ರಾವಂದೂರು ಹೋಬಳಿ ವಿದ್ಯುತ್ ಉಪಕೇಂದ್ರದವರ ಗಮನಕ್ಕೆ ತರಲು ಗ್ರಾಮಸ್ಥರು ಈ ಮೂಲಕ ಮನವಿ ಮಾಡಿದ್ದಾರೆ. ಸಂಬಂಧಿತ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮನವಿ.

–ಎ.ಎಸ್.ಗೋವಿಂದೇಗೌಡ, ಕನ್ನಡ ಉಪನ್ಯಾಸಕರು, ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾಲೂಕು

■ ಟ್ರಾಫಿಕ್ ಸಮಸ್ಯೆ ನಿವಾರಿಸಿ

ಮಾನ್ಯರೇ,

ಮೈಸೂರು– ಮಾನಂದವಾಡಿ ರಾಜ್ಯ ಹೆದ್ದಾರಿಯ ಮೈಸೂರಿನ ಪರಸಯ್ಯನಹುಂಡಿ ಬಳಿ ರಿಂಗ್ ರೋಡ್ ಜಂಕ್ಷನ್‌ನಲ್ಲಿ ಬೆಳಗ್ಗೆ ಹಾಗೂ ಸಂಜೆ ಸಮಯದಲ್ಲಿ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದೆ. ಇದಕ್ಕೆ ಕಾರಣವೆಂದರೆ ಅಧಿಕ ವಾಹನಗಳ ಸಂಖ್ಯೆ ಹಾಗೂ ಸಮರ್ಪಕವಾದ ಯಾವುದೇ ಬಸ್ ನಿಲ್ದಾಣ ಇಲ್ಲದಿರುವುದು. ಈ ರಸ್ತೆಯಲ್ಲಿ ಚಲಿಸುವ ಎಲ್ಲ ಸರಕಾರಿ ಬಸ್‌ಗಳು ರಿಂಗ್ ರಸ್ತೆಯ ಜಂಕ್ಷನ್‌ನಲ್ಲೇ ನಿಲ್ಲಿಸುತ್ತವೆ. ಇದರಿಂದ ಹಿಂದೆ ಬರುವ ವಾಹನಗಳು ಸುಗಮವಾಗಿ ಮುಂದೆ ಸಾಗಲಾರದೆ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದೆ. ಇದೇ ಜಂಕ್ಷನ್‌ನ ತುಸು ಮುಂದೆ ಪೊಲೀಸ್ ಚೆಕ್ ಪೋಸ್ಟ್ ಇದೆ. ಅದರ ತುಸು ಆಸುಪಾಸಿನಲ್ಲಿ ಬಸ್ ನಿಲ್ದಾಣ ನಿರ್ಮಿಸಿದರೆ ಟ್ರಾಫಿಕ್ ಸಮಸ್ಯೆ ಕಡಿಮೆ ಆಗುತ್ತದೆ. ಬಸ್ ನಿಲ್ದಾಣ ಸ್ಥಾಪಿಸುವುದರಿಂದ ಪ್ರತಿ ನಿತ್ಯ ಓಡಾಡುವ ನೂರಾರು ಪ್ರಯಾಣಿಕರಿಗೆ ಬಹಳ ಉಪಯುಕ್ತವಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ಸಮರ್ಪಕವಾದ ವ್ಯವಸ್ಥೆ ಕಲ್ಪಿಸಬೇಕಾಗಿ ವಿನಂತಿ.

–ಮಂಜೇಶ್ ದೇವಗಳ್ಳಿ, ಮೈಸೂರು



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

'ಪ್ರಾಮಾಣಿಕತೆ' ಭಾಗ್ಯದ ಬಾಗಿಲ ಕೀಲಿಕೈ

ಚಿಕ್ಕ ಗರಿಕೆಗೂ ಕೂಡ ಹರಕೆಯ ಸಲಿಸುವ ಸಾತ್ವಿಕ ಶಕ್ತಿಯಿದೆ. ಇಲ್ಲಿ ಗರಿಕೆಯಿಟ್ಟು ಗಣೇಶನನ್ನು ಪ್ರಾರ್ಥಿಸುವ ಪರಿಪಾಠವಿದೆ. ಅಂದರೆ ಚಿಕ್ಕದು ಅಂದ ಮಾತ್ರಕ್ಕೆ ಅದಕ್ಕೆ ಮಹತ್ವ ಇಲ್ಲ ಅಂತಲ್ಲ; ಪ್ರಾಣಿಗಳಲ್ಲೇ ಅತೀ ಶಕ್ತಿಯುಳ್ಳ ಆನೆಯನ್ನು ಪಳಗಿಸಲು ಮಾವುತ ಚಿಕ್ಕ ಈಟಿಯೊಂದನ್ನು ಬಳಸುತ್ತಾನೆ. ಮರದ ದೊಡ್ಡ ದಿಮ್ಮಿಯನ್ನು ಉರುಳಿಸಲು ಚಿಕ್ಕ ಸನ್ನೆ ಬೇಕಾಗುತ್ತದೆ. ಬಂಡೆ ಕಲ್ಲೊಂದು ಶಿಲ್ಪ ಕಲಾಕೃತಿಯಾಗೋದಕ್ಕೆ ಚಿಕ್ಕ ಚಾಣ, ಸಣ್ಣದೊಂದು ಉಳಿಯೇಟು ಸಾಕು. ಹೀಗಿರುವಾಗ ನಮ್ಮ ಬದುಕಿನ ಸ್ವಂತದ ಏಳುಬೀಳುಗಳ ನಡುವೆ ನಡೆಯುವ ಚಿಕ್ಕಚಿಕ್ಕ ಘಟನೆಗಳೂ ಕೂಡ ನಮ್ಮ ಬದುಕಿನ ದಾರಿಯನ್ನೇ ಬದಲಿಸುತ್ತವೆ. ಅವು ಕೆಲವೊಮ್ಮೆ ಕಂಟಕಪ್ರಾಯವಾಗಿ ಪಾಠ ಕಲಿಸಿ ಹೋಗುತ್ತವೆ. ಕೆಲವೊಮ್ಮೆ ದೀಪ ಹಚ್ಚಿ ಇನಾಮು ಕೊಟ್ಟು ಹೋಗುತ್ತವೆ. ಪ್ರತಿಯೊಬ್ಬರ ಆತ್ಮಚರಿತ್ರೆಯಲ್ಲಿ ಇಂಥಾ ಸಂಗತಿಗಳು ದಾಖಲಾಗದೇ ಹೋಗಲು ಸಾಧ್ಯವೇ ಇಲ್ಲ.

ಒಂದು ಕಚೇರಿಯಲ್ಲಿ ಕೆಲಸ ಮಾಡುವಾಗ ನಮಗಿಂತ ಮೇಲಿನವನು ಮಾಡುವ ಒಂದು ಚಿಕ್ಕ ಅಪರಾಧ ಬಾಸ್‌ನ ಕೆಂಗಣ್ಣಿಗೆ ಗುರಿಯಾಗಬಹುದು. ನಮ್ಮ ಕರ್ತವ್ಯನಿಷ್ಠೆ ನಿರಂತರವಾಗಿ ಹರಿಯುತ್ತಿದ್ದರೆ ಕ್ಷಣ ಮಾತ್ರದಲ್ಲಿ ಆ ಮುಖ್ಯಸ್ಥನ ತಲೆಯ ಕಂಪ್ಯೂಟರಿನಲ್ಲಿ ನಿಮ್ಮ ಹೆಸರು ಟೈಪಾಗುತ್ತಿರುತ್ತದೆ. ಅನಾಯಾಸವಾಗಿ ನಿಜದ ನಿಮ್ಮ ಕೆಲಸ ನಿಮ್ಮದಲ್ಲದ ಕುರ್ಚಿಯಲ್ಲಿ ನಿಮ್ಮನ್ನು ಕೂರಿಸುತ್ತದೆ. ನಿನ್ನೆಯೂ ನೀವು ಅದ್ನನೇ ಮಾಡುತ್ತಿದ್ದೀರಿ! ನಾಳೆಯೂ ನೀವು ಅದನ್ನೇ ಮಾಡುತ್ತೀರಿ! ಅದರಲ್ಲಿ ಅಂಥಾ ವ್ಯತ್ಯಾಸವಿಲ್ಲ, ಆದರೆ ದೊಡ್ಡ ಜವಾಬ್ದಾರಿ ಹೊರಲು ನಿಮಗೆ ಸಾಮರ್ಥ್ಯವಿದೆ ಎಂಬುದನ್ನು ತೋರಿಸಿಕೊಟ್ಟಿದ್ದು ಮಾತ್ರ ನಿಮ್ಮ ವ್ಯಕ್ತಿತ್ವ ಮತ್ತು ನಡವಳಿಕೆ ಹಾಗೂ ಆವರೆಗಿನ ನಿಮ್ಮ ಕೆಲಸದ ವೈಖರಿ. ಅರ್ಥಾತ್ ಸತ್ಯ ಮತ್ತು ಪ್ರಾಮಾಣಿಕತೆ.


ಇವತ್ತು ಈ ಎರಡೂ ಪದಗಳು ಕೇವಲ ವೇದಿಕೆಯ ಮೇಲೆ ಭಾಷಣ ಕುಟ್ಟಲು, ಅಂಕಣದಲ್ಲಿ ಲೇಖನ ಬರೆಯಲು, ಶಾಲೆಗಳಲ್ಲಿ ಪಾಠ ಹೇಳಲು ಮಾತ್ರ ಬಳಕೆಯಾಗುತ್ತಿವೆ ಎಂಬ ದುರಂತದ ಮಾತುಗಳನ್ನು ಆಡುತ್ತೇವೆ ನಿಜ, ಆದರೆ ಅದೇ ಸತ್ಯ ಮತ್ತು ಪ್ರಾಮಾಣಿಕತೆಗಳು ಕೆಲವರ ಬದುಕುಗಳನ್ನು ಎಷ್ಟು ಶ್ರೀಮಂತಗೊಳಿಸಿವೆ ಗೊತ್ತ. ಪ್ರಸಿದ್ಧ **ಭೌತವಿಜ್ಞಾನಿ ಸರ್ ಸಿ.ವಿ. ರಾಮನ್** ನಿಮಗೆ ಗೊತ್ತು ಅವರ ಬಗ್ಗೆ ಬರೆಯುತ್ತಾ ಹೋದರೆ ವಿಜ್ಞಾನ ವಾರಿಧಿಯ ಬಗ್ಗೆ ಚಿತ್ರ ಬಿಡಿಸಿದಷ್ಟು ಹಾಸ್ಯಾಸ್ಪದವಾಗಿ ಬಿಡುತ್ತದೆ ನಮ್ಮ ಬರಹ. ಆದ್ದರಿಂದ ಅವರೊಂದು ವಿಜ್ಞಾನದ ಮೈಲಿಕಲ್ಲು ಎಂದಷ್ಟೇ ಹೇಳಿ ನಾನಿಲ್ಲಿ ನನ್ನ ವಿಷಯ ಆರಂಭಿಸುತ್ತೇನೆ.

ಸರ್ ಸಿ.ವಿ.ರಾಮನ್‌ಗೆ ಒಮ್ಮೆ ತಮ್ಮೊಡನೆ ಕೆಲಸ ಮಾಡಲು ಕೆಲವು ಯುವ ವಿಜ್ಞಾನಿಗಳು ಬೇಕಾಗಿರುತ್ತೆ. ಆಗ ಅವರು ಅದಕ್ಕೊಂದು ಜಾಹೀರಾತು ನೀಡಿ ಸಂದರ್ಶನ ನಡೆಸುತ್ತಾರೆ. ಬಹಳಷ್ಟು ಜನ ಸಂದರ್ಶನಕ್ಕೆ ಹಾಜರಾಗಿ ಕೆಲವೇ ಮಂದಿ ಆಯ್ಕೆಯಾಗುತ್ತಾರೆ. ಆಯ್ಕೆಯಾಗದೇ ಉಳಿದವರೆಲ್ಲರೂ ದಡ್ಡರೇನಲ್ಲ. ಎಲ್ಲರೂ ಬುದ್ಧಿವಂತರೆ! ಅವರೂ ಹೇಗಾದರೂ ಮಾಡಿ ಸಂದರ್ಶನದಲ್ಲಿ ಪಾಸಾಗಿ ರಾಮನ್ ಅವರೊಟ್ಟಿಗೆ ಕೆಲಸ ಮಾಡುವ ಸುಯೋಗ ಸಿಕ್ಕರೆ ಸಾಕು ಎಂದುಕೊಂಡು ಬಂದಿದ್ದವರೇ ಹೆಚ್ಚು ತುಂಬಾ ಬುದ್ಧಿವಂತರ ತುಂಬಾ ಪ್ರಸಿದ್ಧರ ಜೊತೆ ಕೆಲಸ ಮಾಡಿದ್ದೇನೆ ಎನ್ನುವ ಅನುಭವವೇ ಮುಂದೊಂದು ದಿನ ಅವರ ಅರ್ಹತೆಯ ಪ್ರಮಾಣಪತ್ರದಂತೆ ಆಗಿಬಿಡುತ್ತದೆ. ಹಿಂದೆ ಚಿತ್ರರಂಗದಲ್ಲಿ ಡಾ.ರಾಜ್‌ಕುಮಾರ್ ಅವರ ಚಿತ್ರದಲ್ಲಿ ನಟಿಸುವ ಅವಕಾಶ ಕೊಟ್ಟರೆ ಸಾಕು ಸಂಭಾವನೆಯೇ ಬೇಡ ನಟಿಸುತ್ತೇವೆ ಎಂಬ ಹುಮ್ಮಸ್ಸಿನ ಹೊಸಬರ ದಂಡೇ ಕನ್ನಡ ಚಿತ್ರರಂಗದಲ್ಲಿತ್ತು ಎಂಬುದನ್ನು ಕೇಳಿದವರು ನಾವು.

ನಮ್ಮ ಪಕ್ಕದ ಹುಣಸೂರಿನ ರಾಜಕಾರಣಿ ಸ್ನೇಹಿತ ಸತ್ಯಪ್ಪ ಒಮ್ಮೆ ನಾನು ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಕೈಕೆಳಗೆ ಕೆಲಸ ಮಾಡಿದವನು ಸಾರ್ ಅಂತ ಹೇಳಿಕೊಂಡೇ ನನ್ನ ಬಳಿ ತನ್ನನ್ನು ಪರಿಚಯಿಸಿಕೊಂಡಿದ್ದರು. ಹಾಗೆಯೇ ಅಂದು ಸರ್. ಸಿ.ವಿ.ರಾಮನ್‌ರವರ ಬಳಿ ಕೆಲಸ ಗಿಟ್ಟಿಸಲು ಸರತಿಯ ಸಾಲಿನಲ್ಲಿ ನಿಂತು ಸಂದರ್ಶನದಲ್ಲಿ ಸಕ್ಸಸ್ ಆಗದೇ ಹೋದವರ ದೊಡ್ಡ ಗುಂಪೊಂದು ನಿರಾಸೆಯಿಂದ ಹೊರಹೋಗಬೇಕಾಯಿತು. ಹಾಗೆ ಹೋಗುವಾಗ ಅವರು ಬರಿಗೈಲಿ ಹೋಗುವುದು ಬೇಡ ಅವರಿಗೆ ಪ್ರಮಾಣಭತ್ಯೆ, ದಿನಭತ್ಯೆಯನ್ನು ಕೊಟ್ಟು ಕಳಿಸಿ ಎಂದು ರಾಮನ್ ಹೇಳಿದರಂತೆ. ಅದರಂತೆ ಅವರ ಕಚೇರಿಯ ಸಿಬ್ಬಂದಿ ಎಲ್ಲರಿಗೂ ದಿನಭತ್ಯೆ, ಪ್ರಯಾಣಭತ್ಯೆ ಕೊಟ್ಟು ಕಳಿಸಿದ್ದಾರೆ. ಇಲ್ಲಿದೆ ನೋಡಿ ಈಗ ಆ ಘಟನೆಯ ತಿರುವು! ಹಾಗೆ ಪ್ರಯಾಣಭತ್ಯೆ ಕೊಡುವ ತರಾತುರಿಯಲ್ಲಿ ಯಾರ್‍ಯಾರಿಗೆ ಎಷ್ಟೆಷ್ಟು ಹಣ ಹೆಚ್ಚು ಸಂದಾಯವಾಗಿತ್ತೋ ಗೊತ್ತಿಲ್ಲ. ಆದರೆ ಆ



ಸರ್ ಸಿ. ವಿ. ರಾಮನ್



ಎಸ್.ಚಂದ್ರಶೇಖರ್

> "ಪ್ರಾಮಾಣಿಕತೆ ಅನ್ನೋದು ನಮ್ಮ ಬದುಕು ಬದಲಿಸುವ ಬದ್ಧತೆಯನ್ನು ಯಾವತ್ತಿಗೂ ಉಳಿಸಿಕೊಂಡಿದೆ. ಅದಕ್ಕೆ ಕಾಲದ ಮಿತಿಯಿಲ್ಲ. ಆಸೆಯ ಹಂಗಿಲ್ಲ. ಅನಾಯಾಸವಾಗಿ ಬರುವ ಯಾವುದರಿಂದಲೂ ಈ ಮುಗ್ಧ ಪ್ರಾಮಾಣಿಕ ಹೃದಯಗಳು ಹಿತ ಕಾಣುವುದಿಲ್ಲ; ಸದ್ದಿಲ್ಲದೇ ತಮ್ಮ ಪಾಡಿಗೆ ತಾವು ಪ್ರಾಮಾಣಿಕವಾಗಿ ಬದುಕಿ ತೆರಳುವ ಅವರ ಕಾಯಕ ಮಾರ್ಗದಲ್ಲಿ ಬಡತನವಿದ್ದರೂ ಪ್ರಾಮಾಣಿಕತೆಯೆಂಬ ಸತ್ಯದ ಶ್ರೀಮಂತಿಕೆಯಿದೆ.

ಗುಂಪಿನಲ್ಲಿದ್ದ ಒಬ್ಬ ಯುವ ವಿಜ್ಞಾನಿಗೆ ಭತ್ಯೆಯ ಹಣ ಏಳು ರೂಪಾಯಿ ಜಾಸ್ತಿ ಬಂದು ಬಿಟ್ಟಿತ್ತು. ಆ ಯುವಕ ವಾಪಸ್ಸು ರಾಮನ್ ಅವರ ಕಚೇರಿಗೆ ತೆರಳಿ ಅದನ್ನು ವಾಪಸ್ ಕೊಡಲು ಹೊರಟಿದ್ದಾನೆ. ಆ ವೇಳೆಗೆ ಕಚೇರಿಯಲ್ಲಿ ಅಕೌಂಟಿನ ಲೆಕ್ಕಶೀರ್ಷಿಕೆಯ ಜಮಾ ಖರ್ಚುಗಳ ಕ್ಲೋಸಿಂಗ್ ಬ್ಯಾಲೆನ್ಸಿನ ವ್ಯವಹಾರ ಮುಗಿದಿರುತ್ತದೆ. ಕಚೇರಿ ಸಿಬ್ಬಂದಿ ಏಳು ರೂಪಾಯಿ ತಾನೆ ನಮ್ಮ ಲೆಕ್ಕಾಚಾರವೆಲ್ಲ ಮುಗಿದಿದೆ. ಆ ಹಣವನ್ನು ನೀವೇ ಇಟ್ಟುಕೊಳ್ಳಿ ಎಂದಿದ್ದಾರೆ. ವಾಪಸ್ಸು ಬಂದ ಆ ಯುವ ವಿಜ್ಞಾನಿ ರಾಮನ್ ಅವರ ಕಚೇರಿಯ ಗೇಟಿನಲ್ಲಿ ಅವರು ಬರುವವರೆಗೂ ಅವರಿಗಾಗಿ ಕಾದಿದ್ದಾರೆ. ಅವರು ಗೇಟಿನ ಬಳಿ ಬರುತ್ತಿದ್ದಂತೆ ಅವರನ್ನು ಕಂಡು ಮಾತಾಡಿಸಿದ್ದಾರೆ. ಆ ಹುಡುಗನನ್ನು ನೋಡಿದ ಕೂಡಲೇ ರಾಮನ್ ಕೇಳಿದ್ದಾರೆ. ಬೆಳಿಗ್ಗೆ ನೀನು ಸಂದರ್ಶನಕ್ಕೆ ಬಂದಿದ್ದ ಹುಡುಗ ಅಲ್ವಾ? Sorry boy ನೀನು ಆಯ್ಕೆಯಾಗಿಲ್ಲ. ಆದರೆ ನಿನಗೆ ನಿನ್ನ ಪ್ರಯಾಣಭತ್ಯೆ ಸಂದಾಯವಾಗಿದೆಯಲ್ಲವೆ? ಮತ್ತೇಕೆ ಇಲ್ಲೇ ನಿಂತಿರುವೆ? ನೀನು ಹೊರಡಬಹುದು ಎಂದಿದ್ದಾರೆ. ಆಗ ಆ ಹುಡುಗ, ಸಂದರ್ಶನಕ್ಕಾಗಿ ಬಂದ ತನಗೆ ತಮ್ಮ ಕಚೇರಿಯಿಂದ ಹೆಚ್ಚುವರಿಯಾಗಿ ಸಂದಾಯವಾದ ಏಳು ರೂಪಾಯಿಗಳನ್ನು ತಮಗೆ ವಾಪಸ್ ಮಾಡಲಿಕ್ಕೆ ಕಾದಿದ್ದಾಗಿ ಹೇಳಿದ್ದಾರೆ. ಅನಾಯಾಸವಾಗಿ ಬಂದ ಏಳು ರೂಪಾಯಿಯನ್ನು ಅರಗಿಸಿಕೊಳ್ಳದೆ ವಾಪಸ್ಸು ನೀಡಲು ಬಂದ ಆ ಹುಡುಗನ ಸತ್ಯ ಮತ್ತು ಪ್ರಾಮಾಣಿಕತೆ ಸರ್. ಸಿ ವಿ ರಾಮನ್ ಅವರನ್ನು ಆಕರ್ಷಿಸುತ್ತದೆ. ಹಾಗೆ ದುಡ್ಡು ನೀಡಿ ಹೊರಹೋಗುತ್ತಿದ್ದ ಆ ಹುಡುಗನನ್ನು ವಾಪಸ್ಸು ಕರೆದ ಸಿ.ವಿ.ರಾಮನ್ ನಾಳೆ ನೀನು ನನ್ನ ಕಚೇರಿಗೆ ಬಂದು ನನ್ನನ್ನು ಕಾಣು ಎನ್ನುತ್ತಾರೆ. ಹುಡುಗ ಸಾರ್ ಸಂದರ್ಶನದಲ್ಲಿ ನಾನು ಫೇಲ್ ಆಗಿದ್ದೇನೆ ಎನ್ನುತ್ತಾರೆ. ಕೂಡಲೇ ಮರು ಮಾತನಾಡಿದ ರಾಮನ್ ಹೇಳುತ್ತಾರೆ. "Yes, you are failed in Physics but passed in moral science" ಎನ್ನುತ್ತಾರೆ. ಮುಂದೆ ಅದೇ ಹುಡುಗ ರಾಮನ್ ಅವರಷ್ಟೇ ಎತ್ತರಕ್ಕೆ ಬೆಳೆದು ದೊಡ್ಡ ಭೌತವಿಜ್ಞಾನಿ ಆಗುತ್ತಾರೆ. ಅವರ ಹೆಸರೇ ವಿಜ್ಞಾನಿ **ಎಸ್.ಚಂದ್ರಶೇಖರ್**. ವಿಜ್ಞಾನದ ಶಿಕ್ಷಕರು ಮಕ್ಕಳಿಗೆ ಭೌತವಿಜ್ಞಾನ ಹೇಳುವಾಗ ಜಗತ್ತಿನಲ್ಲಿಯೇ ಪ್ರಸಿದ್ಧವಾದ 'ರಾಮನ್ ಎಫೆಕ್ಟ್' ಹೇಳುವಾಗ; ಕೇವಲ ತನ್ನ ಸತ್ಯ ಮತ್ತು ಪ್ರಾಮಾಣಿಕತೆಯಿಂದ ಅವರ ಮನಸ್ಸು ಬದಲಿಸಿದ ಚಂದ್ರಶೇಖರ್ ಎಫೆಕ್ಟ್ ಕೂಡ ಹೇಳಬೇಕಾಗುತ್ತದೆ. ಇದು ಒಂದು ಕಡೆ ನೈತಿಕ ವಿಜ್ಞಾನವೂ ಹೌದು, ಮತ್ತೊಂದೆಡೆ ಸಾಮಾಜಿಕ ವಿಜ್ಞಾನವೂ ಹೌದು. ರಾಮನ್ ಅವರ ಸಂದರ್ಶನದಲ್ಲಿ ಸಕ್ಸಸ್ ಆಗದ ಎಸ್.ಚಂದ್ರಶೇಖರ್ ತಮ್ಮ ಸತ್ಯ ಮತ್ತು ಪ್ರಾಮಾಣಿಕತೆಯ ಸ್ವಭಾವದಿಂದ ದೊಡ್ಡವರ ಮನಸ್ಸನ್ನು ಗೆದ್ದರು. ನಿಜ, ವಿಷಯ, ಪಾತ್ರ ಎಲ್ಲವೂ ಚಿಕ್ಕದೇ ಹೌದು! ಆದರೆ ಅದು ಮಾಡುವ ಪರಿಣಾಮ ಮಾತ್ರ ತುಂಬಾ ದೊಡ್ಡದೇ!. ಬೆಂಕಿಕಡ್ಡಿಯ ಮತಾಪು ಚಿಕ್ಕದೇ! ಆದರೆ ಅದು ಹೊತ್ತಿಸುವ ಬೆಂಕಿ ಮಾತ್ರ ತುಂಬಾ ದೊಡ್ಡದು, ಅದು ಮೊದಲು ನಮ್ಮ ಬಾಳಿಗೆ ಬೆಳಕಾದರೆ ಅದರ ತೇಜಸ್ಸಿನಲ್ಲಿ ಜಗತ್ತು ನಲಿಯುತ್ತದೆ.

ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಇಂಗ್ಲಿಷಿನಲ್ಲಿ ನಮಗೊಂದು ಪಾಠವಿತ್ತು. "A spark neglected to burns the house" ಅಂತ. ಹಾಗೆಯೇ ಅದೇ ಸ್ಪಾರ್ಕ್ ಬದುಕಿನ ಮೇಲೆ ನಕಾರಾತ್ಮಕವಾಗಿ reflect ಆದರೆ ಒಂದೇ ಬೆಳಕಿನ ಪ್ರತಿರೂಪ ನಿನ್ನೆಯವರೆಗೂ ಸ್ಟಾರ್ ಆಗಿದ್ದವರನ್ನು ಇಂದು ರಸ್ತೆಯ ಟಾರನ್ನಾಗಿ ಪರಿವರ್ತಿಸಿಬಿಡುತ್ತದೆ. ಆದರೆ ವರ್ತಮಾನದ ನಮ್ಮ ಕಾಲಘಟ್ಟದಲ್ಲಿ ಪ್ರಯಾಣ ಭತ್ಯೆ ಬಿಲ್ಲನ್ನು ತಯಾರಿಸಿಕೊಡಿ ಎಂದು ಬಿಲ್‌ಫಾರಂ ಕೊಟ್ಟರೆ ಫಸ್ಟ್‌ಕ್ಲಾಸ್ ಟ್ರೇನ್ ಫೇರ್. ಫಸ್ಟ್‌ಕ್ಲಾಸ್ ಬಸ್ ಫೇರ್‌ಗಳನ್ನು ಹಾಕಿ ದುಡ್ಡು ಜಾಸ್ತಿ ಬರುವ ಕಡೆಗೇ ನಿಗಾ ವಹಿಸುವ ನನ್ನಂಥಾ ನೌಕರರಿಂದ ಯಾವ ಎಫೆಕ್ಟ್ ನಿರೀಕ್ಷಿಸಲು ಸಾಧ್ಯ ಹೇಳಿ? ಇಷ್ಟಾಗಿಯೂ ಅಲ್ಲೊಬ್ಬ ಆಟೋ ಡ್ರೈವರ್, ಇಲ್ಲೊಬ್ಬ ಬಸ್ ಕಂಡಕ್ಟರ್ ಮತ್ತೊಬ್ಬ ಪೊಲೀಸ್ ಪೇದೆ ಹೀಗೆ ಸಾಮಾನ್ಯರಲ್ಲಿ ಸಾಮಾನ್ಯರಾದ ವರ್ಗದಲ್ಲಿ ಜೀವಿಸುವ ಜನ ಇವತ್ತಿಗೂ ತಮ್ಮದಲ್ಲದ ಏನಾದರೊಂದು ವಸ್ತುವೋ, ಒಡವೆಯೋ, ಹಣವೋ, ಆಸ್ತಿಪತ್ರಗಳೋ ಆಕಸ್ಮಿಕವಾಗಿ ಸಿಕ್ಕಿಬಿಟ್ಟರೆ ಅನಾಮತ್ತಾಗಿ ಎತ್ತಿ ಬಚ್ಚಿಟ್ಟುಕೊಳ್ಳುವುದಿಲ್ಲ. ಸಿಕ್ಕಿರುವ ವಸ್ತುಗಳಲ್ಲಿ ಅವರದೊಂದು ಸಣ್ಣ ಸುಳಿವು ಸಿಕ್ಕರೂ ಕಳೆದುಕೊಂಡವರಿಗೆ ಅದನ್ನು ತಲುಪಿಸುವ ಪ್ರಾಮಾಣಿಕರು ಇನ್ನೂ ನಮ್ಮ ನಡುವೆ ಇದ್ದಾರೆ. ಕಡೇಪಕ್ಷ ಸುಳಿವು ದೊರೆಯದೇ ಇದ್ದರೆ ಯಾವುದಾದರೂ ಪತ್ರಿಕಾ ಕಚೇರಿಗೆ ತೆರಳಿ ಸಂಬಂಧಿಸಿದವರಿಗೆ ಅದನ್ನು ತಲುಪುವಂತೆ ಮಾಡಿ, ಪತ್ರಿಕೆಯಲ್ಲಿ ಬರುವ ತಮ್ಮ ಚಿಕ್ಕದೊಂದು ಫೋಟೋ ನೋಡಿ ಖುಷಿಪಡುವ ಆ ಅಮಾಯಕರ ಪ್ರಾಮಾಣಿಕತೆಯಲ್ಲೇ ನಮಗೆ ರಾಮನ್ ಎಫೆಕ್ಟ್, ಎಸ್.ಚಂದ್ರಶೇಖರ್ ಎಫೆಕ್ಟ್ ಮಾಡಲ್ ಸೈನ್ಸ್‌ಗಳು ಕಾಣುತ್ತಿರುತ್ತವೆ. ಒಮ್ಮೆ ನಮ್ಮ ಮೈಸೂರಿನ ರಾಮಸ್ವಾಮಿ ಸರ್ಕಲ್ಲಿನ ಬಳಿ ಟ್ರಾಫಿಕ್ ಸಿಗ್ನಲ್‌ನಲ್ಲಿ ಕೆಲಸ ಮಾಡುತ್ತಿದ್ದ ಹೋಂಗಾರ್ಡ್ ಹೆಣ್ಣು ಮಗಳೊಬ್ಬಳು ತುಂಬಾ ಬೆಲೆಬಾಳುವ ಒಡವೆಗಳುಳ್ಳ ಬ್ಯಾಗನ್ನು ಸಂಬಂಧಿಸಿದವರಿಗೆ ತಲುಪಿಸಿದ ಪ್ರಸಂಗ ನಮಗೆ ಇನ್ನೂ ನೆನಪಿದೆ. ಇವತ್ತಿಗೂ ಇಂಥಾ ಪ್ರಾಮಾಣಿಕ ಮನಸ್ಸುಗಳು ಎಲ್ಲಾ ಕಡೆ ಸಿಗುತ್ತವೆ.


ಬಸವಣ್ಣ ಹೇಳಿದ ಹಾಗೆ

ಅವರವರ ಭಾವಕ್ಕೆ ಅವರವರ ಭಕುತಿಗೆ
ಅವರವರ ತೆರನಾಗಿ ಇರುತಿಹನು ಶಿವಯೋಗಿ
ಹರಿಯ ಭಕ್ತರಿಗೆ ಹರಿ
ಹರನ ಭಕ್ತರಿಗೆ ಹರ
ನರರೇನು ಭಾವಿಪರೋ ಅದರಂತೆ ತೋರುವನು

ಅಂದರೆ ಪ್ರಾಮಾಣಿಕತೆ ಅನ್ನೋದು ನಮ್ಮ ಬದುಕು ಬದಲಿಸುವ ಬದ್ಧತೆಯನ್ನು ಯಾವತ್ತಿಗೂ ಉಳಿಸಿಕೊಂಡಿದೆ. ಅದಕ್ಕೆ ಕಾಲದ ಮಿತಿಯಿಲ್ಲ. ಆಸೆಯ ಹಂಗಿಲ್ಲ. ಅನಾಯಾಸವಾಗಿ ಬರುವ ಯಾವುದರಿಂದಲೂ ಈ ಮುಗ್ಧ ಪ್ರಾಮಾಣಿಕ ಹೃದಯಗಳು ಹಿತ ಕಾಣುವುದಿಲ್ಲ; ಸದ್ದಿಲ್ಲದೇ ತಮ್ಮ ಪಾಡಿಗೆ ತಾವು ಪ್ರಾಮಾಣಿಕವಾಗಿ ಬದುಕಿ ತೆರಳುವ ಅವರ ಕಾಯಕ ಮಾರ್ಗದಲ್ಲಿ ಬಡತನವಿದ್ದರೂ ಪ್ರಾಮಾಣಿಕತೆಯೆಂಬ ಸತ್ಯದ ಶ್ರೀಮಂತಿಕೆಯಿದೆ. ಸರ್. ಸಿ ವಿ ರಾಮನ್, ಚಂದ್ರಶೇಖರ್ ಎಫೆಕ್ಟಿದೆ.

ಕೆಲವು ವರ್ಷದ ಹಿಂದೆ ನಾನು ನನ್ನ ಪರ್ಸ್ ಕಳೆದುಕೊಂಡು ಬಿಟ್ಟೆ ಅದು ವಿಜಯಕುಮಾರ್ ಎಂಬ ಉಪನ್ಯಾಸಕರೊಬ್ಬರ ಕೈಗೆ ಸಿಕ್ಕಿತ್ತು. ಅದರಲ್ಲಿ ನನ್ನನ್ನು ಸಂಪರ್ಕಿಸಲು ಯಾವ ಸುಳಿವೂ ಇರಲಿಲ್ಲ. ಅದರಲ್ಲಿ ಎ.ಟಿ.ಎಂ. ಕಾರ್ಡ್ ಎಲ್ಲವೂ ಇತ್ತು. ನಾನು ಫೋನ್ ಮಾಡಿ ಅಕೌಂಟ್ ಆಪರೇಟ್ ಆಗದಂತೆ ನೋಡಿಕೊಂಡೆ. ಆದರೂ ಅದು ಸಿಕ್ಕಿದ ಆ ವಿಜಯಕುಮಾರ್ ಅವರ ಮನೆ ಕುವೆಂಪುನಗರದಲ್ಲಿತ್ತು ನನ್ನ ಮನೆ ಆಲನಹಳ್ಳಿ ಬಡಾವಣೆಯಲ್ಲಿತ್ತು ಅವರು, ಅದರಲ್ಲಿದ್ದ ಒಂದು ಚೀಟಿಯಲ್ಲಿನ ಒಬ್ಬ ಸಂಗೀತಗಾರರ ನಂಬರಿಗೆ ಫೋನ್ ಮಾಡಿ ಅವರಿಂದ ನನ್ನ ಬಗ್ಗೆ ಮಾಹಿತಿ ಪಡೆದು, ಆಲನಹಳ್ಳಿ ಬಡಾವಣೆಯಲ್ಲಿ ನನ್ನ ಮನೆ ಹುಡುಕಿ ನನ್ನ ಕೈಗೆ ಪರ್ಸ್ ತಲುಪಿಸಿದರು. ಇಷ್ಟೆಲ್ಲಾ ರಿಸ್ಕು ತೆಗೆದುಕೊಂಡ ಆ ಮನುಷ್ಯ ಒಂದು ಚಿಕ್ಕ ಥ್ಯಾಂಕ್ಸನ್ನೂ ನಿರೀಕ್ಷಿಸದೇ ನಗುತ್ತಾ ನಿಂತಿದ್ದರು. ಪ್ರಾಮಾಣಿಕತೆ ಅನ್ನೋದು ಎಲ್ಲಾ ಘಟ್ಟಗಳಲ್ಲೂ ಪ್ರವಹಿಸುವುದೇ ಹೀಗೆ! ಅದು ಕೇವಲ ಪುಸ್ತಕದ ಬದನೇಕಾಯಿಯಲ್ಲ. ಜೀವನದ ದಿಕ್ಕು ಬದಲಿಸುವ ನಮ್ಮದೇ ಸ್ವಭಾವಗಳ ಆತ್ಮಸ್ಥಾಯಿ ಏನಂತೀರಿ?

ಆಪತ್ಕಾಲದ ಗೆಳೆಯ 'ಕ್ರೆಡಿಟ್ ಕಾರ್ಡ್'; ವಿವೇಚನೆಯಿಂದ ಬಳಸಿದರೆ



ಇಂದು ಬಹುತೇಕ ಬ್ಯಾಂಕುಗಳು ಖಾತೆ ಹೊಂದಿರುವ ತನ್ನ ಗ್ರಾಹಕರಿಗೆ ಮತ್ತು ಹೊಸ ಗ್ರಾಹಕರಿಗೂ ಕ್ರೆಡಿಟ್ ಕಾರ್ಡ್‌ಗಳನ್ನು ನೀಡುತ್ತಿವೆ.ಅನೇಕರಿಗೆ ಕ್ರೆಡಿಟ್ ಕಾರ್ಡಿನಿಂದ ಆಗುವ ಉಪಯೋಗ ಹಾಗೂ ಇದನ್ನು ಉಪಯೋಗಿಸುವಾಗ ಗೊತ್ತಿರಬೇಕಾದ ಕೆಲವು ಸಂಗತಿಗಳು ಹೊಸತೇನಲ್ಲ, ತಿಳಿದಿರುತ್ತದೆ. ಆದರೂ ಹೊಸತಾಗಿ ಕ್ರೆಡಿಟ್ ಕಾರ್ಡ್ ಬಳಸುತ್ತಿರುವವರಿಗಾಗಿ, ಕ್ರೆಡಿಟ್ ಕಾರ್ಡ್ ಪಡೆಯಬೇಕು ಎಂದು ಅಂದುಕೊಂಡವರಿಗಾಗಿ ಇದರ ಬಗ್ಗೆ ಒಂದಷ್ಟು ಮಾಹಿತಿ ತಿಳಿದುಕೊಳ್ಳುವ ಅಗತ್ಯವಿದೆ.

ಗ್ರಾಹಕರ ಸಿಬಿಲ್ ರಿಪೋರ್ಟ್ ಮತ್ತು ಆದಾಯ ನೋಡಿ ಬ್ಯಾಂಕುಗಳು ಕ್ರೆಡಿಟ್ ಕಾರ್ಡ್ ಪಡೆಯಲು ಗ್ರಾಹಕರು ಅರ್ಹತೆ ಹೊಂದಿದ್ದಾರಾ, ಇಲ್ವಾ ಎಂದು ನಿರ್ಧರಿಸುತ್ತವೆ. ಅರ್ಹತೆ ಹೊಂದಿದ್ದರೆ ಅವರ ಆದಾಯಕ್ಕನುಗುಣವಾಗಿ ಒಂದು ಲಿಮಿಟ್ ಅನ್ನು ಕೊಡುತ್ತಾರೆ.ಕಾರ್ಡ್ ಪಡೆದವರು ಆ ಲಿಮಿಟಿನವರೆಗೆ ಕಾರ್ಡಿನ ಮೂಲಕ ತಮಗೆ ಬೇಕಾದುದನ್ನು ಖರೀದಿಸಬಹುದು.

ಏನೆಲ್ಲಾ ಪ್ರಯೋಜನ:

● ಸುಮಾರು 30ರಿಂದ 40 ದಿನಗಳ ವರೆಗೆ ಬಡ್ಡಿರಹಿತ ಸಾಲದ ತರಹ ಇದು ಕೆಲಸ ಮಾಡುತ್ತದೆ.ಸಂಬಳ ಬಂದಾಗ, ಬೇರೆ ವ್ಯವಹಾರದ ಹಣ ಬಂದಾಗ ನಿಗದಿತ ದಿನದೊಳಗೆ ಹಣ ಮರು ಪಾವತಿಸಿದರೆ ಬಡ್ಡಿರಹಿತ ಹಣ ಒಂದು ತಿಂಗಳಿಗೂ ಅಧಿಕ ಸಮಯದವರೆಗೆ ದೊರೆತಂತೆ ಆಗುತ್ತದೆ. ಯಾರ ಹತ್ತಿರನೂ ಸಾಲಕ್ಕಾಗಿ ಕೈ ಒಡ್ಡಬೇಕಾಗಿಲ್ಲ.

● ಕಾರ್ಡನ್ನು ಉಪಯೋಗಿಸುವುದರ ಆಧಾರದ ಮೇಲೆ ರಿವಾರ್ಡ್ ಪಾಯಿಂಟ್ ಬರ್ತಾ ಹೋಗುತ್ತದೆ. ಅದನ್ನು ರಿಡೀಮ್ ಮಾಡಿಕೊಂಡರೆ ಸಣ್ಣ ಸಣ್ಣ ಕೆಲ ವಸ್ತುಗಳನ್ನು ಫ್ರೀಯಾಗಿ ಖರೀದಿಸಿದ ಹಾಗೆ ಆಗುತ್ತೆ.

● ಕ್ರೆಡಿಟ್ ಕಾರ್ಡ್ ನೀಡುವ ಬ್ಯಾಂಕಿನವರು ಕೆಲವೊಂದು ಕಂಪನಿ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿರುತ್ತಾರೆ.ಆ ಕಂಪೆನಿಗಳಲ್ಲಿ ಕಾರ್ಡಿನ ಮೂಲಕ ಖರೀದಿಸಿದರೆ ಕಡಿಮೆ ಬೆಲೆಯಲ್ಲಿ ಖರೀದಿಸಬಹುದು. ಪೆಟ್ರೋಲ್ ಹಾಕಿಸಿದರೆ ಒಂದಷ್ಟು ಹಣ ವಾಪಸ್ಸು ಕಾರ್ಡಿಗೆ ಜಮಾ ಆಗುತ್ತದೆ.

● ಒಂದು ವೇಳೆ ನಿಗದಿತ ಸಮಯದೊಳಗೆ ಕಾರ್ಡಿನಲ್ಲಿ ಖರೀದಿಸಿದ ಹಣ ಮರುಪಾವತಿಸಲು ಆಗದಿದ್ದಲ್ಲಿ ಎರಡು ವರ್ಷಗಳವರೆಗೆ ಕಂತುಗಳಲ್ಲಿ ಮರು ಪಾವತಿಸಬಹುದು.

ಮುನ್ನೆಚ್ಚರಿಕೆಯೂ ಬೇಕು!

● ನಿಗದಿತ ಸಮಯದೊಳಗೆ ಕ್ರೆಡಿಟ್ ಕಾರ್ಡ್ ಮೂಲಕ ಪಡೆದ ಹಣವನ್ನು ಮರು ಪಾವತಿಸಬೇಕು. ಇಲ್ಲದಿದ್ದರೆ ಅಧಿಕ ಬಡ್ಡಿಯನ್ನು ಬಾಕಿ ಹಣಕ್ಕೆ ಹಾಕುತ್ತಾರೆ. ಒಂದು ವೇಳೆ ಪೂರ್ತಿ ಹಣ ಮರುಪಾವತಿ ಸಾಧ್ಯವಾಗದಿದ್ದಲ್ಲಿ ಕಂತಿನ ಮೂಲಕ ಕಟ್ಟಬಹುದು. ಆದಕ್ಕೂ ಬಡ್ಡಿ ಜಾಸ್ತಿ ಇರುತ್ತದೆ.

● ಲಿಮಿಟ್ ಇದೆ ಅಂತ ಪ್ರತಿ ತಿಂಗಳು ಪೂರ್ತಿ ಲಿಮಿಟ್ ಖಾಲಿ ಮಾಡುವುದು ಒಳ್ಳೆಯದಲ್ಲ.ಅವಶ್ಯಕತೆ ಇದ್ದಷ್ಟು, ಮರುಪಾವತಿ ಮಾಡಲಿಕ್ಕೆ ಸಾಧ್ಯವಿದ್ದಷ್ಟು ಮಾತ್ರ ಕಾರ್ಡನ್ನು ಬಳಸಬೇಕು.

● ಕಾರ್ಡಿನಿಂದ ರಿವಾರ್ಡ್ ಪಾಯಿಂಟ್ ಬರುತ್ತೆ. ಕಾರ್ಡು ಮೂಲಕ ಖರೀದಿಸಿದರೆ ಕಡಿಮೆ ಆಗುತ್ತೆ ಎನ್ನುವ ಒಂದೇ ಕಾರಣಕ್ಕೆ ಕಾರ್ಡು ಬಳಸುವುದು ಬೇಡ. ಅವಶ್ಯಕತೆ ಇದ್ದಾಗ ಮಾತ್ರ ಅಗತ್ಯಗಳಿಗೆ ಇದನ್ನು ಬಳಸಬೇಕು.

● ಕ್ರೆಡಿಟ್ ಕಾರ್ಡ್‌ನಿಂದ ATMನಲ್ಲಿ ಸ್ವಲ್ಪ ನಿಗದಿತ ಹಣವನ್ನೂ ಪಡೆಯುವ ಸೌಲಭ್ಯವಿರುತ್ತದೆ.ಆದರೆ ತುಂಬಾ ಅವಶ್ಯಕತೆ ಇದ್ದಾಗ ಅದರ ಉಪಯೋಗ ಪಡೆಯಬೇಕು. ಇದರಲ್ಲಿ ತೆಗೆದ ಹಣಕ್ಕೆ ಬಡ್ಡಿ ಸ್ವಲ್ಪ ಜಾಸ್ತಿ ಇರುತ್ತದೆ.

● ಕ್ರೆಡಿಟ್ ಕಾರ್ಡ್ ಪಿನ್, ಓ.ಟಿ.ಪಿ ಯಾರೊಂದಿಗೂ ಹಂಚಿಕೊಳ್ಳಬಾರದು. ಕ್ರೆಡಿಟ್ ಕಾರ್ಡ್ ಹೊಂದಿದ ಬ್ಯಾಂಕಿನಿಂದ ಅಂತ ತಿಳಿದು ಕಂಡ ಕಂಡ ಲಿಂಕ್ ಒತ್ತಿ, ನಿಮ್ಮ ವೈಯಕ್ತಿಕ ಮಾಹಿತಿ ನೀಡಿ ಮೋಸಹೋಗದಿರಿ.

● ಕ್ರೆಡಿಟ್ ಕಾರ್ಡ್ ನೀಡಿದ ಬ್ಯಾಂಕುಗಳು ನೀವು ಕಟ್ಟಬೇಕಾದ ಹಣವನ್ನು ಕಟ್ಟಲಿಕ್ಕೆ ಫೋನ್ ಮಾಡಿ ನೆನಪಿಸುವುದಿಲ್ಲ ಹಾಗೂ ಅಂಚೆಯ ಮೂಲಕ ಜ್ಞಾಪನ ಪತ್ರ ಕಳುಹಿಸುವುದಿಲ್ಲ. ನೀವೇ ಇ-ಮೇಲ್ ಮೂಲಕ, ಮೆಸೇಜ್ ಮೂಲಕ ಬಂದ ಸಂದೇಶ ನೋಡಿ ನಿಗದಿತ ಸಮಯಕ್ಕೆ ಪಾವತಿಸಬೇಕು.ಕೆಲವು ಕಾರ್ಡುಗಳಿಗೆ ವಾರ್ಷಿಕ ಸೇವಾ ಶುಲ್ಕವಿರುತ್ತದೆ. ಅದರ ಬಗ್ಗೆ ತಿಳಿದು ಕೊಳ್ಳಬೇಕು.

● ನಿಮ್ಮ ಕ್ರೆಡಿಟ್ ಕಾರ್ಡ್‌ನ ಸಂಪೂರ್ಣ ಮಾಹಿತಿಯನ್ನು ಅಧಿಕೃತ ವಾದ ಆ್ಯಪ್‌ನ್ನು ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಪ್ರತಿನಿತ್ಯ ಪರಿಶೀಲಿಸಬಹುದು.

● ಸರಿಯಾದ ಸಮಯಕ್ಕೆ ಕ್ರೆಡಿಟ್ ಕಾರ್ಡಿನ ಹಣ ಮರುಪಾವತಿಸಿದರೆ ಬಡ್ಡಿರಹಿತ ಸಾಲ ಮರುಪಾವತಿ ಮಾಡಿದ ಹಾಗೆ ಆಗುತ್ತದೆ. ಮಾತ್ರವಲ್ಲ ನಿಮ್ಮ ಸಿಬಿಲ್ ಸ್ಕೋರ್ ಕೂಡ ಹಾಳಾಗುವುದಿಲ್ಲ. ಮುಂದೆ ದೊಡ್ಡ ಮೊತ್ತದ ಸಾಲ ಪಡೆಯಲು ಅನುಕೂಲವಾಗುತ್ತದೆ.

● ಕ್ರೆಡಿಟ್ ಕಾರ್ಡ್ ಬೇರೆಯವರಿಗೆ ಸಿಕ್ಕಿ ದುರುಪಯೋಗ ಆಗದಂತೆ ನಿಮ್ಮ ಆ್ಯಪ್‌ನಲ್ಲಿ ನಿಮ್ಮ ಲಿಮಿಟ್ ಅನ್ನು ಬೇಡದಿದ್ದಾಗ ಕಡಿಮೆ ಮಾಡಿಟ್ಟುಕೊಳ್ಳಬಹುದು, ಬೇಕಾದಾಗ ಜಾಸ್ತಿ ಮಾಡಿಕೊಳ್ಳಬಹುದು. ಲಿಮಿಟ್ ಡಿಸೇಬಲ್ ಕೂಡ ಮಾಡಿಟ್ಟುಕೊಳ್ಳಬಹುದು. ಬೇಕಾದಾಗ ಮಾತ್ರ ಎನೇಬಲ್ ಮಾಡಿಕೊಳ್ಳಬಹುದು.

ಒಟ್ಟಿನಲ್ಲಿ ಅವಶ್ಯಕತೆಗನುಗುಣವಾಗಿ ಎಚ್ಚರಿಕೆಯಿಂದ ಬಳಸಿದರೆ,ಸರಿಯಾದ ಸಮಯಕ್ಕೆ ಕಾರ್ಡಿನಿಂದ ಬಳಸಿದ ಹಣವನ್ನು ಮರು ಪಾವತಿಸಿದರೆ ಕ್ರೆಡಿಟ್ ಕಾರ್ಡ್ ನಿಜಕ್ಕೂ ಆಪತ್ಕಾಲದ ಗೆಳೆಯ. ವಿವೇಚನೆ ಇಲ್ಲದೆ ಬಳಸಿದರೆ, ಸರಿಯಾದ ಸಮಯಕ್ಕೆ ಮರು ಪಾವತಿಸದಿದ್ದಲ್ಲಿ ತೊಂದರೆ ತಪ್ಪಿದ್ದಲ್ಲ.

–ರಾಘವೇಂದ್ರ ಜೋಯಿಸ್, ಮೈಸೂರು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ರಷ್ಯಾ ಪ್ರವಾಸಕ್ಕಾಗಿ ಮಾಸ್ಕೋ ತಲುಪಿದ ಪ್ರಧಾನಿ ಮೋದಿ



ಮಾಸ್ಕೋ, ಜು. 8: ಪ್ರಧಾನಿ ನರೇಂದ್ರ ಮೋದಿ ಸೋಮವಾರ ಮಾಸ್ಕೋ ತಲುಪಿದ್ದು, ರಷ್ಯಾ ಮತ್ತು ನಂತರ ಆಸ್ಟ್ರಿಯಾದ ಎರಡು ದಿನಗಳ ಪ್ರವಾಸವನ್ನು ಪ್ರಾರಂಭಿಸಿದ್ದಾರೆ. ಮಾಸ್ಕೋದ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿಗೆ ಅದ್ದೂರಿ ಸ್ವಾಗತ ನೀಡಲಾಯಿತು.ಮೋದಿಯನ್ನು ರಷ್ಯಾದ 1ನೇ ಉಪಪ್ರಧಾನಿ (1ನೇ ಡಿಪಿಎಂ) ಡೆನಿಸ್ ಮಂಟುರೋವ್ ಬರಮಾಡಿಕೊಂಡರು. 1ನೇ ಡಿಪಿಎಂ ಮಂಟುರೊವ್ ಕೂಡ ಇದೇ ಕಾರಿನಲ್ಲಿ ಪ್ರಧಾನಿ ಮೋದಿಯವರೊಂದಿಗೆ ವಿಮಾನ ನಿಲ್ದಾಣದಿಂದ ಹೋಟೆಲ್‌ಗೆ ತೆರಳಲಿದ್ದಾರೆ.

ಮಂಗಳವಾರ ನಡೆಯಲಿರುವ 22ನೇ ಭಾರತ-ರಷ್ಯಾ ವಾರ್ಷಿಕ ಶೃಂಗಸಭೆಯಲ್ಲಿ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ವ್ಯಾಪಾರ, ಇಂಧನ ಮತ್ತು ರಕ್ಷಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ವಿಸ್ತರಿಸುವ ಮಾರ್ಗಗಳ ಬಗ್ಗೆ ಮಾತುಕತೆ ನಡೆಸುವ ನಿರೀಕ್ಷೆಯಿದೆ.

ಡೇಟಿಂಗ್ ಆ್ಯಪ್ ಮೂಲಕ ಜನರಿಗೆ ವಂಚನೆ

- ಮೂವರು ಯುವತಿಯರು, ಓರ್ವ ಅಪ್ರಾಪ್ತೆ ಸೇರಿ 8 ಮಂದಿ ಬಂಧನ
- ಬಂಧಿತರಿಂದ ಕಾರುಗಳು, ಮೊಬೈಲ್, ಲ್ಯಾಪ್‌ಟಾಪ್, ನಗದು ವಶಕ್ಕೆ



ಮಡಿಕೇರಿ, ಜು. 8– ಡೇಟಿಂಗ್ ಆ್ಯಪ್ ಮೂಲಕ ವಂಚನೆ ಮಾಡುತ್ತಿದ್ದ ಜಾಲವೊಂದನ್ನು ಕುಶಾಲನಗರ ಠಾಣೆ ಪೊಲೀಸರು ಭೇದಿಸಿದ್ದು, ಮೂವರು ಯುವತಿಯರು, ಓರ್ವ ಅಪ್ರಾಪ್ತೆ ಸೇರಿದಂತೆ 8 ಮಂದಿ ಯನ್ನು ಬಂಧಿಸಿ, 2 ಕಾರು, 17 ಮೊಬೈಲ್, 1 ಟ್ಯಾಬ್, ಲ್ಯಾಪ್‌ಟಾಪ್ ಮತ್ತು 24,800 ರೂ. ನಗದು ವಶಪಡಿಸಿಕೊಂಡಿದ್ದಾರೆ.

ಬಂಧಿತರೆಲ್ಲರೂ ಹಾಸನ ಜಿಲ್ಲೆಯವರಾಗಿದ್ದು, ಇವರನ್ನು ಬೆಂಗಳೂರಿನಲ್ಲಿ ಬಂಧಿಸಲಾಗಿದೆ. ಸಕಲೇಶಪುರ ಸುಳ್ಳಕ್ಕಿ ಗ್ರಾಮದ ಮಂಜುನಾಥ್(29), ಚಿಕ್ಕಸತ್ತಿಗಾಲ ಗ್ರಾಮದ ಸಿ.ಎಸ್. ಸಂದೀಪ್ ಕುಮಾರ್(25), ಸಿ.ಬಿ.ರಾಕೇಶ್(24), ಕೆ. ಜಯಲಕ್ಷ್ಮಿ(29), ಬೇಲೂರು ತಾಲೂಕು ರಾಮನಗರ ಗ್ರಾಮದ ಎಸ್.ಸಹನಾ (19), ಪಲ್ಲವಿ(30), ಸಕಲೇಶಪುರ ಇರಗಲ್ ಗ್ರಾಮದ ಅಭಿಷೇಕ್(24) ಮತ್ತು ಅಪ್ರಾಪ್ತೆ ಬಾಲಕಿ ಬಂಧನಕ್ಕೊಳಗಾದವರು.

ಈ ತಂಡವು ಲೊಕಾಂಟೊ (Locanto) ಡೇಟಿಂಗ್ ಆ್ಯಪ್‌ನಲ್ಲಿ ಹಲವಾರು ನಗರಗಳಲ್ಲಿ ಲೈಂಗಿಕತೆಗೆ ಯುವತಿಯರು ಲಭ್ಯವಿದ್ದಾರೆ ಎಂದು ಬಿತ್ತರಿಸಿ, ದೂರವಾಣಿ ಸಂಖ್ಯೆಯನ್ನು ನಮೂದಿಸುತ್ತಿತ್ತು. ಯುವತಿಯರಿಗಾಗಿ ಕರೆ ಮಾಡಿದವರಿಗೆ ಆಯಾ ನಗರಗಳ ಪ್ರತಿಷ್ಠಿತ ಹೋಟೆಲ್‌ಗಳ ಹೆಸರನ್ನು ಹೇಳಿ, ಅವರಿಂದ ಆನ್‌ಲೈನ್ ಮೂಲಕ ಹಣ ವರ್ಗಾವಣೆ ಮಾಡಿಸಿಕೊಂಡು ವಂಚಿಸುತ್ತಿತ್ತು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ.

ವಿವರ: ಕುಶಾಲನಗರದ ಬೈಚನಹಳ್ಳಿ ನಿವಾಸಿ ಮಂಜು ಎಂಬುವರು ಜೂನ್ 26ರಂದು ತಾವು ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಂಡಿದ್ದ ಲೊಕಾಂಟೊ ಆ್ಯಪ್‌ನಲ್ಲಿ ಸರ್ಚ್ ಮಾಡಿದಾಗ Kushalnagar top Model Sexy Aunties Service Available Kushalnagar-23 ಸೈಟ್ ಗೋಚರಿಸಿದೆ. ಅದರಲ್ಲಿದ್ದ ಸಂಖ್ಯೆಗೆ ಕರೆ ಮಾಡಿದಾಗ ಮಾತನಾಡಿದ ವ್ಯಕ್ತಿ, ತನ್ನನ್ನು ಕುಶಾಲನಗರದ ಕಾಳೆಘಾಟ್ ಲಾಡ್ಜ್‌ನ ಮ್ಯಾನೇಜರ್ ಎಂದು ಪರಿಚಯಿಸಿಕೊಂಡಿದ್ದಲ್ಲದೇ, ತಮ್ಮ ಲಾಡ್ಜ್‌ನಲ್ಲಿ ಯುವತಿಯರಿಂದ ಮಸಾಜ್ ಹಾಗೂ ಲೈಂಗಿಕ ಸೇವೆ ಒದಗಿಸಲಾಗುವುದು ಎಂದು ತಿಳಿಸಿದ್ದಾನೆ.

ಒಂದು ಗಂಟೆಗೆ 1,500 ರೂ. ಹಾಗೂ ಒಂದು ರಾತ್ರಿಗೆ 4 ಸಾವಿರ ರೂ. ಶುಲ್ಕ. ಆನ್‌ಲೈನ್ ಮೂಲಕ ಮುಂಗಡವಾಗಿ ಹಣ ಕಳುಹಿಸಿದರೆ ತಾವು ಯುವತಿಯರನ್ನು ವ್ಯವಸ್ಥೆ ಮಾಡುವುದಾಗಿ ಹೇಳಿದ್ದಲ್ಲದೇ ಅವರ ಮೊಬೈಲ್‌ಗೆ ವಾಟ್ಸಾಪ್ ಮೂಲಕ ಕೆಲವು ಯುವತಿಯರ ಫೋಟೋಗಳನ್ನು ರವಾನಿಸಿದ್ದಾನೆ. ಇದನ್ನು ನಂಬಿದ ಮಂಜು, ಗೂಗಲ್‌ಪೇ ಮೂಲಕ 1,500 ರೂ.ಗಳನ್ನು ವರ್ಗಾವಣೆ ಮಾಡಿದ್ದಾರೆ. ಮತ್ತೇ ಅವರಿಗೆ ಕರೆ ಮಾಡಿದ ವ್ಯಕ್ತಿ ಕಾಳೆಘಾಟ್ ಲಾಡ್ಜ್ ಬಳಿ ಬಂದು ವಾಟ್ಸಾಪ್ ಮೂಲಕ ಲೊಕೇಶನ್ ಕಳುಹಿಸುವಂತೆಯೂ, ತಾವು ಹಾಕಿರುವ ಬಟ್ಟೆಯ ಕಲರ್ ಹೇಳುವಂತೆಯೂ ತಿಳಿಸಿದ್ದಾನೆ. ಅಲ್ಲದೇ, ಆನ್‌ಲೈನ್ ಮೂಲಕ ಮತ್ತಷ್ಟು ಹಣ ವರ್ಗಾವಣೆ ಮಾಡಬೇಕೆಂದು ಆತ ಕೇಳಿದ್ದಾನೆ.

ಆದರೆ, ಮಂಜು ಅವರು ನೇರವಾಗಿ ಕಾಳೆಘಾಟ್ ಲಾಡ್ಜ್‌ಗೆ ತೆರಳಿ ವಿಚಾರಿಸಿದಾಗ ಅಲ್ಲಿನವರು ತಮ್ಮ ಲಾಡ್ಜ್‌ನಲ್ಲಿ ಅಂತಹ ಯಾವುದೇ ಚಟುವಟಿಕೆ ನಡೆಯುವುದಿಲ್ಲ. ಈಗಾಗಲೇ ಮೂರ್‍ನಾಲ್ಕು ಜನ ಬಂದು ಇದೇ ರೀತಿ ವಿಚಾರಿಸಿದ್ದಾರೆ. ನಮ್ಮ ಲಾಡ್ಜ್ ಹೆಸರನ್ನು ಹೇಳಿ ನಿಮ್ಮನ್ನು ವಂಚಿಸಿದ್ದಾರೆ ಎಂದು ತಿಳಿಸಿದ ಮೇರೆಗೆ ಮಂಜು ಜೂನ್ 29ರಂದು ಕುಶಾಲನಗರ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಈ ಸಂಬಂಧ ಸೋಮವಾರಪೇಟೆ ಡಿವೈಎಸ್ಪಿ ಆರ್.ವಿ.ಗಂಗಾಧರಪ್ಪ ಮಾರ್ಗದರ್ಶನದಲ್ಲಿ ಕುಶಾಲನಗರ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ. ಪ್ರಕಾಶ್ ನೇತೃತ್ವದಲ್ಲಿ ಸಬ್ ಇನ್ಸ್‌ಪೆಕ್ಟರ್‌ಗಳಾದ ಹೆಚ್.ವಿ. ಚಂದ್ರಶೇಖರ್, ಹೆಚ್.ಟಿ. ಗೀತಾ, ಕುಶಾಲನಗರ ಠಾಣೆ, ಉಪ ವಿಭಾಗ ವ್ಯಾಪ್ತಿಯ ಅಪರಾಧ ಪತ್ತೆ ಸಿಬ್ಬಂದಿ ಹಾಗೂ ತಾಂತ್ರಿಕ ಸಿಬ್ಬಂದಿಯನ್ನೊಳಗೊಂಡ ವಿಶೇಷ ತಂಡ ರಚಿಸಿದ್ದು, ಈ ತಂಡವು ಜುಲೈ 6ರಂದು ಬೆಂಗಳೂರಿನಲ್ಲಿ ವಂಚಕರ ತಂಡವನ್ನು ಬಂಧಿಸಿದೆ. ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ ಎಂದು ಕೊಡಗು ಎಸ್ಪಿ ರಾಮರಾಜನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಆರೋಪಿಗಳು ಕರೆ ಮಾಡಿದ ವ್ಯಕ್ತಿಗಳ ಊರಿನಲ್ಲಿರುವ ಪ್ರತಿಷ್ಠಿತ ಲಾಡ್ಜ್‌ಗಳ ಹೆಸರನ್ನು ಹೇಳಿಕೊಂಡು ಹಲವು ಜನರಿಂದ ಸುಮಾರು 3 ಲಕ್ಷಕ್ಕೂ ಹೆಚ್ಚು ಹಣ ವಂಚಿಸಿರುವುದು ತನಿಖೆಯಿಂದ ತಿಳಿದು ಬಂದಿದೆ ಎಂದು ಹೇಳಿದ ಎಸ್ಪಿಯವರು, ಮಹಿಳೆಯರಿಂದ ಸೆಕ್ಸ್, ಮಸಾಜ್, ವೇಶ್ಯಾವಾಟಿಕೆ ಸೇವೆ ಗಳು ಲಭ್ಯ ಎಂಬುದಾಗಿ ಮೊಬೈಲ್ ಸಂಖ್ಯೆಗಳನ್ನು ನೀಡಿ ಕರೆ ಮಾಡುವಂತೆ ಸೃಷ್ಟಿಸಿರುವ ವೆಬ್‌ಸೈಟ್‌ಗಳನ್ನು ಬಳಸಿ ವಂಚನೆಗೆ ಒಳಗಾಗದಂತೆ ಸಾರ್ವಜನಿಕರಿಗೆ ಸೂಚಿಸಿದ್ದಾರೆ. ಅಲ್ಲದೇ, ಹೋಂ ಸ್ಟೇ, ರೆಸಾರ್ಟ್, ಲಾಡ್ಜ್‌ಗಳಲ್ಲಿ ಯಾವುದೇ ರೀತಿಯ ಅನೈತಿಕ, ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದು ಕಂಡುಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆ ಅಥವಾ ತುರ್ತು ಸಹಾಯವಾಣಿ 112ಕ್ಕೆ ಕರೆ ಮಾಡಿ ಮಾಹಿತಿ ನೀಡುವಂತೆ ಕೋರಿದ್ದಾರೆ.

ಡೆಂಗ್ಯೂ ನಿಯಂತ್ರಣಕ್ಕೆ ಪಾಲಿಕೆಗೆ ಮನವಿ




ಮೈಸೂರು ನಗರದಲ್ಲಿ ಡೆಂಗ್ಯೂ ನಿಯಂತ್ರಣಕ್ಕೆ ಪರಿಣಾಮಕಾರಿ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಪಿ.ಜಿ.ಜನಸ್ಪಂದನ ಫೌಂಡೇಷನ್ ಟ್ರಸ್ಟ್ ವತಿಯಿಂದ ನಗರಪಾಲಿಕೆ ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ಅವರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಜು.8(ಎಸ್‌ಬಿಡಿ)– ಮೈಸೂರು ನಗರದಲ್ಲಿ ಡೆಂಗ್ಯೂ ವ್ಯಾಪಿಸದಂತೆ ಪರಿಣಾಮಕಾರಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಪಿ.ಜಿ.ಜನಸ್ಪಂದನ ಫೌಂಡೇಷನ್ ಟ್ರಸ್ಟ್ ವತಿಯಿಂದ ಮೈಸೂರು ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಲಾಯಿತು.

ಟ್ರಸ್ಟ್‌ನ ಅಧ್ಯಕ್ಷರೂ ಆದ ಮಾಜಿ ಕಾರ್ಪೊರೇಟರ್ ಪಿ.ಪ್ರಶಾಂತ್ ಗೌಡ ನೇತೃತ್ವದಲ್ಲಿ ಪಾಲಿಕೆಯ ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ಅವರಿಗೆ ಮನವಿ ಸಲ್ಲಿಸಿ, ಸಾಂಕ್ರಾಮಿಕ ಡೆಂಗ್ಯೂ ತಡೆಯುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮವನ್ನು ಪರಿಣಾಮಕಾರಿಯಾಗಿ ಕೈಗೊಳ್ಳಬೇಕೆಂದು ಆಗ್ರಹಿಸಲಾಯಿತು.

ರಾಜ್ಯಾದ್ಯಂತ ಡೆಂಗ್ಯೂ ವ್ಯಾಪಿಸುತ್ತಿದ್ದು, ಸಾವಿನ ಸಂಖ್ಯೆಯೂ ಹೆಚ್ಚಾಗುತ್ತಿದೆ. ಅದರಲ್ಲೂ ಮಕ್ಕಳಲ್ಲಿ ಹೆಚ್ಚು ಬಾಧಿಸುತ್ತಿದೆ. ಈ ಹಿನ್ನೆಲೆಯಲ್ಲಿ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಮೈಸೂರಿನಲ್ಲಿ ವಿಶೇಷ ನಿಗಾ ವಹಿಸುವುದು ಅಗತ್ಯವಾಗಿದೆ. ಸೊಳ್ಳೆ ನಿಯಂತ್ರಣಕ್ಕೆ ಮುನ್ನೆಚ್ಚರಿಕೆ ಕ್ರಮವಾಗಿ ಫಾಗಿಂಗ್ ಹಾಗೂ ಚರಂಡಿಗಳಲ್ಲಿ ಬ್ಲೀಚಿಂಗ್ ಪುಡಿ ಹಾಕಲಾಗುತ್ತಿತ್ತು. ಆದರೆ ಪ್ರಸ್ತುತ ಈ ಬಗ್ಗೆ ಗಮನಹರಿಸಿಲ್ಲ. ದಸರಾ ಹಾಗೂ ಸ್ವಚ್ಛ ಭಾರತ ಸರ್ವೇಕ್ಷಣೆ ಸಂದರ್ಭಕ್ಕೆ ಸ್ವಚ್ಛತೆ ಸೀಮಿತವಾಗಿಬಿಟ್ಟಿದೆ. ಡೆಂಗ್ಯೂ ನಿಯಂತ್ರಣ ನಿಟ್ಟಿನಲ್ಲಿ 2 ತಿಂಗಳ ಅವಧಿಗಾದರೂ ಪ್ರತೀ ವಾರ್ಡ್‌ಗೆ ಕನಿಷ್ಠ 10 ಮಂದಿ ಸ್ವಚ್ಛತಾ ಕಾರ್ಮಿಕರನ್ನು ತಾತ್ಕಾಲಿಕವಾಗಿ ನಿಯೋಜಿಸುವ ಮೂಲಕ ಸ್ವಚ್ಛತೆ ನಿರ್ವಹಣೆ ಮಾಡಬೇಕು. ಸಂಘ-ಸಂಸ್ಥೆಗಳ ಸಹಕಾರದೊಂದಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದು ಈ ವೇಳೆ ಆಗ್ರಹಿಸಲಾಯಿತು. ಈ ಸಂದರ್ಭದಲ್ಲಿ ಪಶು ವೈದ್ಯಾಧಿಕಾರಿ ಡಾ.ಹರ್ಷ, ಟ್ರಸ್ಟ್‌ನ ಎ.ರವಿ, ವಕೀಲ ಎಂ.ಗೋಪಿನಾಥ, ರಾಮ್‌ಪ್ರಸಾದ್, ರಾಕೇಶ್ ರಾಮೇಗೌಡ, ಗುರುಪ್ರಸಾದ್ ಇದ್ದರು.

ಇಲ್ಲಿದೆ ಡೆಂಗ್ಯೂ ಸ್ಪಾಟ್!



ಮೈಸೂರು ರಾಮಕೃಷ್ಣನಗರದ ಇ ಅಂಡ್ ಎಫ್ ಬ್ಲಾಕ್, 9ನೇ ಕ್ರಾಸ್‌ನ ಚರಂಡಿಯಲ್ಲಿ ನೀರು ನಿಂತಿರುವುದು.

ಮೈಸೂರು, ಜು.8(ಎಸ್‌ಬಿಡಿ)– ಮೈಸೂರಿನಲ್ಲೂ ಡೆಂಗ್ಯೂ ಭೀತಿ ಹೆಚ್ಚಾಗಿದ್ದರೂ ನಗರಪಾಲಿಕೆ ಅಧಿಕಾರಿಗಳು ಮಾತ್ರ ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿಲ್ಲ. ಮೈಸೂರಿನ ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್, 9ನೇ ಕ್ರಾಸ್ ಮಾಧವ ಪಾರ್ಕ್ ಎದುರು ಮಳೆ ನೀರು ಚರಂಡಿಯಲ್ಲಿ ನಿಂತು ಮೂರು ತಿಂಗಳಾಗಿದ್ದು, ಈ ಬಗ್ಗೆ ಸ್ಥಳೀಯರು ಹಲವು ಬಾರಿ ದೂರು ನೀಡಿದ್ದರೂ ಯಾವುದೇ ಕ್ರಮ ವಹಿಸದೆ ನಿರ್ಲಕ್ಷ್ಯ ತಾಳಿದ್ದಾರೆ.

ಆದರೆ ಎಲ್ಲೆಡೆ ಡೆಂಗ್ಯೂ ಹರಡುತ್ತಿರುವುದರಿಂದ ಇಲ್ಲಿನ ನಿವಾಸಿಗಳ ಆತಂಕ ಹೆಚ್ಚಾಗಿದೆ. ಚರಂಡಿಯಲ್ಲಿ ನೀರು ನಿಂತಿರುವುದರಿಂದ ಸೊಳ್ಳೆಗಳ ಕಾಟ ವಿಪರೀತವಾಗಿದೆ. ಆಗಾಗ ಹಾವುಗಳೂ ಕಾಣಿಸಿಕೊಳ್ಳುತ್ತಿವೆ. ಚರಂಡಿಯಿಂದ ರಾಜಕಾಲುವೆಗೆ ಮಳೆ ನೀರು ಹರಿವಿಗೆ ಅಡ್ಡಿಯಾಗಿರುವುದರಿಂದ ಈ ಸಮಸ್ಯೆ ಉಂಟಾಗಿದೆ. ಹಲವು ಬಾರಿ ಪಾಲಿಕೆಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ. ಓರ್ವ ಅಧಿಕಾರಿಯನ್ನು ಸಂಪರ್ಕಿಸಿದರೆ ಅವರು ಇನ್ನೊಬ್ಬ ಅಧಿಕಾರಿಯನ್ನು ಭೇಟಿಯಾಗುವಂತೆ ನುಣುಚಿಕೊಳ್ಳುತ್ತಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳ ಕಚೇರಿಗೂ ಮಾಹಿತಿ ನೀಡಿದ್ದರೂ ಪ್ರಯೋಜನವಾಗಿಲ್ಲ. ಸಮಸ್ಯೆಯ ಗಂಭೀರತೆಯನ್ನು ಯಾವ ಅಧಿಕಾರಿಯೂ ಅರ್ಥ ಮಾಡಿಕೊಳ್ಳುತ್ತಿಲ್ಲ. ಇಲ್ಲಿ ಏನಾದರೂ ಡೆಂಗ್ಯೂ ವ್ಯಾಪಿಸಿದರೆ ಅದಕ್ಕೆ ನಗರಪಾಲಿಕೆ ಹಾಗೂ ಜಿಲ್ಲಾಡಳಿತವೇ ಹೊಣೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

IN THE COURT OF THE HON'BLE PRL. FAMILY COURT AT MYSORE
Crl Misc. No. 329/2023

BETWEEN Petitioners

1. Afreen Taj, W/o Mohammed Faizan Shariff D/o Vazeer Ahmed M M Aged about 28 years
2. Mohammed Adyan S/o. Mohammed Faizan Shariff Aged about 11 months (Since minor represented by his Mother is a Natural guardian Afreen Taj. i.e., 1st petitioner) Residing at Door No-875, 1st Floor, 3rd Stage, Rajivnagar, Mysore - 19.

And Respondent : **Mohammed Faizan Shariff** S/o. Hidayathulla Shariff Aged about 28 years Residing at: Door No 490-1, 1st Floor, 12th Cross, Shivaji Road, North East of N.R Mohalla, Kesare, Mysuru-570007

PAPER PUBLICATION

The petitioners above named has filed the above petition for Maintenance against the respondent, Before this Hon'ble court under section 125 of Cr.P.C., The respondent or any of his men, family person having objection to the petitioner, if any, is hereby called upon to appear before this Court in person or by a pleader duly instructed on 13/08/2024 by 11.00 A.M, failing which and your absence matter will be decided in accordance with law.

Given under my hand and seal of the Court, this the 2nd day of July 2024.

ನ್ಯಾಯಾಲಯದ ಆಪ್ಪಣೆ ಮೇರೆಗೆ,
ಸಹಿ/– ಲಿಪಿಕ ಅಧಿಕಾರಿ, ಕುಟುಂಬ ನ್ಯಾಯಾಲಯ, ಮೈಸೂರು

Advocate for Petitioner
Sd/ Ayisha Sultana
Advocate, Excellent Law, #903, Shop No.7, 1st stage, Rajiv Nagar, Mysore - 570019.

ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮಳವಳ್ಳಿ

ಜಾರಿ ಸಂಖ್ಯೆ : 10/2024

ಡಿಕ್ರಿ ಹೋಲ್ಡರ್ : 1) ಡಿ. ಪ್ರಭಾವತಿ ಮತ್ತು ಇನ್ನಿಬ್ಬರು

ವಿರುದ್ಧ

ತೀರ್ಪುಋಣಿಗಳು : 1)ಬೋರಮ್ಮ ಮೃತ ವಾರಸುದಾರರು ಸಂಪತ್ ಮತ್ತು ಇತರರು.

6) ರಾಧ ಕೋಂ ಚಿನ್ನಸ್ವಾಮಿ ವಾಸ: ಹೊಳಲು ಗ್ರಾಮ, ಕಸಬಾ ಹೋಬಳಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.
7) ಜಯಲಕ್ಷ್ಮೀ ಕೋಂ ಸುಬ್ಬಯ್ಯ ಬಿನ್ ಲೇಟ್ ಪುಟ್ಟಮಾದಪ್ಪ
8) ಅನಿತ ಬಿನ್ ಲೇಟ್ ಪುಟ್ಟಮಾದಪ್ಪ ತೀರ್ಪುಋಣಿ 7 ಮತ್ತು 8 ರವರು ವಾಸ: ಚಿನ್ನಸ್ವಾಮಿ ನಿಲಯ, ಜಿ॥ ರೋಡ್, ಮಳವಳ್ಳಿ ಟೌನ್, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ,

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಜಾರಿ ಅರ್ಜಿಯನ್ನು ಡಿಕ್ರಿ ಹೋಲ್ಡರ್‌ರವರು ತೀರ್ಪುಋಣಿಗಳ ವಿರುದ್ಧ ಜಾರಿ "ಎ" ಷೆಡ್ಯೂಲ್ ಸ್ವತ್ತಿನ ಐಟಂ ನಂ:– 3ರಲ್ಲಿ ತಮ್ಮ ಭಾಗದ ಸ್ವತ್ತನ್ನು ಎಫ್‌ಡಿಪಿ: 09/2006 ರ ಸ್ಕೆಚ್‌ನಲ್ಲಿ ತೋರಿಸಿರುವಂತೆ ಸ್ವಾಧೀನಕ್ಕೆ ಪಡೆದುಕೊಳ್ಳಲು ಹೂಡಿರುತ್ತಾರೆ. ಸದರಿ ಸಂಬಂಧ ತೀರ್ಪುಋಣಿ 6, 7 ಮತ್ತು 8 ರವರಿಗೆ ನ್ಯಾಯಾಲಯದ ಮೂಲಕ ನೋಟೀಸ್ ಹೊರಡಿಸಿದ್ದು, ತಾವು ನೋಟೀಸ್ ಪಡೆದಿರುವುದಿಲ್ಲ. ಕಾರಣ ನಿಮಗೆ ಈ ಪತ್ರಿಕಾ ಪ್ರಕಟಣೆಯ ಮೂಲಕ ನೋಟೀಸ್ ಪ್ರಕಟಿಸುತ್ತಿದ್ದು, ಸದರಿ ಜಾರಿ ಅರ್ಜಿಯ ಸುನಾವಣೆ ದಿನಾಂಕ: 26/07/24 ರಂದು ಇರುತ್ತದೆ. ಆ ದಿನ ಬೆಳಿಗ್ಗೆ 11.00 ಗಂಟೆಗೆ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ತಕರಾರು ಇದ್ದರೆ ಸಲ್ಲಿಸುವುದು, ತಪ್ಪಿದಲ್ಲಿ ಜಾರಿ ಅರ್ಜಿಯಲ್ಲಿ ನಿಮ್ಮಗಳ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯುವುದು.

ಈ ಪ್ರಕಟಣೆಯನ್ನು ನ್ಯಾಯಾಲಯದ ಅಪ್ಪಣೆ ಮತ್ತು ಮೊಹರಿನೊಂದಿಗೆ ದಿನಾಂಕ 28/06/24 ರಂದು ನೀಡಲಾಗಿದೆ.

By Order of the Court
ಸಹಿ/– ಶಿರಸ್ತೇದಾರರು, ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮಳವಳ್ಳಿ
ಡಿಕ್ರಿಹೋಲ್ಡರ್ ಪರ ವಕೀಲರು
ಸಹಿ/– ಹೆಚ್. ಮಾದೇಗೌಡ, ಮದ್ದೂರು

ಅಡ್ಡಂಡ ಸಿ.ಕಾರ್ಯಪ್ಪ ಅವರ 'ಸತ್ಯವನ್ನೇ ಹೇಳುತ್ತೇನೆ' ಹೊಸ ನಾಟಕದ ವಾಚನ ಕಾರ್ಯಕ್ರಮ



ಅಡ್ಡಂಡ ಸಿ.ಕಾರ್ಯಪ್ಪ 'ಸತ್ಯವನ್ನೇ ಹೇಳುತ್ತೇನೆ' ನಾಟಕ ವಾಚಿಸಿದರು.

ಮೈಸೂರು,ಜು.8(ಪಿಎಂ)– ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರ 'ಸತ್ಯವನ್ನೇ ಹೇಳುತ್ತೇನೆ' ನಾಟಕವು ಇದೇ ಸೆಪ್ಟೆಂಬರ್‌ನಿಂದ ಪ್ರದರ್ಶನಗೊಳ್ಳಲು ಸಿದ್ಧತೆ ನಡೆಯುತ್ತಿದ್ದು, 'ಚರಿತ್ರೆಯ ಉತ್ಖನನ' ಉಪ ಶೀರ್ಷಿಕೆಯಡಿಯ ಈ ಹೊಸ ನಾಟಕದ ವಾಚನ ಕಾರ್ಯಕ್ರಮ ಸೋಮವಾರ 'ಹೊಸ ನಾಟಕ ಕೇಳಲು ಬನ್ನಿ' ಶೀರ್ಷಿಕೆಯಡಿ ನಡೆಯಿತು.

ಮೈಸೂರಿನ ಲಕ್ಷ್ಮೀಪುರಂನ ಜೆಎಲ್‌ಬಿ ರಸ್ತೆಯಲ್ಲಿರುವ ಪಂಚವಟಿ ಹೋಟೆಲ್‌ನ ಪಾರ್ಟಿಹಾಲ್‌ನಲ್ಲಿ ಹಮ್ಮಿಕೊಂಡಿದ್ದ ವಾಚನ ಕಾರ್ಯಕ್ರಮದಲ್ಲಿ ಅಡ್ಡಂಡ ಸಿ.ಕಾರ್ಯಪ್ಪ ನಾಟಕ ದೃಶ್ಯಗಳನ್ನು ಓದುವ ಮೂಲಕ ಸಭಿಕರ ಮುಂದೆ ಅನಾವರಣಗೊಳಿಸಿದರು. ಸುಮಾರು 2 ಗಂಟೆ ಕಾಲ ನಾಟಕದ ವಾಚನ ನಡೆಯಿತು. ಬಳಿಕ ನಾಟಕದ ಬಗ್ಗೆ ಸಭಿಕರೊಂದಿಗೆ ಚರ್ಚೆ ನಡೆಯಿತು. ಸಭಿಕರು ನಾಟಕದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಪ್ರದರ್ಶನಕ್ಕೆ ಸಜ್ಜುಗೊಳಿಸಲು ತಮ್ಮ ಸಲಹೆಗಳನ್ನು ನೀಡಿದರು.

ಇದಕ್ಕೂ ಮುನ್ನ ಮಾತನಾಡಿದ ಅಡ್ಡಂಡ ಸಿ.ಕಾರ್ಯಪ್ಪ, ಸಾಮಾನ್ಯವಾಗಿ ನಾಟಕ ಕೇಳುವ ಕಾರ್ಯಕ್ರಮ ಇರುವುದಿಲ್ಲ. ಆದರೆ ನಾವು ಅಂತಹ ಹೊಸ ಪರಂಪರೆಗೆ ನಾಂದಿ ಹಾಡಿದ್ದೇವೆ. ಕಳೆದ 2 ವರ್ಷಗಳಿಂದ ನಾಟಕ ಕೇಳುವ ಕಾರ್ಯಕ್ರಮ ಆಯೋಜನೆ ಮಾಡುತ್ತಾ ಬಂದಿದ್ದೇವೆ. 'ಕರಿನೀರ ವೀರ' ನಾಟಕದ ಪತ್ಯ ಸಿದ್ಧಪಡಿಸಿದಾಗಲೂ ನಾಟಕ ಕೇಳುವ ಕಾರ್ಯಕ್ರಮ ಮಾಡಿದ್ದೆವು. ಏಕಾಏಕಿ ನಾಟಕ ಪ್ರದರ್ಶನ ಕಾಣುವುದಕ್ಕೂ ಮುನ್ನ ಅಭಿಪ್ರಾಯ ಸಂಗ್ರಹಿಸುವ ಹಾಗೂ ಆ ಮೂಲಕ ಪ್ರದರ್ಶನವನ್ನು ಇನ್ನಷ್ಟು ಉತ್ತಮಗೊಳಿಸುವ ಕಾರಣಕ್ಕೆ ನಾಟಕ ಕೇಳುವ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾ ಬಂದಿದ್ದೇವೆ ಎಂದರು. ಅನೇಕ ಮುಚ್ಚಿಟ್ಟ ಚರಿತ್ರೆಯನ್ನು ಬಯಲುಗೊಳಿಸುವ ನಾಟಕ ಇದು. 'ಸತ್ಯವನ್ನೇ ಹೇಳುತ್ತೇನೆ' ಎಂಬುದು ನ್ಯಾಯಾಲಯಗಳಲ್ಲಿ ಬಳಸುವ ವಾಕ್ಯ. ಅದನ್ನೇ ನಾನು ನಾಟಕದ ಶೀರ್ಷಿಕೆಯಾಗಿ ಆಯ್ಕೆ ಮಾಡಿದ್ದೇನೆ. ಮುಖ್ಯ ಪಾತ್ರಗಳಲ್ಲಿ ಮಹಾತ್ಮ ಗಾಂಧಿ, ನೆಹರು, ಸರ್ದಾರ್ ವಲ್ಲಭಬಾಯ್ ಪಟೇಲ್, ಸುಭಾಷ್ ಚಂದ್ರ ಬೋಸ್, ಡಾ.ಅಂಬೇಡ್ಕರ್ ಹಾಗೂ ವೀರ ಸಾವರ್ಕರ್ ಅವರು ಕಾಣಿಸಿಕೊಳ್ಳುತ್ತಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಯಾಗುವ ವಿಷಯಗಳನ್ನೇ ನಾನು ಅಧಿಕೃತವೇ? ಸತ್ಯವೇ? ಎಂಬ ಬಗ್ಗೆ ಪರಿಶೀಲಿಸಿಕೊಂಡು ನಾಟಕಕ್ಕೆ ಬಳಸಿದ್ದು, ಜೊತೆಗೆ ಅದಕ್ಕೆ ಪೂರಕವಾಗಿ 42 ಪುಸ್ತಕಗಳನ್ನು ಅಧ್ಯಯನ ಮಾಡಿ ಈ ನಾಟಕದ ಪುಸ್ತಕ ರಚನೆ ಮಾಡಿದ್ದೇನೆ. ಈ ನಾಟಕದ ಎಲ್ಲಾ ಸಂಭಾಷಣೆಗಳಿಗೂ ಆಧಾರಗಳಿವೆ ಎಂದು ತಿಳಿಸಿದರು.

ಆದಿತ್ಯ ಅಧಿಕಾರಿ ಆಸ್ಪತ್ರೆಯ ಮುಖ್ಯಸ್ಥ ಡಾ.ಚಂದ್ರಶೇಖರ್, ಸಾಹಿತಿ ಪ್ರೊ.ಚಂದ್ರಶೇಖರ್, ಪಂಚವಟಿ ಹೋಟೆಲ್ ಮಾಲೀಕ ಸತೀಶ್, ಶಿಲ್ಪ ಕಲಾವಿದ ಮಂಜುನಾಥ್, ಸಾಹಿತಿ ಪ್ರವೀಣ್ ಕುಮಾರ್ ಮಾವಿನಕಾಡು, ವಕೀಲೆ ಸ್ಮಿತಾ, ಸಮಾಜ ಸೇವಕ ಗೋಪಿನಾಥ್, ವಿಶ್ವ ಹಿಂದೂ ಪರಿಷತ್‌ನ ಮಧು ಶಂಕರ್, ಕನ್ನಡಪರ ಹೋರಾಟಗಾರ ಅರವಿಂದ್, ಅಡ್ಡಂಡ ಸಿ. ಕಾರ್ಯಪ್ಪ ಅವರ ಪತ್ನಿ ಅನಿತಾ ಕಾರ್ಯಪ್ಪ ಸೇರಿದಂತೆ 40ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

> "ಕಾಲ್ಪನಿಕ ಸನ್ನಿವೇಶಗಳ ಹಿನ್ನೆಲೆಯಲ್ಲಿ ನೈಜ ಸಂಗತಿಗಳ ಅನಾವರಣವೇ ಈ ನಾಟಕ. 'ದೃಶ್ಯ'ಕ್ಕೆ ಬದಲಾಗಿ ಉತ್ಖನನ ಪದ ಪ್ರಯೋಗಿಸಿದ್ದೇನೆ. ಒಟ್ಟು 12 ಉತ್ಖನನಗಳ (ದೃಶ್ಯ) ನಾಟಕ ಇದು. ಆಗಸ್ಟ್‌ನಲ್ಲಿ ಕಲಾವಿದರ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಬಳಿಕ ತಾಲೀಮು ಪ್ರಾರಂಭವಾಗಲಿದೆ. ಸೆಪ್ಟೆಂಬರ್‌ನಿಂದ ಪ್ರದರ್ಶನಗಳು ಆರಂಭವಾಗಲಿವೆ. ಈ ನಾಟಕ ನನ್ನದೇ ನಿರ್ದೇಶನದಲ್ಲಿ ಮೂಡಿಬರಲಿದೆ.
> –ಅಡ್ಡಂಡ ಸಿ.ಕಾರ್ಯಪ್ಪ

AFFIDAVIT FOR CHANGE IN SHARE HOLDER NAME

I, **AKKAMAHADEVI PATIL,** W/o Dr. Jayadev Betkerur, aged about 60 years, residing at 1095, Avanika, E&F Block, Ramakrishna Nagar, Mysore had purchased shares through Karvy Consultants which is not functioning now. My FOLIOS have been transferred to IIFL SECURITIES.

While purchasing the shares my name was mentioned as **AKKAMAHADEVI JAYADEV.** However my name is **AKKAMAHADEVI PATIL** as mentioned in my PAN card No. AESPP 5747P and my AADHAR CARD. I hereby declare that the names **AKKAMAHADEVI JAYADEV** and **AKKAMAHADEVI PATIL** are of one and the same person. Her name may be changed as **AKKAMAHADEVI PATIL,** vide affidavit sworn in before Notary M. Anantha Murthy, Dated 06.07.2024.

Sd/- Akkamahadevi Patil

ಫಿಸಿಯೋಥೆರಪಿ ಚಿಕಿತ್ಸಾ ಶಿಬಿರ


ಮೈಸೂರು, ಜು. 8–ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ ವತಿಯಿಂದ ಜು. 10 ರಿಂದ 21 ದಿನಗಳ ಕಾಲ ಶ್ರೀರಾಂಪುರ 2ನೇ ಹಂತದ ಶ್ರೀ ಸಂಕಷ್ಟಹರ ಗಣಪತಿ ಸೇವಾ ಸಮಿತಿ ಆವರಣದಲ್ಲಿ ಅಕ್ಯೂಪ್ರೆಶರ್, ಸುಜೋಕ್, ಅಕ್ಯು ಡಿಜಿಟಲ್ ಫಿಸಿಯೋಥೆರಪಿ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 10.30 ರಿಂದ ಸಂಜೆ 5.30 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9845182716, 7892798768 ಸಂಪರ್ಕಿಸಬಹುದು.


ಡಾ॥ ಶ್ಯಾಮ್‌ಪ್ರಸಾದ್ ಮುಖರ್ಜಿ ಜನುಮದಿನ ಆಚರಣೆ



ಬಿಜೆಪಿ ಚಾಮುಂಡೇಶ್ವರಿ ಗ್ರಾಮಾಂತರ ಮಹಿಳಾ ಮೋರ್ಚಾ ವತಿಯಿಂದ ಡಾ॥ ಶ್ಯಾಮ್ ಪ್ರಸಾದ್ ಮುಖರ್ಜಿ ಜನುಮದಿನ ಅಂಗವಾಗಿ ವಿವಿಧ ಗಿಡ ನೆಡಲಾಯಿತು. ಚಿತ್ರದಲ್ಲಿ ಬಿಜೆಪಿ ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜ್, ಚಾಮುಂಡೇಶ್ವರಿ ಗ್ರಾಮಾಂತರ ಮಹಿಳಾ ಮೋರ್ಚಾ ಅಧ್ಯಕ್ಷೆ ಸವಿತಾಗೌಡ, ಚಾಮುಂಡೇಶ್ವರಿ ಗ್ರಾಮಾಂತರ ಅಧ್ಯಕ್ಷ ಪೈ.ಟಿ.ರವಿ, ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಹೇಮಂತ್, ಸಂಚಾಲಕರಾದ ಸುನಿಲ್, ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಯಮುನಾ ಕೃಷ್ಣಮೂರ್ತಿ, ಉಪಾಧ್ಯಕ್ಷರಾದ ಗೀತಾ ಪ್ರಸಾದ್, ಕೃಷ್ಣವೇಣಿ, ರೇಖಾ, ಮಹಾಶಕ್ತಿ ಕೇಂದ್ರದ ಅಧ್ಯಕ್ಷರಾದ ಶಾಲಿನಿ, ರೈತ ಮೋರ್ಚಾ ಅಧ್ಯಕ್ಷರಾದ ರಾಧಾ, ಅನಿತಾ, ಶೃತಿ, ಯಶೋಧ ರಾಜು ಇನ್ನಿತರರಿದ್ದಾರೆ.

ರಾಜ್ಯದ ಹಲವೆಡೆ 159 ಹೊಸ ಡೆಂಗ್ಯೂ ಪ್ರಕರಣ ಪತ್ತೆ
3.18 ಕೋಟಿ ಪ್ಯಾರಸಿಟಮಾಲ್ ಮಾತ್ರೆ ದಾಸ್ತಾನು





ಬೆಂಗಳೂರು: ರಾಜ್ಯದ ಹಲವು ಕಡೆಗಳಲ್ಲಿ 159 ಹೊಸ ಡೆಂಗ್ಯೂ ಪ್ರಕರಣಗಳು ವರದಿಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 301ಕ್ಕೆ ಏರಿಕೆಯಾಗಿದೆ. ಆರೋಗ್ಯ ಇಲಾಖೆ ವಿವಿಧ ಉಪಕ್ರಮಗಳನ್ನು ಕೈಗೊಂಡಿದ್ದರೂ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗಿಲ್ಲ. ಕಳೆದ ಜನವರಿಯಿಂದ ಇದುವರೆಗೂ ಡೆಂಗ್ಯೂ ಜ್ವರದಿಂದ 6 ಮಂದಿ ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಕಳೆದ 24 ಗಂಟೆಯಲ್ಲಿ 954 ಮಂದಿಗೆ ಪರೀಕ್ಷೆ ಮಾಡಲಾಗಿದ್ದು, 159 ಮಂದಿಯಲ್ಲಿ ಸೋಂಕು ಪತ್ತೆಯಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಅತೀ ಹೆಚ್ಚು ಅಂದರೆ, 80 ಪ್ರಕರಣಗಳು ವರದಿಯಾಗಿವೆ. ಇದರಿಂದಾಗಿ ಒಟ್ಟು ಪ್ರಕರಣಗಳ ಸಂಖ್ಯೆ 1,988 ತಲುಪಿದೆ. ಡೆಂಗ್ಯೂ ಪೀಡಿತರಲ್ಲಿ ಸದ್ಯ 130 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಉಳಿದಂತೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ 25, ಚಿಕ್ಕಬಳ್ಳಾಪುರ 8, ತುಮಕೂರು 12, ದಾವಣಗೆರೆ 10, ಗದಗ 5, ಯಾದಗಿರಿ 2, ಬೀದರ್ 13, ಕೊಪ್ಪಳ 1, ಹಾಸನ 3 ಪ್ರಕರಣಗಳು ಪತ್ತೆಯಾಗಿವೆ.

301 ಸಕ್ರಿಯ ಪ್ರಕರಣಗಳ ಪೈಕಿ 35 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೊಸದಾಗಿ ಡೆಂಗ್ಯೂಪೀಡಿತರಾದವರಲ್ಲಿ ಮೂವರು ಒಂದು ವರ್ಷದೊಳಗಿನವರಾದರೆ, 48 ಮಂದಿ ಒಂದರಿಂದ 18 ವರ್ಷದೊಳಗಿನವರು. 108 ಮಂದಿ 18 ವರ್ಷ ಮೇಲ್ಪಟ್ಟವರು. ರಾಜ್ಯದಲ್ಲಿ ಈ ವರ್ಷ ವರದಿಯಾದ ಒಟ್ಟು ಡೆಂಗ್ಯೂ ಪ್ರಕರಣಗಳ ಸಂಖ್ಯೆ 7,165ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ಹೆಚ್ಚುತ್ತಿರುವ ಡೆಂಗ್ಯೂ ಪ್ರಕರಣಗಳನ್ನು ತಡೆಗಟ್ಟಲು ಆರೋಗ್ಯ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಂಡಿದೆ. ಅಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರು ಮನೆಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸುತ್ತಿದ್ದಾರೆ. ಅಗತ್ಯಬಿದ್ದಲ್ಲಿ ಈಡಿಸ್ ಸೊಳ್ಳೆಗಳ ನಿಯಂತ್ರಣಕ್ಕೆ ಔಷಧ ಸಿಂಪಡಿಸುತ್ತಿದ್ದಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ ನೀಡಿದ್ದಾರೆ. ರಾಜ್ಯದ ಡೆಂಗ್ಯೂ ಸ್ಥಿತಿಗತಿಗಳ ಕುರಿತ ದೈನಂದಿನ ಅಧಿಕೃತ ಮಾಹಿತಿ ಇಲ್ಲಿದೆ. ಈ ಮಾಹಿತಿಯನ್ನು ಪ್ರತಿದಿನ ಹಂಚಿ ಕೊಳ್ಳಲಾಗುವುದು.

'ಪ್ಯಾರಸಿಟಮಾಲ್' ಮಾತ್ರೆ ದಾಸ್ತಾನು: ಡೆಂಗ್ಯೂ ಜ್ವರ ನಿಯಂತ್ರಿಸಲು ಸಹಕಾರಿಯಾಗಿರುವ 'ಪ್ಯಾರಸಿಟಮಾಲ್' ಅಗತ್ಯ ಪ್ರಮಾಣದಲ್ಲಿ ದಾಸ್ತಾನಿದೆ. ವೈದ್ಯಕೀಯ ಸಂಸ್ಥೆಗಳಿಂದ 8.72 ಕೋಟಿ ಪ್ಯಾರಸಿಟಮಾಲ್ 650 ಎಂ.ಜಿ ಮಾತ್ರೆಗಳಿಗೆ ಬೇಡಿಕೆ ಬಂದಿತ್ತು. ಈ ಔಷಧ'ವ'ನ್ನು ಸರಬರಾಜು ಮಾಡಲಾಗಿದೆ. ರಾಜ್ಯದ ಎಲ್ಲ ಔಷಧ ಉಗ್ರಾಣಗಳಲ್ಲಿ 3.7 ಕೋಟಿ ಮಾತ್ರೆಗಳು ಲಭ್ಯವಿವೆ. ರಾಜ್ಯದ ವಿವಿಧ ವೈದ್ಯಕೀಯ ಸಂಸ್ಥೆಗಳಲ್ಲಿ 3.18 ಕೋಟಿ ಮಾತ್ರೆಗಳ ದಾಸ್ತಾನಿದೆ ಎಂದು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಪುರಸಭಾ ಕಾರ್ಯಾಲಯ, ತಿ.ನರಸೀಪುರ
ತಿ.ನರಸೀಪುರ, ಮೈಸೂರು ಜಿಲ್ಲೆ
ಕಛೇರಿ : 08227-261232, ಇಮೇಲ್: ka.tnarasipura.tmc@gmail.com
ವೆಬ್‌ಸೈಟ್: www.tnarasipuratown.mrc.gov.in

ಸಂ: : ಪುಸ/ತಿನಪು/24.10%/ಟೆಂಡರ್–01/2024–25 ದಿನಾಂಕ: 05.07.2024

ಟೆಂಡರ್ ಪ್ರಕಟಣೆ

ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಎಸ್.ಎಫ್.ಸಿ ಶೇ.24.10 ಅನುದಾನದಲ್ಲಿ ಅರ್ಹ ಗುತ್ತಿಗೆದಾರರು/ಏಜೆನ್ಸಿದಾರರಿಂದ KW-1, ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಇಂಡೆಂಟ್ ಸಂಖ್ಯೆ **(01) DMA/2024-25/EL/WORK_INDENT20708** ಟೆಂಡರ್‌ಗಿಟ್ಟ ಮೊತ್ತ **ರೂ.1.14 ಲಕ್ಷಗಳು** ಕಾಮಗಾರಿಗೆ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರರು ಕೆಪಿಪಿ ಪೋರ್ಟಲ್ ಮೂಲಕ **http://kppp.karnataka.gov.in** ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು.

1. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 20–07–2024 ಸಂಜೆ 5.30 ಗಂಟೆವರೆಗೆ**
2. ಟೆಂಡರ್ ತೆರೆಯುವ **ದಿನಾಂಕ: 22–07–2024 ಬೆಳಿಗ್ಗೆ 11.00 ಗಂಟೆಗೆ ಅಥವಾ** ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು

ಸೂಚನೆ : 1) ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ಹಾಗೂ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು/ಏಜೆನ್ಸಿದಾರರು **http://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು. **2)** 18.00% GST will be added

ಸಹಿ/–
ಮುಖ್ಯಾಧಿಕಾರಿಗಳು,
ಪುರಸಭೆ, ತಿ.ನರಸೀಪುರ

DIPR/MYS/KAVITA/235/2024-25

ಜು.14, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಗೆ ಅಭಿನಂದನಾ ಸಮಾರಂಭ

ಸಿ.ಎಸ್.ಪುಟ್ಟರಾಜು ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ

ಪಾಂಡವಪುರ, ಜು.8– ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಜತೆ ಜಿಲ್ಲೆಯ ರೈತರು ಹಾಗೂ ಮಹಿಳೆಯರಿಗೆ ಉದ್ಯೋಗ ಸೃಷ್ಟಿಸುವ ಉದ್ಯಮಗಳ ಬಗ್ಗೆ ಚರ್ಚಿಸಲಾಗಿದ್ದು, ಜಿಲ್ಲೆಯ ಆಯ್ದ ಸ್ಥಳಗಳಲ್ಲಿ ಗಾರ್ಮೆಂಟ್ಸ್ ಕಾರ್ಖಾನೆ ಆರಂಭಿಸಲು ಚಿಂತನೆ ನಡೆಸುತ್ತಿದ್ದಾರೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹೇಳಿದರು.

ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಅಭಿನಂದನೆ ನಡೆಸುವ ಸಂಬಂಧವಾಗಿ ನಡೆದ ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ದೇಶದ ಪ್ರಧಾನಿ ನರೇಂದ್ರ ಮೋದಿ ಅವರು ಎಚ್.ಡಿ.ಕುಮಾರಸ್ವಾಮಿ ಅವರ ಮೇಲೆ ವಿಶ್ವಾಸವಿಟ್ಟು ಉಕ್ಕು ಮತ್ತು ಬೃಹತ್ ಕೈಗಾರಿಕೆ ಖಾತೆ ನೀಡಿದ್ದಾರೆ. ಜತೆಗೆ ಪ್ರಧಾನಮಂತ್ರಿಯವರ ಸಮಿತಿಯಲ್ಲೂ ಸ್ಥಾನ ನೀಡಿದ್ದು ಇದು ರಾಜ್ಯಕ್ಕೆ ಸಂದ ಗೌರವವಾಗಿದೆ ಎಂದು ಬಣ್ಣಿಸಿದರು.

ಕುಮಾರಸ್ವಾಮಿ ಅವರು ಒಂದು ಕಣ್ಣು ದೇಶಕ್ಕೆ, ಒಂದು ಕಣ್ಣು ಮಂಡ್ಯಕ್ಕೆ ಎನ್ನುವ ರೀತಿಯಲ್ಲಿ ಕೆಲಸ ಮಾಡಲಿದ್ದು, ಅಭಿವೃದ್ಧಿಯಲ್ಲಿ ಹಿಂದೆ ಬೀಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಚಾಟಿ ಹಿಡಿದು ಅಧಿಕಾರಿಗಳಿಂದ ಕೆಲಸ ಮಾಡಿಸಬೇಕಾಗುತ್ತದೆ ಎಂದು ಹೇಳಿದರು.



ಪಾಂಡವಪುರ ಪಟ್ಟಣದ ಟಿಎಪಿಸಿಎಂಎಸ್ ಸಭಾಂಗಣದಲ್ಲಿ ಎಚ್‌ಡಿಕೆ ಅಭಿನಂದಿಸುವ ಸಂಬಂಧ ನಡೆದ ಜೆಡಿಎಸ್–ಬಿಜೆಪಿ ಕಾರ್ಯಕರ್ತರ ಸಭೆಯನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು.

ಜು.14 ರಂದು ಅಭಿನಂದನಾ ಸಮಾರಂಭ: ಮೇಲುಕೋಟೆ ವಿಧಾನಸಭಾ ಕ್ಷೇತ್ರದಿಂದ ಜು.14 ರಂದು ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರಿಂದ ಬೃಹತ್ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ. ಸಮಾರಂಭದಲ್ಲಿ 30 ರಿಂದ 40 ಸಾವಿರ ಜನ ಭಾಗವಹಿಸಲಿದ್ದು, ಎಲ್ಲರಿಗೂ ಸಸ್ಯಾಹಾರಿ ಮತ್ತು ಮಾಂಸಾಹಾರ ಊಟ ಏರ್ಪಡಿಸಲಾಗಿದೆ. ಅಂದು ಡಾ.ರಾಜ್ ಕುಮಾರ್ ವೃತ್ತದಿಂದ ಪಾಂಡವ ಕ್ರೀಡಾಂಗಣದ ಬಳಿಯ ವೇದಿಕೆವರೆಗೂ ಕುಮಾರಸ್ವಾಮಿ ಅವರನ್ನು ಅದ್ಧೂರಿ ಮೆರವಣಿಗೆ ಮೂಲಕ ಕರೆತರಲಾಗುವುದು. ಊಟದ ವ್ಯವಸ್ಥೆ, ಮೆರವಣಿಗೆ, ವೇದಿಕೆ ಕಾರ್ಯಕ್ರಮ ಹಾಗೂ ಜನರನ್ನು ಕರೆತರುವ ವಿಚಾರ ಎಲ್ಲದಕ್ಕೂ ಸಮಿತಿ ರಚಿಸುವ ಮೂಲಕ ಕಾರ್ಯಕ್ರಮ ಶಿಸ್ತಿನಿಂದ ಜರುಗುವಂತೆ ನೋಡಿಕೊಳ್ಳಲಾಗುವುದು ಎಂದು ವಿವರಿಸಿದರು.

ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್ ಮಾತನಾಡಿ, ಎಚ್‌ಡಿಕೆ ಗೆಲುವು ಜೆಡಿಎಸ್ ಕಾರ್ಯಕರ್ತರಿಗೆ ಟಾನಿಕ್ ನೀಡಿದಂತಾಗಿದೆ. ಹಿಂದಿನ ಸೋಲು, ಹತಾಶೆ, ನಿರಾಶೆ ಎಲ್ಲವನ್ನು ಈ ಗೆಲುವು ಮರೆಸಿದೆ. ಗೆಲುವಿನ ಯಶಸ್ಸು ಮತ್ತು ಉತ್ಸಾಹವನ್ನು ಮುಂದಿನ ಜಿಪಂ, ತಾಪಂ ಹಾಗೂ ಸ್ಥಳೀಯ ಸಂಸ್ಥೆ ಚುನಾವಣೆಗಳಿಗೂ ಮುಂದುವರೆಸಬೇಕಿದೆ. ಕುಮಾರಸ್ವಾಮಿ ಅವರ ಜನತಾ ದರ್ಶನಕ್ಕೆ ಅಡ್ಡಿಪಡಿಸುವ ಮೂಲಕ ಕಾಂಗ್ರೆಸ್ ದ್ವೇಷದ ರಾಜಕಾರಣ ಮಾಡುತ್ತಿದೆ ಎಂದು ಕಿಡಿಕಾರಿದರು.

ಸಭೆಯಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ಎ.ಮಲ್ಲೇಶ್, ಬಿಜೆಪಿ ಅಧ್ಯಕ್ಷ ಧನಂಜಯ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಗುರುಸ್ವಾಮಿ, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ಲಿಂಗರಾಜು (ಗುಣ), ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಗಳಾ ನವೀನ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮುರಳಿ, ಮುಖಂಡರಾದ ಮಾದೇಗೌಡ, ಎಚ್.ಎನ್.ಮಂಜುನಾಥ್, ಸಗಾಯಂ, ಎಲ್.ಅಶೋಕ್, ಪುರಸಭೆ ಸದಸ್ಯರಾದ ಆರ್.ಸೋಮಶೇಖರ್, ದ್ಯಾವಪ್ಪ ಹಲವರಿದ್ದರು.

ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿ ಕೆಲಸಕ್ಕಾಗಿ ಆಗ್ರಹಿಸಿ ಪ್ರತಿಭಟನೆ

ಭಾರತೀನಗರ, ಜು.8– ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿ ಕೆಲಸ ನೀಡುವಂತೆ ಆಗ್ರಹಿಸಿ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತರು ಕೂಳಗೆರೆ ಗ್ರಾಮಪಂಚಾಯಿತಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಗ್ರಾಪಂ ಮುಂದೆ ಜಮಾಯಿಸಿದ ಕೂಲಿಕಾರರು ಎಲ್ಲಾ ಅಧಿಕಾರಿಗಳ ವಿರುದ್ಧಘೋಷಣೆ ಕೂಗಿ ಅಗತ್ಯ ವಸ್ತುಗಳ ಬೆಲೆ ಏರಿಕೆ, ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನೀಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟಿಸಿದರು.

ಈ ಸಂದರ್ಭದಲ್ಲಿ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಟಿ.ಪಿ. ಅರುಣ್‌ಕುಮಾರ್ ಮಾತನಾಡಿ, ಕೃಷಿ ಕೆಲಸಗಳಿಲ್ಲದೆ ಕೂಲಿಕಾರರ ಬದುಕು ದುಸ್ತರವಾಗಿದೆ. ಕಳೆದ ಹಲವಾರು ತಿಂಗಳುಗಳಿಂದಲೂ ಬರಗಾಲ ಆವರಿಸಿದ್ದು ಕೂಲಿಕಾರರು ಬಿಡಿಗಾಸಿಗೂ ಪರದಾಡುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

2023–24 ನೇ ಸಾಲಿನ ಉದ್ಯೋಗ ಖಾತರಿ ಯೋಜನೆಯಡಿ ಒಂದು ದಿನವು




ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿ ಕೆಲಸ ನೀಡುವಂತೆ ಆಗ್ರಹಿಸಿ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತರು ಕೂಳಗೆರೆ ಗ್ರಾಮಪಂಚಾಯಿತಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಕೆಲಸ ನೀಡದೆ ಇರುವ 42 ಗ್ರಾ.ಪಂಗಳ ಪೈಕಿ ಕೂಳಗೆರೆ ಮೊದಲನೆಯದ್ದಾಗಿದೆ. ಕೃಷಿ ಕೂಲಿಕಾರರು ಕೆಲಸವಿಲ್ಲದೆ ಬೇರೆ ಊರುಗಳಿಗೆ ವಲಸೆ ಹೋಗುವ ಪರಿಸ್ಥಿತಿ ಎದುರಾಗಿದೆ. ಆದ್ದರಿಂದ ಕೂಳಗೆರೆ ಪಂಚಾಯಿತಿ ವ್ಯಾಪ್ತಿಯ ಕೂಲಿಕಾರರಿಗೆ ಕೆಲಸ ನೀಡಬೇಕು. ಕೂಲಿ ಕೆಲಸ ನೀಡುವ ಕುರಿತು ಭರವಸೆ ನೀಡುವವರೆಗೂ ಪಂಚಾಯಿತಿ ಬಿಟ್ಟು ಕದಲುವುದಿಲ್ಲ ಎಂದು ಬಿಗಿಪಟ್ಟು ಹಿಡಿದರು.

ಸ್ಥಳಕ್ಕೆ ತಾಲೂಕು ಪಂಚಾಯಿತಿ ಅಧಿಕಾರಿ ಮಂಜುನಾಥ್ ಆಗಮಿಸಿ, ಕೂಲಿ ಕೆಲಸ ನೀಡುವ ಭರವಸೆ ನೀಡಿದ ಬಳಿಕ ಪ್ರತಿಭಟನೆಯನ್ನು ಅಂತ್ಯಗೊಳಿಸಲಾಯಿತು.

ಇದೇ ವೇಳೆ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲೂಕು ಉಪಾಧ್ಯಕ್ಷ ಗೋಪಾಲಸ್ವಾಮಿ, ಪಿಡಿಓ ರಾಜಣ್ಣ, ಚಿಕ್ಕರಸಿನಕೆರೆ ವಲಯ ಸಮಿತಿ ಅಧ್ಯಕ್ಷೆ ನಾಗಮ್ಮ, ಕಾಯಬಂಧುಗಳಾದ ಜಗದೀಶ್, ಸಿದ್ದರಾಜು, ವರಲಕ್ಷ್ಮಿ, ಆನಂದ್, ಮಹೇಶ್, ಸುಮಿತ್ರ, ರತ್ನಮ್ಮ, ಸೌಮ್ಯ ಸೇರಿದಂತೆ ಹಲವರಿದ್ದರು.

ನಾಳೆ ಜಿ.ಮಾದೇಗೌಡ ಪ್ರಶಸ್ತಿ ಪ್ರದಾನ



ಮಂಡ್ಯ,ಜು.8– ಜುಲೈ 10ರಂದು ಸಂಜೆ 4 ಗಂಟೆಗೆ ಮಂಡ್ಯದ ರೈತ ಸಭಾಂಗಣದಲ್ಲಿ ಜಿ.ಮಾದೇಗೌಡ ಪ್ರತಿಷ್ಠಾನ, ಭಾರತಿ ಎಜುಕೇಶನ್ ಟ್ರಸ್ಟ್ ಭಾರತೀನಗರ, ಮಹಾತ್ಮ ಗಾಂಧಿ ಸ್ಮಾರಕ ಟ್ರಸ್ಟ್ ಮಂಡ್ಯ ಹಾಗೂ ಡಾ.ಜಿ.ಮಾದೇಗೌಡ ಅಭಿಮಾನಿಗಳ ಬಳಗದಿಂದ 24ನೇ ವರ್ಷದ ರಾಜ್ಯಮಟ್ಟದ ಡಾ.ಜಿ.ಮಾದೇಗೌಡ ಸಮಾಜ ಸೇವಾ ಮತ್ತು ಸಾವಯವ ಕೃಷಿಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ನಂಜೇಗೌಡ ತಿಳಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಾರಿಯ ಸಮಾಜ ಸೇವಾ ಪ್ರಶಸ್ತಿಗೆ ಮಾಜಿ ಶಾಸಕ ಡಿ.ಆರ್.ಪಾಟೀಲ್ ಹಾಗೂ ಸಾವಯವ ಕೃಷಿ ಪ್ರಶಸ್ತಿಗೆ ಮಳವಳ್ಳಿ ತಾಲೂಕು ಮಲ್ಲಿಗಹಳ್ಳಿ ಗ್ರಾಮದ ಶ್ರೀಪಾದ ಪಿ.ಆಚಾರ್ಯ ಅವರನ್ನು ಆಯ್ಕೆ ಮಾಡಲಾಗಿದೆ. ಅಂದು ಐದನೇ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಹಾಗೂ ಮಾಜಿ ಸಂಸದ ಡಾ.ಸಿ.ನಾರಾಯಣಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಹೆಸರಾಂತ ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದು, ಮುಖ್ಯ ಅತಿಥಿಗಳಾಗಿ ಶಾಸಕ ಪಿ.ರವಿಕುಮಾರ್ ಗೌಡ ಹಾಗೂ ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು.

ಗ್ರಾ.ಪಂ. ಸದಸ್ಯ ವಸಂತಕುಮಾರ್ ನಿಧನ



ಕೆ.ಆರ್.ಪೇಟೆ,ಜು.8– ಜಿಲ್ಲಾ ದಸ್ತಾವೇಜು ಪತ್ರ ಬರಹಗಾರರು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರಾದ ಸೋಮನಹಳ್ಳಿ–ಪುರ ಗ್ರಾಮದ ನಿವಾಸಿ ಪಿ.ಎಸ್.ವಸಂತಕುಮಾರ್(40) ಇಂದು ನಿಧನರಾಗಿದ್ದಾರೆ.

ಮೃತರು ಪತ್ನಿ ಸವಿತ, ಮೂವರು ಸಹೋದರರು, ಸೋದರ ಮಾವ ತಾಲೂಕು ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಜೆ.ಕುಮಾರ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆಯು ಸೋಮವಾರ ಸಂಜೆ ಹುಟ್ಟೂರು ಪುರ ಗ್ರಾಮದಲ್ಲಿ ನಡೆಯಿತು. ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಕೆಆರ್‌ಎಸ್‌ನಿಂದ ನಾಲೆಗಳಿಗೆ 15 ದಿನ ನೀರು

ಮಂಡ್ಯ, ಜು.8– ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಕೃಷ್ಣರಾಜಸಾಗರ ಜಲಾಶಯದ ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಜುಲೈ 6 ರಂದು ನಡೆದ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಕೃಷ್ಣರಾಜಸಾಗರ ಜಲಾಶಯದಲ್ಲಿ ಲಭ್ಯವಿರುವ ನೀರನ್ನು ಜನ–ಜಾನುವಾರುಗಳು ಕುಡಿಯಲು ಹಾಗೂ ಕೆರೆ–ಕಟ್ಟೆಗಳನ್ನು ತುಂಬಿಸುವ ಸಲುವಾಗಿ ಜುಲೈ 8 ರಿಂದ 15 ದಿನಗಳ ಕಾಲ ನೀರು ಹರಿಸಲಾಗುತ್ತಿದೆ.

ಮುಂದಿನ ದಿನಗಳಲ್ಲಿ ಮಳೆಯ ಪ್ರಮಾಣ ಹಾಗೂ ಜಲಾಶಯಕ್ಕೆ ಹರಿದು ಬರುವ ಒಳಹರಿವನ್ನು ಪರಿಗಣಿಸಿ ಬೆಳೆಗಳಿಗೆ ನೀರು ಹರಿಸುವ ಸಂಬಂಧ ಮತ್ತೊಂದು ಸಭೆ ಕರೆದು ನಿರ್ಣಯಿಸಲಾಗುವುದು ಎಂದು ಸಚಿವರು ಸಭೆಯಲ್ಲಿ ತಿಳಿಸಿರುತ್ತಾರೆ ಎಂದು ಮಂಡ್ಯ ಕೃಷ್ಣರಾಜಸಾಗರ ಆಧುನೀಕರಣ ಮತ್ತು ಮಧ್ಯಮ, ನೀರಾವರಿ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾಮ ಪಂಚಾಯತ್ ಅಧಿಕಾರಿಗಳು, ಜನಪ್ರತಿನಿಧಿಗಳು ಡೆಂಗ್ಯೂ ನಿಯಂತ್ರಣಕ್ಕೆ ಪಣತೊಡಬೇಕು

ತಹಸೀಲ್ದಾರ್ ಶ್ರೇಯಸ್ ಸೂಚನೆ

ಪಾಂಡವಪುರ, ಜು.8– ರಾಜ್ಯದಲ್ಲಿ ಡೆಂಗ್ಯೂ ಜ್ವರ ಹೆಚ್ಚಾಗಿ ಸಾವು ನೋವುಗಳು ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಡೆಂಗ್ಯೂ ನಿಯಂತ್ರಣಕ್ಕೆ ಪ್ರತಿಯೊಬ್ಬ ಗ್ರಾಪಂ ಅಧಿಕಾರಿಗಳು, ಜನಪ್ರತಿನಿಧಿಗಳು ಪಣತೊಟ್ಟು ಕೆಲಸ ಮಾಡಬೇಕು ಎಂದು ತಹಸೀಲ್ದಾರ್ ಶ್ರೇಯಸ್ ಹೇಳಿದರು.

ಪಟ್ಟಣದ ತಾಪಂ ಕಚೇರಿಯ ಸಭಾಂಗಣದಲ್ಲಿ ಆರೋಗ್ಯ ಇಲಾಖೆ ವತಿಯಿಂದ ಗ್ರಾಪಂ ಅಧಿಕಾರಿಗಳು ಹಾಗೂ ಅಧ್ಯಕ್ಷರು, ಉಪಾಧ್ಯಕ್ಷರಿಗೆ ಡೆಂಗ್ಯೂ ನಿಯಂತ್ರಣ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಡೆಂಗ್ಯೂ ಜ್ವರ ದಿನೇದಿನೆ ಅಪಾಯಕಾರಿಯಾಗುತ್ತಿದೆ. ಈಗಾಗಲೆ ಸಾಕಷ್ಟು ಮಂದಿ ಸಾವನ್ನಪ್ಪಿದ್ದಾರೆ. ಆದ್ದರಿಂದ ತಾಲೂಕಲ್ಲಿ ಡೆಂಗ್ಯೂ ಜ್ವರವನ್ನು ನಿಯಂತ್ರಣಕ್ಕೆ ತರುವ ಮೂಲಕ ಸಾವುನೋವುಗಳನ್ನು ತಪ್ಪಿಸಲು ಗ್ರಾಪಂನ ಅಧಿಕಾರಿಗಳು, ಜನಪ್ರತಿನಿಧಿಗಳು ಸೇರಿದಂತೆ ಎಲ್ಲಾ ಅಧಿಕಾರಿಗಳು ಕೆಲಸ ಮಾಡಬೇಕು ಎಂದು ತಿಳಿಸಿದರು.

ಮನೆ ಹಾಗೂ ಅಕ್ಕಪಕ್ಕದ ಜಾಗದಲ್ಲಿ ಸಂಗ್ರಹವಾಗಿರುವ ನೀರನ್ನು ಸ್ವಚ್ಛಗೊಳಿಸಿ, ಮನೆಯ ತೊಟ್ಟಿಗಳಲ್ಲಿ ಸಂಗ್ರಹಿಸಿರುವ ನೀರನ್ನು ಎರಡು–ಮೂರು ದಿನಕ್ಕೊಮ್ಮೆ ಬದಲಾವಣೆ ಮಾಡಿ ಸ್ವಚ್ಛವಾಗಿಟ್ಟುಕೊಳ್ಳಬೇಕು. ಮನೆಗಳಲ್ಲಿ ಮಲಗುವಾಗ ಸಾಧ್ಯವಾದಷ್ಟು ಸೊಳ್ಳೆಪರದೆಗಳನ್ನು ಕಟ್ಟಿಕೊಂಡು ಮಲಗಬೇಕು, ಗ್ರಾಪಂ ವ್ಯಾಪ್ತಿಯ ಹಳ್ಳಿಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು ಡೆಂಗ್ಯೂ ಬಗ್ಗೆ ಪಂಚಾಯಿತಿ ಅಧಿಕಾರಿಗಳು ಸಾರ್ವಜನಿಕರಿಗೆ ಅರಿವು ಮೂಡಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ರೋಗವಾಹಕ ಆಶ್ರಿತ ನಿಯಂತ್ರಣಾಧಿಕಾರಿಯ ಮೇಲ್ವಿಚಾರಕರಾದ ಸೋಮಶೇಖರ್ ಮಾತನಾಡಿ, ಡೆಂಗ್ಯೂ ಜ್ವರಕ್ಕೆ ನಿರ್ದಿಷ್ಟವಾದ ಚಿಕಿತ್ಸೆ ಇರುವುದಿಲ್ಲ ಹಾಗಾಗಿ ಡೆಂಗ್ಯೂ ಜ್ವರ ಬಗ್ಗೆ ಸಾರ್ವಜನಿಕರು ಜಾಗೃತಿಯಿಂದ ಇರಬೇಕು, ಡೆಂಗ್ಯೂ ರೋಗ ಲಕ್ಷಣಗಳು ಕಂಡು ಬಂದ ತಕ್ಷಣ ಹತ್ತಿರ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದುಕೊಳ್ಳಬೇಕು ಎಂದು ತಿಳಿಸಿದರು.



ಡೆಂಗ್ಯೂ ಬಗ್ಗೆ ಆರೋಗ್ಯ ಇಲಾಖೆಯ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಅಂಗನವಾಡಿ, ಪಂಚಾಯಿತಿಯಿಂದ ಅರಿವು ಮೂಡಿಸಲು ಬಂದರೆ ಸಾರ್ವಜನಿಕರು ಸಹಕಾರ ನೀಡಬೇಕು. ಕಳೆದ 10 ವರ್ಷದ ಹಿಂದೆ ಡೆಂಗೆ ಜ್ವರ ಹೆಚ್ಚಾಗಿ ನಗರ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತಿತ್ತು. ಇದೀಗ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿರುವುದರಿಂದ ಗ್ರಾಪಂ ಅಧಿಕಾರಿಗಳು, ಸದಸ್ಯರು ಹೆಚ್ಚಿನ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂದರು.

ಸಭೆಯಲ್ಲಿ ತಾಪಂ ಇಓ ಲೋಕೇಶ್ ಮೂರ್ತಿ, ತಾಲೂಕು ಆರೋಗ್ಯಾಧಿಕಾರಿ ಡಾ.ಸಿ.ಎ.ಅರವಿಂದ್, ಹೆಲ್ತ್ ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿ, ವಿಜಯಕುಮಾರ್ ಸೇರಿದಂತೆ ಗ್ರಾಪಂ ಪಿಡಿಓ, ಅಧ್ಯಕ್ಷರು, ಉಪಾಧ್ಯಕ್ಷರು ಇದ್ದರು.

ಮೂರನೇ ಪುಟದಿಂದ

ಮುಡಾದಿಂದ ನಷ್ಟವೇ ಹೊರತು ಲಾಭವಾಗಿಲ್ಲ

ನೀಡಿದ್ದರು. ಡಿ ನೋಟಿಫಿಕೇಷನ್ ಆಗಿದ್ದ ಜಮೀನಿನನ್ನು ಮುಡಾದವರು ನಿವೇಶನಗಳಾಗಿ ಪರಿವರ್ತಿಸಿದ್ದರು.

ಸುಂದರಮ್ಮ ಎಂಬುವರಿಗೆ ಸೇರಿದ ಶ್ರೀರಾಂಪುರ 2ನೇ ಹಂತದ ಸರ್ವೆ ನಂಬರ್ 128/1ರ 2.17 ಎಕರೆ ಜಮೀನನ್ನು ಮುಡಾ ಸ್ವಾಧೀನಪಡಿಸಿಕೊಂಡಿತ್ತು. ಮುಡಾ ಭೂ ಸ್ವಾಧೀನ ಕ್ರಮವನ್ನು ಸುಂದರಮ್ಮ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ನಂತರ ಭೂಮಿಯನ್ನು ಸುಂದರಮ್ಮ ಅವರಿಗೆ ವಾಪಾಸ್ಸು ನೀಡುವಂತೆ ಮುಡಾಗೆ ಹೈಕೋರ್ಟ್ ಆದೇಶಿಸಿತ್ತು.

ಸುಂದರಮ್ಮ ಪರವಾಗಿ ಹೈಕೋರ್ಟ್ ಕೊಟ್ಟ ತೀರ್ಪನ್ನು ಉಲ್ಲೇಖಿಸಿದ ಪಾರ್ವತಿಯವರು ಭೂ ಸ್ವಾಧೀನ ಮಾಡಿಕೊಂಡ ತಮ್ಮ ಭೂಮಿಯನ್ನು ತಮಗೂ ನೀಡುವಂತೆ ಮುಡಾಗೆ ಪತ್ರ ಬರೆದರು. ಹಲವು ಬಾರಿ ಭೂಮಿ ನೀಡುವಂತೆ ಮನವಿ ಮಾಡಿದರೂ ಮುಡಾ ಕ್ರಮಕೈಗೊಂಡಿರಲಿಲ್ಲ ಎಂದು ಹರೀಶ್‌ಗೌಡರು ಹೇಳಿದರು. ತರುವಾಯ 2020ರಲ್ಲಿ ಶೇಕಡ 50:50 ಅನುಪಾತದಲ್ಲಿ ನಿವೇಶನ ನೀಡುವಂತೆ ಪತ್ರ ಬರೆದರು. ಪಾರ್ವತಿಯವರಿಂದ ಸ್ವಾಧೀನಪಡಿಸಿಕೊಂಡ 3.16 ಎಕರೆಗೆ ಒಂದೂವರೆ ಲಕ್ಷ ಚದರಡಿ. ಇದರಂತೆ ಅಭಿವೃದ್ಧಿಪಡಿಸಿದ ನಂತರ 75 ಸಾವಿರ ಚದರಡಿ ಭೂಮಿಯನ್ನು ಅವರಿಗೆ ನೀಡಬೇಕಿತ್ತು. ಆದರೆ ಈಗ ಮುಡಾ ನೀಡಿರುವುದು 38,753 ಸಾವಿರ ಚದರ ಅಡಿ ಮಾತ್ರ. ಇದರಿಂದ ಸಿದ್ದರಾಮಯ್ಯನವರ ಪತ್ನಿ ಪಾರ್ವತಿಯವರು ಮುಡಾದಿಂದ ತಮಗೆ ನಷ್ಟವಾಗಿದ್ದರೂ ಪ್ರಶ್ನೆ ಮಾಡಿಲ್ಲ. ಮುಡಾ ಕೊಟ್ಟ ಭೂಮಿಗೆ ತೃಪ್ತಿಪಟ್ಟುಕೊಂಡಿದ್ದಾರೆ ಎಂದು ತಿಳಿಸಿದರು.

ಅಕ್ರಮ ನಡೆದಿಲ್ಲ: ಕೆಸರೆಯಲ್ಲಿ ಭೂಮಿ ಇಲ್ಲದ ಕಾರಣ ವಿಜಯನಗರದಲ್ಲಿ ನಿವೇಶನ ನೀಡಲಾಗಿದೆ. ಇದರಿಂದ ಪಾರ್ವತಿಯವರಿಗೆ ನೀಡಿರುವ ಬದಲಿ ನಿವೇಶನದಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಂದು ಹರೀಶ್‌ಗೌಡರು ಸ್ಪಷ್ಟಪಡಿಸಿದರು.

ಮುಡಾ ಸಭೆಯ ನಿರ್ಣಯವಿಲ್ಲದೆ ಶೇಕಡ 50:50 ಅನುಪಾತದ ನಿವೇಶನ ಮಂಜೂರಾತಿ ಮಾಡದಂತೆ ಮೊದಲ ಸಭೆಯಲ್ಲೆ ತೀರ್ಮಾನ ಕೈಗೊಂಡಿದ್ದೆವು. ಜೊತೆಗೆ ನನ್ನ ಲೆಟರ್ ಹೆಡ್‌ನಲ್ಲಿ ಎಲ್ಲಾ ಶಾಸಕರು ಸಹಿ ಮಾಡಿ ಮುಡಾ ಆಯುಕ್ತರು ಹಾಗೂ ಸರ್ಕಾರದ ಕಾರ್ಯದರ್ಶಿಗೆ ಪತ್ರ ಕೂಡ ಬರೆದಿದ್ದೇವೆ ಎಂದು ತಿಳಿಸಿದರು.

ತಮ್ಮ ತವರು ಜಿಲ್ಲೆಯ ಮುಡಾ ಬಗ್ಗೆ ಸಿದ್ದರಾಮಯ್ಯ ಅವರಿಗೆ ಅಪಾರ ಒಲವಿದೆ. ಮುಡಾ ಭೂಮಿ ಉಳಿಯಬೇಕು, ಅದು ಜನ ಸಾಮಾನ್ಯರಿಗೆ ಸಿಗಬೇಕೆಂದು ನಿಲುವು ತಳೆದಿದ್ದಾರೆ. ದಟ್ಟಗಳ್ಳಿಯ 11 ಎಕರೆ ಭೂಮಿ ಉಳಿಯಬೇಕು ಎಂಬ ದೃಷ್ಟಿಯಿಂದ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಆದರೂ ಕೆಲವರು ಸಿದ್ದರಾಮಯ್ಯ ಬಗ್ಗೆ ಆಧಾರ ರಹಿತ ಆರೋಪ ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿದರು.

ಶೇಕಡ 50:50 ಅನುಪಾತದ ನಿವೇಶನ ಸೇರಿದಂತೆ ಇತರೆ ಪ್ರಕರಣದ ಬಗ್ಗೆ ತನಿಖೆ ನಡೆಯುತ್ತಿದೆ. ಇದು ನಿಯಮ ಬಾಹಿರ ಎಂದು ಸಾಬೀತಾದರೆ ಸರ್ಕಾರ ಅದನ್ನು ರದ್ದು ಮಾಡಲಿ, ಅದಕ್ಕೆ ನಮ್ಮ ಆಕ್ಷೇಪಣೆ ಇಲ್ಲ ಎಂದು ಹರೀಶ್‌ಗೌಡರು ಹೇಳಿದರು.

ವಿಧಾನಸಭಾ ಸದಸ್ಯ ರಮೇಶ್ ಬಂಡಿಸಿದ್ದೇಗೌಡ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮುಡಾ ಅಧ್ಯಕ್ಷ ಕೆ.ಮರೀಗೌಡ, ಮಾಜಿ ಮೇಯರ್ ಪ್ರಕಾಶ್, ಪುಷ್ಪಲತಾ, ಕಾಂಗ್ರೆಸ್ ಮುಖಂಡರಾದ ರವಿ, ಭಾಸ್ಕರ್‌ಗೌಡ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬಲ್ಲಹಳ್ಳಿ, ಬೊಮ್ಮೇನಹಳ್ಳಿಯಲ್ಲಿ ಸೂರು ರಹಿತರಿಗೆ ನಿವೇಶನ

ಮೈಸೂರಿನ ಬಲ್ಲಹಳ್ಳಿ ಹಾಗೂ ಬೊಮ್ಮೇನಹಳ್ಳಿಯಲ್ಲಿ ಸೂರು ರಹಿತರಿಗೆ ನಿವೇಶನ ಹಂಚಿಕೆ ಮಾಡಲಾಗುವುದು ಎಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ತಿಳಿಸಿದರು. ಬಲ್ಲಹಳ್ಳಿಯಲ್ಲಿ 465 ಎಕರೆ ಹಾಗೂ ಬೊಮ್ಮೇನಹಳ್ಳಿಯಲ್ಲಿ 165 ಎಕರೆಯನ್ನು ಮುಡಾ ನೋಟಿಫೈ ಮಾಡಿದೆ. ಭೂ ಸ್ವಾಧೀನದ ಪ್ರಕ್ರಿಯೆಗಳು ಆರಂಭವಾಗಿದೆ. ಮುಡಾದಲ್ಲಿ ಈಗ ನಡೆಯುತ್ತಿರುವ ತನಿಖೆ ಮುಗಿದ ನಂತರ ಬಡಾವಣೆ ನಿರ್ಮಾಣ ಸಂಬಂಧ ಸರ್ಕಾರದ ಹಂತದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮರೀಗೌಡ ತಿಳಿಸಿದರು. ಹಿನಕಲ್ ಪಾಪಣ್ಣ ಅವರಿಗೆ ಮಂಜೂರಾಗಿದ್ದ ನಿವೇಶನವನ್ನು ಕೂಡ ತಡೆ ಹಿಡಿಯಲಾಗಿದೆ. ಈ ಮೊದಲು ನ್ಯಾಯಾಲಯದ ಆದೇಶದಂತೆ ಬದಲಿ ನಿವೇಶನ ಹಂಚಿಕೆಯಾಗಿತ್ತು. ಆದರೆ, ಹಂಚಿಕೆ ವೇಳೆ ತಪ್ಪಾಗಿದೆ ಎಂಬ ಕಾರಣದಿಂದ ಅದನ್ನು ಕೂಡ ತಡೆ ಹಿಡಿಯಲಾಗಿದೆ ಎಂದು ಮರೀಗೌಡರು ತಿಳಿಸಿದರು.

ಕಡತಗಳೇ ನಾಪತ್ತೆ!

ಎಸ್ಟಾಬ್ಲಿಷ್ ಸೆಕ್ಷನ್, ಆಯುಕ್ತರ ಆಪ್ತ ಸಹಾಯಕರ ಶಾಖೆ, ನಗರ ಯೋಜನಾ ಶಾಖೆ, ಲೆಕ್ಕ ಶಾಖೆ, ಕಾನೂನು ಶಾಖೆ, ಆಯುಕ್ತರ ಅಧಿಕೃತ ನಿವಾಸ (ಅಫಿಷಿಯಲ್ ರೆಸಿಡೆನ್ಸ್)ಗಳಿಗೆ ಕಡತಗಳ ಚಲಾವಣೆ (ಮೂವ್‌ಮೆಂಟ್) ಇರುತ್ತದೆ. ಆಯಾ ಅಧಿಕಾರಿಗಳು, ಸೂಪರಿಂಟೆಂಡೆಂಟ್‌ಗಳು, ಕೇಸ್ ವರ್ಕರ್‌ಗಳು ಕಡತಗಳ ಪಾಲಕರಾಗಿರುತ್ತಾರೆ. ಎಲ್ಲಾ ಫೈಲ್‌ಗಳ ಮೂವ್‌ಮೆಂಟ್‌ಗಳಿಗೂ ರಿಜಿಸ್ಟರ್ ನಿರ್ವಹಿಸಿ, ಕಡತ ಬಂದಿದ್ದಕ್ಕೆ, ಹೋಗಿದ್ದಕ್ಕೆ ದಿನಾಂಕ, ಎಲ್ಲಿಂದ ಬಂತು, ಎಲ್ಲಿಗೆ ಕಳುಹಿಸಲಾಗಿದೆ ಎಂಬ ಮಾಹಿತಿ ಅದರಲ್ಲಿ ನಮೂದಾಗಿರುತ್ತದೆ.

ಆ ರಿಜಿಸ್ಟರ್ ಮಾಹಿತಿ ಪ್ರಕಾರ ಸಹಿ ಮಾಡಿ ಸ್ವೀಕರಿಸಿರುವ ಶಾಖೆಯಲ್ಲಿರಬೇಕಾದ ಅತೀ ಮುಖ್ಯವಾದ ನಿವೇಶನಗಳ ಕಡತಗಳು ಮಾಯವಾಗಿವೆ ಎಂದು ಮುಡಾ ಕಚೇರಿಯಲ್ಲೇ ಗುಸುಗುಸು ಮಾತುಗಳು ಕೇಳಿಬರುತ್ತಿವೆ.

ಆಯುಕ್ತರು ತಮ್ಮ ಆಪ್ತ ಸಹಾಯಕರ ಮೂಲಕ ತರಿಸಿಕೊಂಡಿರುವ ಕಡತಗಳು ಲಭ್ಯವಿವೆ. ಆದರೆ, ಕೆಲವು ಫೈಲ್‌ಗಳು ಆಯುಕ್ತರ ಹೋಂ ಆಫೀಸ್‌ಗೆ ಹೋಗಿದ್ದು, ವಾಪಸ್ ಮುಡಾ ಕಚೇರಿ ತಲುಪಿರುವ ಬಗ್ಗೆ ಮಾಹಿತಿ ಇಲ್ಲ.

ಅಭಿಲೇಖಾಲಯದಲ್ಲಿ ಸಂರಕ್ಷಿಸಲಾದ ಕಡತಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಲಿಖಿತ ಅಥವಾ ಮೌಖಿಕವಾಗಿ ಕರೆ ಮಾಡಿದಾಗ ಕಳುಹಿಸುವ ಕಸ್ಟೋಡಿಯನ್‌ಗಳು ನಂಬರಿಂಗ್ ಮಾಡಿ ಕಳುಹಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಹಾಗೆಯೇ ಕಳುಹಿಸುವ ಪರಿಪಾಠವೂ ಮುಡಾದಲ್ಲಿದೆ. ರೆಕಾರ್ಡ್ ರೂಂ ತುಂಬಾ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಿರುವುದಲ್ಲದೇ ಕಚೇರಿ ಅವಧಿಯಲ್ಲಿ ಪಾಲಕರು ನಿರಂತರವಾಗಿ ಹಾಜರಿರುತ್ತಾರಾದರೂ ಕೆಲವು ಫೈಲ್‌ಗಳು ಮಿಸ್ ಆಗಿರುವುದು ಅಚ್ಚರಿ ಮೂಡಿಸಿದೆ. ಮೂಲ ಕಡತಗಳು ನಾಪತ್ತೆಯಾಗಿರುವ ಬಗ್ಗೆ ತನಿಖಾಧಿಕಾರಿಗಳು ಅವುಗಳ ಜವಾಬ್ದಾರಿ ಹೊತ್ತಿರುವ ಸಿಬ್ಬಂದಿ, ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಳ್ಳುತ್ತಿದ್ದು, ಹೇಗಾದರೂ ಸರಿ ಕಡತಗಳನ್ನು ತಂದು ಒಪ್ಪಿಸಿ ಎಂದು ತಾಕೀತು ಮಾಡುತ್ತಿದ್ದಾರೆ.

ಅಧಿಕಾರಿಯೇ ಹೊಣೆ

ಆದಷ್ಟು ಬೇಗ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಬೇಕು. ತ್ಯಾಜ್ಯ ನೀರು ಶುದ್ಧೀಕರಣ ಘಟಕ ಕಾರ್ಯಾರಂಭಿಸುವ ಮೂಲಕ ಕೊಳಚೆ ನೀರು ನೇರವಾಗಿ ಕೆರೆಗಳಿಗೆ ಸೇರುವುದನ್ನು ತಪ್ಪಿಸಬೇಕು, ಮೈಸೂರಿನ ದಳವಾಯಿ ಕೆರೆಗೆ ಕೊಳಚೆ ನೀರು ಸೇರುವುದನ್ನು ಸಂಪೂರ್ಣ ವಾಗಿ ತಪ್ಪಿಸಬೇಕು. ಈಗಾಗಲೇ ಅನುಮತಿ ನೀಡಿರುವ ಹೊಸ ಇಂದಿರಾ ಕ್ಯಾಂಟೀನ್ ಗಳ ನಿರ್ಮಾಣಕ್ಕೆ ಆದಷ್ಟು ಶೀಘ್ರ ಜಾಗ ಗುರುತಿಸಬೇಕು. ಬೆಂಗಳೂರು ನಗರ ವ್ಯಾಪ್ತಿಯ 70 ಸ್ಥಳಗಳಲ್ಲಿ ಹೊಸ ಇಂದಿರಾ ಕ್ಯಾಂಟೀನ್ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದ್ದು, ಆದಷ್ಟು ಶೀಘ್ರ ಸ್ಥಳ ಗುರುತಿಸಬೇಕು. ಹೊಸ ಮೆನು ಟೆಂಡರ್ ಪ್ರಕ್ರಿಯೆಯನ್ನೂ ಪೂರ್ಣಗೊಳಿಸಬೇಕು.

15ನೇ ಹಣಕಾಸು ಆಯೋಗದ ಅನುದಾನದಲ್ಲಿ 33,803 ಕಾಮಗಾರಿಗಳು ಮಂಜೂರಾಗಿದ್ದು, 23,714 ಕಾಮಗಾರಿಗಳು ಪೂರ್ಣಗೊಂಡಿವೆ. ಯೋಜನೆಯಡಿ ಇದುವರೆಗೆ 2,799 ಕೋಟಿ ರೂ. ಬಿಡುಗಡೆಯಾಗಿದೆ, 1883 ಕೋಟಿ ರೂ. ವೆಚ್ಚವಾಗಿದೆ. ಮುಂದಿನ ಎರಡು ವಾರಗಳಲ್ಲಿ ಟೆಂಡರ್ ಕರೆದು, ನಿಗದಿತ ಅವಧಿಯೊಳಗೆ ಅನುದಾನ ಪೂರ್ಣವಾಗಿ ಬಳಕೆಗೆ ಕ್ರಮ ಕೈಗೊಳ್ಳಬೇಕು ಎಂದರು. ಕಳೆದ ವರ್ಷದಲ್ಲಿ 224 ಕೋಟಿ ರೂ. ಆಸ್ತಿ ತೆರಿಗೆ ಬಾಕಿ ಇದೆ, ಬಾಕಿ ಸಂಪೂರ್ಣ ವಸೂಲು ಮಾಡಬೇಕು, ಪ್ರಸ್ತುತ ವರ್ಷದ ಜೂನ್ ಅಂತ್ಯದವರೆಗೆ 806 ಕೋಟಿ ರೂ. ಆಸ್ತಿ ತೆರಿಗೆ ವಸೂಲು ಮಾಡಲಾಗಿದೆ, 1053 ಕೋಟಿ ರೂ. ವಸೂಲಾತಿ ಬಾಕಿಯಿದೆ, ಜಿಲ್ಲಾಧಿಕಾರಿಗಳು ಆಸ್ತಿ ತೆರಿಗೆ ವಸೂಲಾತಿ ಅಭಿಯಾನ ಕೈಗೊಳ್ಳಬೇಕು ಎಂದು ಸೂಚಿಸಿದರು.

ಆಂಧ್ರ ಪ್ರದೇಶಕ್ಕೆ ತರಬೇತಿ ಪಡೆದ ಒಂಬತ್ತು ಆನೆಗಳನ್ನು ನೀಡಲು ಕರ್ನಾಟಕ ಒಪ್ಪಿಗೆ



ಬೆಂಗಳೂರು: ನಲ್ಲಮಲ ಮೀಸಲು ಅರಣ್ಯಕ್ಕೆ ಕರ್ನಾಟಕದಿಂದ ಶೀಘ್ರದಲ್ಲೇ ಒಂಬತ್ತು ತರಬೇತಿ ಪಡೆದ ಆನೆಗಳನ್ನು ಕಳುಹಿಸಲು ರಾಜ್ಯ ಅರಣ್ಯ ಇಲಾಖೆ ಒಪ್ಪಿಗೆ ಸೂಚಿಸಿದೆ. ಆಂಧ್ರ ಪ್ರದೇಶ ಅರಣ್ಯ ಇಲಾಖೆಯು ಹಲವಾರು ಕಾರ್ಮಿಕರು, ರೇಂಜರ್‌ಗಳು, ಕಳ್ಳಬೇಟೆ ನಿಗ್ರಹ ದಳಗಳನ್ನು ನಿಯೋಜಿಸುವ ಮೂಲಕ ನಲ್ಲಮಲ ಮೀಸಲು ಅರಣ್ಯದ ಬೆಲೆಬಾಳುವ, ಅಪರೂಪದ ಮರ ಪ್ರಭೇದಗಳು, ಕಾಡು ಪ್ರಾಣಿಗಳು ಮತ್ತು ಪರಿಸರ ವ್ಯವಸ್ಥೆಯನ್ನು ಬೆಂಕಿ ಅವಘಡಗಳಿಂದ ಮತ್ತು ಬೇಟೆಗಾರರಿಂದ ರಕ್ಷಿಸಲು ಸೂಕ್ತ ಭದ್ರತೆಯನ್ನು ಮಾಡಿದೆ.

ಆಧುನಿಕ ವಾಕಿ–ಟಾಕಿ ಮುಂತಾದ ಸಂಪನ್ಮೂಲಗಳೊಂದಿಗೆ ಸುಸಜ್ಜಿತವಾಗಿದೆ. ಆದರೆ, ಅತಿಕ್ರಮಣದಾರರು, ಮರ ಕಳ್ಳಸಾಗಣೆದಾರರು ಮತ್ತು ಬೇಟೆಗಾರರು ಮೀಸಲು ಅರಣ್ಯವನ್ನು ಪ್ರವೇಶಿಸಲು ತಮ್ಮ ಮಾರ್ಗಗಳನ್ನು ರೂಪಿಸಿಕೊಂಡು ತಮ್ಮ ಅಕ್ರಮ ಚಟುವಟಿಕೆಗಳನ್ನು ಮುಂದುವರೆಸುತ್ತಿದ್ದಾರೆ.

ನಲ್ಲಮಲ ಅರಣ್ಯಾಧಿಕಾರಿಗಳು ಮೀಸಲು ಅರಣ್ಯವನ್ನು ಸಂರಕ್ಷಿಸಲು ತರಬೇತಿ ಪಡೆದ ಆನೆಗಳನ್ನು ನಿಯೋಜಿಸುವ ಬಗ್ಗೆ ಚಿಂತನೆ ನಡೆಸಿದ್ದು, ಅರಣ್ಯದ ಒಳಭಾಗ ಮತ್ತು ಸಂರಕ್ಷಿತ ವಲಯ ಗಳನ್ನು ಬೇಟೆಗಾರರು, ಮರ ಕಳ್ಳಸಾಗಣೆ ದಾರರು ಮತ್ತು ಕಳ್ಳ ಬೇಟೆಗಾರರ ಅನಧಿಕೃತ ಅತಿಕ್ರಮಣ ಮತ್ತು ನುಗ್ಗುವಿಕೆ ಯಿಂದ ರಕ್ಷಿಸಲು ತರಬೇತಿ ಪಡೆದ ಆನೆ ದಳವನ್ನು ಒದಗಿಸುವಂತೆ ಕರ್ನಾಟಕ ರಾಜ್ಯ ಅರಣ್ಯ ಅಧಿಕಾರಿಗಳಿಗೆ ಮನವಿ ಮಾಡಿದ್ದರು. ಕರ್ನಾಟಕ ರಾಜ್ಯ ಅರಣ್ಯ ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದು ಒಟ್ಟು 9 ತರಬೇತಿ ಪಡೆದ ಆನೆಗಳನ್ನು ಒದಗಿಸಲು ಒಪ್ಪಿಕೊಂಡಿದ್ದಾರೆ. ಆನೆಗಳನ್ನು ನಿಯಂತ್ರಿಸಲು ಆಂಧ್ರ ಅರಣ್ಯ ಸಿಬ್ಬಂದಿಗೆ ಮಾವುತ ತರಬೇತಿ ನೀಡಲು ಒಪ್ಪಿದ್ದಾರೆ. ಈ ಮಾವುತ ತರಬೇತಿದಾರರು ಆಹಾರ ಪದ್ಧತಿ, ವಾಸಸ್ಥಳ ಮತ್ತು ಚಲನೆಗಳ ಬಗ್ಗೆ ಕಲಿಯುತ್ತಾರೆ. ಎಲ್ಲಾ ಸಂದರ್ಭಗಳಲ್ಲಿಯೂ ಆನೆಗಳನ್ನು ನಿಯಂತ್ರಿಸಲು, ನಿಭಾಯಿಸಲು ಕೌಶಲ್ಯಗಳನ್ನು ಪಡೆದುಕೊಳ್ಳುತ್ತಾರೆ ಎಂದು ಪೆದ್ದದೋರ್ನಾಳ ಅರಣ್ಯ ವಲಯಾಧಿಕಾರಿ ವಿಶ್ವೇಶ್ವರ ರಾವ್ ವಿವರಿಸಿದ್ದಾರೆ.

ದುಬಾರಿ ಫಲಾನುಭವಿ!

ಬಳಿ ದುಬಾರಿ ಬೆಲೆ ಬಾಳುವ ಅದೇ ಅಳತೆಯ 307ನೇ ಸಂಖ್ಯೆಯ ನಿವೇಶನವನ್ನು 2017ರಲ್ಲಿ ಪಡೆದಿದ್ದಾರೆ ಎಂದು ದಾಖಲಾತಿ ಪ್ರದರ್ಶಿಸಿದರು. ವಿಶ್ವನಾಥ್ ಅವರ ಪತ್ನಿಗೆ ಬದಲಿ ನಿವೇಶನ ಮಂಜೂರಾಗುವ ಸಂದರ್ಭದಲ್ಲಿ ಹೆಚ್.ವಿ.ರಾಜೀವ್ ಅಧ್ಯಕ್ಷರಾಗಿದ್ದರು. ಕಡಿಮೆ ಬೆಲೆ ಬಾಳುತ್ತದೆ ಎಂಬ ಕಾರಣದಿಂದ ಹೆಚ್ಚು ಬೆಲೆಬಾಳುವ ಬದಲಿ ನಿವೇಶನವನ್ನು ವಿಶ್ವನಾಥ್ ಪತ್ನಿ ಪಡೆದಿದ್ದಾರೆ. ಇದರಿಂದ ಯಾವ ನೈತಿಕತೆ ಇಟ್ಟುಕೊಂಡು ವಿಶ್ವನಾಥ್ ಬೇರೆಯವರ ಬಗ್ಗೆ ಆರೋಪ ಮಾಡುತ್ತಾರೆ ಎಂದು ಮರೀಗೌಡ ಪ್ರಶ್ನಿಸಿದರು. ಜೊತೆಗೆ ಜೆಡಿಎಸ್ ಬಿಟ್ಟು ಬಿಜೆಪಿಗೆ ಸೇರುವ ಆಪರೇಷನ್ ಕಮಲದ ಸಮಯದಲ್ಲಿ ವಿಶ್ವನಾಥ್ 25 ಕೋಟಿ ರೂಪಾಯಿ ಪಡೆದಿರುವ ಬಗ್ಗೆ ತಮಗೆ ಮಾಹಿತಿ ಇದೆ ಎಂದು ಆಪಾದಿಸಿದರು.

ಹಿರಿಯ ರಾಜಕಾರಣಿಯಾದ ಹೆಚ್.ವಿಶ್ವನಾಥ್ ಇಂತಹ ಹೇಳಿಕೆ ನೀಡುತ್ತಿರುವುದನ್ನು ನೋಡಿದರೆ ಅವರ ರಾಜಕೀಯ ದಿವಾಳಿತನ ತೋರಿಸುತ್ತದೆ. ಬ್ಲ್ಯಾಕ್‌ಮೇಲ್ ಮಾಡುತ್ತಿರುವ ವಿಶ್ವನಾಥ್ ಕೀಳುಮಟ್ಟದ ರಾಜಕಾರಣಕ್ಕೆ ಇಳಿದಿದ್ದಾರೆ. ಎಂದು ಮುಡಾ ಅಧ್ಯಕ್ಷ ಮರೀಗೌಡ ಆಕ್ರೋಶ ವ್ಯಕ್ತಪಡಿಸಿದರು.

ಮುಡಾ ಕಚೇರಿಯಲ್ಲಿ ಸಾರ್ವಜನಿಕರ ಸೇವೆಗಳು ಸಂಪೂರ್ಣ ಸ್ಥಗಿತ



ಮೈಸೂರು, ಜು. 8(ಆರ್‌ಕೆ)– ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಹಗರಣ ಸಂಬಂಧ ತನಿಖೆ ನಡೆಯುತ್ತಿರುವುದರಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಕಚೇರಿಯಲ್ಲಿ ಸಾರ್ವಜನಿಕರ ಎಲ್ಲಾ ಸೇವೆಗಳೂ ಸಂಪೂರ್ಣ ಸ್ಥಗಿತಗೊಂಡಿವೆ. ಕಚೇರಿ ಸಭಾಂಗಣದಲ್ಲಿ ವೆಂಕಟಾಚಲಪತಿ ನೇತೃತ್ವದ ನಾಲ್ವರು ಅಧಿಕಾರಿಗಳ ತಂಡ ಕಡತಗಳು, ದಾಖಲಾತಿಗಳನ್ನು ಪರಿಶೀಲಿಸುತ್ತಿದ್ದು, ಶೇ. 50:50ರ ಅನುಪಾತ, ಬದಲಿ ನಿವೇಶನ, ಪ್ರೋತ್ಸಾಹದಾಯಕ ನಿವೇಶನಗಳ ಹಂಚಿಕೆಗೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ವಿಚಾರಣೆ ನಡೆಸುತ್ತಿರುವುದರಿಂದ ಕಚೇರಿಯ ಎಲ್ಲಾ ವಿಭಾಗ, ಶಾಖೆಗಳ ಕೆಲಸಗಳು ಸ್ಥಗಿತಗೊಂಡಿವೆ.

ತನಿಖೆ ನಡೆಯುತ್ತಿರುವುದರಿಂದ ಸಭೆ ನಡೆಸುವುದು, ನಿರ್ಣಯ ಮಾಡುವುದು, ಟೆಂಡರ್ ಪ್ರಕ್ರಿಯೆ, ಹೊಸ ಯೋಜನೆ ಜಾರಿ, ಆಂತರಿಕ ವಹಿವಾಟು ಸೇರಿದಂತೆ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳಬಾರದೆಂದು ಸರ್ಕಾರ ಸೂಚನೆ ನೀಡಿದೆ.

ಆದ್ದರಿಂದ ಜೂನ್ 12ರಂದು ನಿಗದಿಯಾಗಿದ್ದ ಮುಡಾ ಸಾಮಾನ್ಯ ಸಭೆಯನ್ನು ಮುಂದೂಡಲಾಗಿದ್ದು, ಖಾತೆ ನೋಂದಣಿ, ವರ್ಗಾವಣೆ, ಇ–ಖಾತಾ, ಕರಾರು ಒಪ್ಪಂದ (ಲೀಸ್ ಕಂ ಸೇಲ್ ಡೀಡ್), ಕ್ರಯಪತ್ರ (ಟೈಟಲ್ ಡೀಡ್), ಆಸ್ತಿಗಳ ದೃಢೀಕೃತ ಪ್ರತಿ, ನಕ್ಷೆ ಅನುಮೋದನೆ, ಸಿಆರ್, ನಿವೇಶನ ಬಿಡುಗಡೆಯಂತಹ ಎಲ್ಲಾ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ.

ಪರಿಣಾಮ ಮುಡಾ ಕಚೇರಿಯ ಎಲ್ಲಾ ಶಾಖೆಗಳೂ ಜನರಿಲ್ಲದೇ ಬಿಕೋ ಎನ್ನುತ್ತಿವೆ. ಮಧ್ಯವರ್ತಿಗಳು ಓಡಾಡುತ್ತಿದ್ದ ಉಪನೋಂದಣಾಧಿಕಾರಿಗಳ ಕಚೇರಿ, ಬ್ಯಾಂಕ್, ನಗರ ಯೋಜನಾ ಶಾಖೆ, ವಿಶೇಷ ಭೂಸ್ವಾಧೀನಾಧಿಕಾರಿ ಕಚೇರಿ, ಲೆಕ್ಕ ಶಾಖೆಗಳಲ್ಲಿ ಬೆರಳೆಣಿಕೆ ಜನ ಮಾತ್ರ ಇರುತ್ತಾರೆ. ಸ್ಪಂದನ ಕೌಂಟರ್‌ಗಳಲ್ಲಿ ಅರ್ಜಿಗಳನ್ನು ಸ್ವೀಕರಿಸುತ್ತಿದ್ದು, ಬ್ಯಾಂಕ್ ಕೌಂಟರ್‌ನಲ್ಲಿ ಕಂದಾಯ ಪಾವತಿಸುತ್ತಿರುವುದನ್ನು ಹೊರತುಪಡಿಸಿ ಉಳಿದಂತೆ ಯಾವುದೇ ಚಟುವಟಿಕೆಗಳು ಮುಡಾ ಕಚೇರಿಯಲ್ಲಿ ನಡೆಯುತ್ತಿಲ್ಲ.

ಗವರ್ನರ್, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಶಾಸಕ ಶ್ರೀವತ್ಸ ದೂರು

ಮೈಸೂರು, ಜು. 8(ಆರ್‌ಕೆ)–



ಮುಡಾದಲ್ಲಿ ಕಾನೂನು ಬಾಹಿರವಾಗಿ ನಿವೇಶನ ಹಂಚಿಕೆ ಮಾಡಿ ಸರ್ಕಾರಕ್ಕೆ ಸಾವಿರಾರು ಕೋಟಿ ರೂ. ನಷ್ಟ ಉಂಟುಮಾಡಿರುವ ಕುರಿತಂತೆ ಶಾಸಕ ಟಿ.ಎಸ್. ಶ್ರೀವತ್ಸ, ರಾಜ್ಯಪಾಲರು ಹಾಗೂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಇಂದು ದೂರು ನೀಡಿದ್ದಾರೆ.

ಭೂ ಸ್ವಾಧೀನಪಡಿಸಿಕೊಳ್ಳದೇ ವಸತಿ ಬಡಾವಣೆಗಳನ್ನು ರಚಿಸಿರುವ ಪ್ರಕರಣಗಳಲ್ಲಿ ಪರಿಹಾರವಾಗಿ ಪ್ರತಿಷ್ಠಿತ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು 50:50 ಅನುಪಾತದಡಿ ಹಂಚಿಕೆ ಮಾಡುವ ಮೂಲಕ ಮುಡಾಕ್ಕೆ ಭಾರೀ ನಷ್ಟ ಉಂಟು ಮಾಡಿರುವ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಶಾಸಕರು ದೂರಿನಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಇಂದು ಸತ್ಸಂಗ ಕಾರ್ಯಕ್ರಮ

ಮೈಸೂರು, ಜು.8(ಎಸ್‌ಪಿಎನ್)– ನೇಗಿಲಯೋಗಿ ಸಮಾಜ ಸೇವಾ ಸಂಘ, ನೇಗಿಲಯೋಗಿ ಮಹಿಳೆಯರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದೊಂದಿಗೆ ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ನೇತೃತ್ವದಲ್ಲಿ ಮಂಗಳವಾರ ಸಂಜೆ 5 ಗಂಟೆಗೆ ಮೈಸೂರು ಜಯನಗರದ ನೇಗಿಲಯೋಗಿ ಮರುಳೇಶ್ವರ ಸೇವಾಭವನದಲ್ಲಿ ಸತ್ಸಂಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮಾಜಿ ಸಚಿವ ಬಿಸಿ ಪಾಟೀಲ್ ಅಳಿಯ ವಿಷ ಸೇವಿಸಿ ಆತ್ಮಹತ್ಯೆ!

ದಾವಣಗೆರೆ: ಮಾಜಿ ಸಚಿವ ಬಿ.ಸಿ ಪಾಟೀಲ್ ಅವರ ಅಳಿಯ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಬಿಸಿ. ಪಾಟೀಲ್ ಅವರ ಪುತ್ರಿ ಸೌಮ್ಯ ಪತಿ ಕೆ.ಜಿ.ಪ್ರತಾಪ್ ಕುಮಾರ್ (43) ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕಿನ ಅರಿಕೆರೆಯ ಶಿವಮೊಗ್ಗ–ಹರಿಹರ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಕಾರು ನಿಲ್ಲಿಸಿ ವಿಷ ಸೇವಿಸಿದ್ದಾರೆ. ಕೆ.ಜಿ ಪ್ರತಾಪ್ ಕುಮಾರ್ ಅವರನ್ನು ಸ್ಥಳೀಯರು ಕೂಡಲೇ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದಾರೆ.



ಪ್ರತಾಪ್‌ಕುಮಾರ್

ಕೆಜಿ ಪ್ರತಾಪ್ ಕುಮಾರ್ ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ.

ದೇಶ - ವಿದೇಶ

ಭೀಕರ ಪ್ರವಾಹಕ್ಕೆ ಬಲಿಯಾದ 131 ವನ್ಯಜೀವಿಗಳು


ಅಸ್ಸಾಂ: ವಿಶ್ವವಿಖ್ಯಾತ ಕಾಜಿರಂಗ ರಾಷ್ಟ್ರೀಯ ಉದ್ಯಾನವನದಲ್ಲಿ ಪ್ರವಾಹದಲ್ಲಿ ಕನಿಷ್ಠ 131 ಕಾಡು ಪ್ರಾಣಿಗಳು ಸಾವನ್ನಪ್ಪಿದ್ದು, 96 ಪ್ರಾಣಿಗಳನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಕಾಜಿರಂಗ ರಾಷ್ಟ್ರೀಯ ಉದ್ಯಾನವನದಲ್ಲಿ ಸಿಕ್ಕಿಬಿದ್ದ ಖಡ್ಗ ಮೃಗದ ಕರುವಿನ ವೀಡಿಯೊವನ್ನು ಹಂಚಿಕೊಂಡಿದ್ದಾರೆ. ಈ ವಿಡಿಯೋದ ಮೂಲಕ ಅವರು ಹಲವಾರು ವಾರಗಳಿಂದ ಪ್ರವಾಹದಿಂದ ತೀವ್ರವಾಗಿ ತತ್ತರಿಸಿರುವ ಪ್ರಸಿದ್ಧ ಉದ್ಯಾನ ವನದಲ್ಲಿನ ಕಾಡುಪ್ರಾಣಿಗಳ ಅವಸ್ಥೆಯ ಮೇಲೆ ಬೆಳಕು ಚೆಲ್ಲಿದ್ದಾರೆ. ಇತ್ತೀಚೆಗೆ, ಕಾಜಿರಂಗದ ಮೂಲಕ ಹಾದು ಹೋಗುವಾಗ, ಈ ಸಿಕ್ಕಿಬಿದ್ದ ಘೇಂಡಾ ಮೃಗವನ್ನು ನಾನು ಗಮನಿಸಿದೆ ಮತ್ತು ಅದನ್ನು ತಕ್ಷಣ ರಕ್ಷಿಸಲು ಸೂಚಿಸಿದ್ದೇನೆ. ಪ್ರವಾಹವು ಮಾನವರು ಮತ್ತು ಪ್ರಾಣಿಗಳ ಮೇಲೆ ಸಮಾನವಾಗಿ ಪರಿಣಾಮ ಬೀರಿದೆ. ಅಸ್ಸಾಂ ತಂಡವು ಎಲ್ಲರಿಗೂ ಸಹಾಯ ಮಾಡಲು ಹಗಲಿರುಳು ಶ್ರಮಿಸುತ್ತಿದೆ ಎಂದು ಶರ್ಮಾ ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಕಬೋರ್ಡ್‌ನಲ್ಲಿ ಸೀಕ್ರೆಟ್ ಡೋರ್, ಒಳಗಿತ್ತು ಭಯೋತ್ಪಾದಕರ ಬಂಕರ್

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ನಡೆದ ಎರಡು



ಎನ್‌ಕೌಂಟರ್‌ಗಳಲ್ಲಿ ಆರು ಭಯೋತ್ಪಾದಕರು ಹತರಾಗಿದ್ದಾರೆ ಮತ್ತು ಇಬ್ಬರು ಯೋಧರು ಹುತಾತ್ಮರಾಗಿದ್ದಾರೆ. ಮೊದರ್ಗಾಂ ಎನ್‌ಕೌಂಟರ್ ಸ್ಥಳದಿಂದ ಇಬ್ಬರು ಉಗ್ರರ ಶವಗಳನ್ನು ವಶಪಡಿಸಿಕೊಳ್ಳಲಾಗಿದೆ. ಭಾನುವಾರ ಚಿನ್ನಿಗಂನಲ್ಲಿ ನಾಲ್ವರು ಉಗ್ರರ ಮೃತದೇಹಗಳನ್ನು ವಶಪಡಿಸಿಕೊಳ್ಳಲಾಗಿದೆ. ಭಯೋತ್ಪಾದಕರ ಎನ್‌ಕೌಂಟರ್‌ನಲ್ಲಿ ಪ್ಯಾರಾ ಕಮಾಂಡೋ ಸೇರಿದಂತೆ ಇಬ್ಬರು ಸೇನಾ ಸಿಬ್ಬಂದಿ ಹುತಾತ್ಮರಾಗಿದ್ದಾರೆ. ಕುಲ್ಗಾಮ್ ಜಿಲ್ಲೆಯ ಎರಡು ಗ್ರಾಮಗಳಲ್ಲಿ ಶನಿವಾರದಂದು ಎನ್‌ಕೌಂಟರ್ ಪ್ರಾರಂಭವಾಯಿತು. ಚಿನ್ನಿಗಾಂನಲ್ಲಿ ಹತರಾದ ನಾಲ್ವರು ಉಗ್ರರು ಹಿಜ್ಬುಲ್ ಮುಜಾಹಿದ್ದೀನ್‌ಗೆ ಸೇರಿದವರು. ಭಯೋತ್ಪಾದಕರು ಕಬೋರ್ಡ್‌ನೊಳಗೆ ಬಂಕರ್ ಮಾಡಿದ್ದರು.

ದಂಪತಿಗೆ ಮಕ್ಕಳಾದ್ರೆ 1 ಸಾವಿರ ಡಾಲರ್ 'ಬೇಬಿ ಬೋನಸ್' ಭಾಗ್ಯ

ಬಾಲ್ಟಿಮೋರ್ (ಅಮೆರಿಕ): ಭಾರತ ದೇಶ ವಿಶ್ವದಲ್ಲೇ ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ. ನಮ್ಮಲ್ಲಿ ಮಕ್ಕಳು ಜಾಸ್ತಿ ಎಂಬುದೇ ಸಮಸ್ಯೆ. ಆದರೆ, ಅಮೆರಿಕ ಹಾಗೂ ಯುರೋಪ್ ರಾಷ್ಟ್ರಗಳ ಕಥೆಯೇ ಬೇರೆ. ಅಲ್ಲಿ ಶಿಶು ಜನನ ಪ್ರಮಾಣ ಕಡಿಮೆ ಆಗುತ್ತಿದೆ. ಮಕ್ಕಳು ಮಾಡಿಕೊಳ್ಳಲು ದಂಪತಿ ಹಿಂಜರಿಯುತ್ತಿದ್ದಾರೆ. ಹೀಗಾಗಿ, ವಿವಾಹಿತ ದಂಪತಿಗೆ ಮಕ್ಕಳನ್ನು ಹೊಂದಲು ಪ್ರೋತ್ಸಾಹಿಸುವ ಸಲುವಾಗಿ ಅಮೆರಿಕದ ಬಾಲ್ಟಿಮೋರ್ ನಗರದ ಸ್ಥಳೀಯಾಡಳಿತ ಹೊಸ ಸ್ಕೀಂ ರೂಪಿಸಲು ಮುಂದಾಗಿದೆ.



ಅಮೆರಿಕದ ಮೇರಿಲ್ಯಾಂಡ್ ರಾಜ್ಯದಲ್ಲಿ ಇರುವ ಬಾಲ್ಟಿಮೋರ್ ನಗರದ ಸ್ಥಳೀಯಾಡಳಿತಕ್ಕೆ ಚುನಾವಣೆ ನಡೆಯುತ್ತಿದೆ. ಈ ಚುನಾವಣೆಯಲ್ಲಿ ಶಿಶು ಜನನ ಪ್ರಮಾಣ ಕಡಿಮೆ ಆಗುತ್ತಿರುವುದು ಅತೀ ದೊಡ್ಡ ಚುನಾವಣಾ ವಿಷಯ ವಸ್ತುವಾಗಿದೆ. ಹೀಗಾಗಿ, ಮಕ್ಕಳನ್ನು ಮಾಡಿಕೊಳ್ಳುವ ನವ ದಂಪತಿಗೆ 1 ಸಾವಿರ ಅಮೆರಿಕನ್ ಡಾಲರ್ ಪ್ರೋತ್ಸಾಹ ಧನ ನೀಡುವ ಬಗ್ಗೆ ಚರ್ಚೆ ಶುರುವಾಗಿದೆ. ಈ ಚುನಾವಣೆಯಲ್ಲಿ ಗೆಲ್ಲುವ ಪಕ್ಷ ಜನರ ಒಮ್ಮತ ಪಡೆದು ಈ ಕಾನೂನು ಜಾರಿಗೆ ಬರುವ ಸಂಕಲ್ಪ ಮಾಡಿದೆ. ಈ ಹಿನ್ನೆಲೆಯಲ್ಲಿ ಬೇಬಿ ಬೋನಸ್ ಕೊಡುವ ಯೋಜನೆ ಕುರಿತಾಗಿ ಈಗಾಗಲೇ ಜನಾಭಿಪ್ರಾಯ ಸಂಗ್ರಹ ಮಾಡಲಾಗುತ್ತಿದ್ದು, ಈವರೆಗೆ 10 ಸಾವಿರಕ್ಕೂ ಹೆಚ್ಚು ಮಂದಿ ಸಹಿ ಹಾಕಿದ್ದಾರೆ.

ತಂದೆಯಿಂದಲೇ ನವಜಾತ ಹೆಣ್ಣು ಶಿಶು ಜೀವಂತ ಸಮಾಧಿ!

ಸಿಂಧ್ (ಪಾಕಿಸ್ತಾನ): ಆ ಹೆಣ್ಣು ಶಿಶು ಇನ್ನೂ ಸರಿಯಾಗಿ ಕಣ್ಣು ಬಿಟ್ಟು ಪ್ರಪಂಚವನ್ನೇ ನೋಡಿರಲಿಲ್ಲ. ಕೇವಲ 15 ದಿನಗಳ ನವಜಾತ ಹೆಣ್ಣು ಮಗು. ಅದನ್ನು ಹೆತ್ತ ತಂದೆಯೇ ಜೀವಂತವಾಗಿ ಸಮಾಧಿ ಮಾಡಿದ್ದಾನೆ. ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ನಡೆದ ಈ ಘಟನೆ ವಿಶ್ವಾದ್ಯಂತ ಗಮನ ಸೆಳೆದಿದೆ. ಹೆತ್ತ ತಂದೆಯೇ ತನ್ನ ಮಗುವನ್ನು ಜೀವಂತ ಸಮಾಧಿ ಮಾಡಲು ಕಾರಣ ಬಡತನ. ಆ ಮಗುವಿಗೆ ವೈದ್ಯಕೀಯ ನೆರವಿನ ಅಗತ್ಯತೆ ಇತ್ತು. ಆದರೆ, ತಂದೆಯ ಬಳಿ ಹಣ ಇರಲಿಲ್ಲ. ಹೀಗಾಗಿ ತನ್ನ ಮಗು ನೋವಿನಿಂದ ಬಳಲುವುದನ್ನು ನೋಡಲು ಸಾಧ್ಯವಾಗದೆ ಆರೋಪಿ ತಂದೆ ತಯ್ಯಬ್ ಈ ಕೃತ್ಯ ಎಸಗಿದ್ದಾನೆ.

ತನ್ನ ನವಜಾತ ಹೆಣ್ಣು ಶಿಶುವನ್ನು ಜೀವಂತವಾಗಿ ಸಮಾಧಿ ಮಾಡುವ ಮುನ್ನ ಗೋಣಿ ಚೀಲದಲ್ಲಿ ಹಾಕಿ ಚೀಲವನ್ನು ಮಣ್ಣಿನಡಿ ಹೂತು ಹಾಕಿದೆ ಎಂದು ಆರೋಪಿ ತಂದೆ ತಯ್ಯಬ್ ಪೊಲೀಸರ ಎದುರು ತಪ್ಪೊಪ್ಪಿಕೊಂಡಿದ್ದಾನೆ. ಇದೀಗ ಪೊಲೀಸರು ಆರೋಪಿ ವಿರುದ್ಧ ಹತ್ಯೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಮೆರಿಕ ಹೆದ್ದಾರಿಗಳಲ್ಲಿ ಸೀರಿಯಲ್ ಕಿಲ್ಲರ್ಸ್! 200ಕ್ಕೂ ಅಧಿಕ ಕಾಲ್‌ಗರ್ಲ್ಸ್ ಹತ್ಯೆ

ನ್ಯೂಯಾರ್ಕ್ (ಅಮೆರಿಕ): ಅಮೆರಿಕ ದೇಶಾದ್ಯಂತ ಹೆದ್ದಾರಿಗಳಲ್ಲಿ ಅಲ್ಲಲ್ಲಿ ಸರಣಿ ಹಂತಕರು, ವಿಕೃತ ಮಾನಸಿಕತೆಯ ವ್ಯಕ್ತಿಗಳು ಇರಬಹುದು ಎಂದು



ನಿವೃತ್ತ ಎಫ್‌ಬಿಐ ಏಜೆಂಟ್ ಎಚ್ಚರಿಕೆ ನೀಡಿದ್ದಾರೆ. ದಿ ಸನ್ ಸುದ್ದಿಸಂಸ್ಥೆಗೆ ಸಂದರ್ಶನ ನೀಡಿರುವ ಎಫ್‌ಬಿಐ ಏಜೆಂಟ್ ಹೆಸರು ಫ್ರಾಂಕ್ ಫಿಗ್ಲುಜಿ. ಸುಮಾರು 25 ವರ್ಷಗಳ ಕಾಲ ಎಫ್‌ಬಿಐ ಸಹಾಯಕ ನಿರ್ದೇಶಕರಾಗಿದ್ದ ಫ್ರಾಂಕ್, ಇದೀಗ ನಿವೃತ್ತ ಜೀವನ ನಡೆಸುತ್ತಿದ್ದು, ಕಳೆದ ಕೆಲವು ದಶಕಗಳಲ್ಲಿ ಅಮೆರಿಕದ ಹೆದ್ದಾರಿಗಳಲ್ಲಿ ನಡೆದಿರುವ ಕೊಲೆ ಪ್ರಕರಣಗಳನ್ನು ಕೂಲಂಕುಷವಾಗಿ ತನಿಖೆ ನಡೆಸುತ್ತಿದ್ದಾರೆ.

ಕಳೆದೆರಡು ದಶಕಗಳಲ್ಲಿ ಅಮೆರಿಕ ಹೆದ್ದಾರಿಗಳಲ್ಲೇ 850ಕ್ಕೂ ಹೆಚ್ಚು ಕೊಲೆಗಳು ನಡೆದಿವೆ. ಈ ಪೈಕಿ 200ಕ್ಕೂ ಹೆಚ್ಚು ಕೊಲೆ ಪ್ರಕರಣಗಳಲ್ಲಿ ಆರೋಪಿ ಯಾರು ಎಂಬುದೇ ಪತ್ತೆಯಾಗಿಲ್ಲ. ಈ ರೀತಿಯ ಬಹುತೇಕ ಪ್ರಕರಣಗಳಲ್ಲಿ ಕೊಲೆಗೀಡಾದವರು ಯಾರು ಎಂಬುದನ್ನು ಕಂಡು ಹಿಡಿಯುವುದೇ ಕಷ್ಟ ಆಗುತ್ತದೆ. ಏಕೆಂದರೆ ಅವರ ಶವವನ್ನು ಗುರುತು ಸಿಗದ ಹಾಗೆ ನಜ್ಜುಗುಜ್ಜು ಮಾಡಲಾಗಿರುತ್ತದೆ.

ಬಹುತೇಕ ಪ್ರಕರಣಗಳಲ್ಲಿ ಮೃತ ಮಹಿಳೆಯರು ವೇಶ್ಯಾವಾಟಿಕೆಯಲ್ಲಿ ತೊಡಗಿರುವ ಕಾರಣ ಕುಟುಂಬದಿಂದ ದೂರವಾಗಿರುತ್ತಾರೆ. ಜೊತೆಯಲ್ಲೇ ಮಾದಕ ವಸ್ತು ಸೇವನೆಯ ಚಟಕ್ಕೆ ಒಳಗಾಗಿರುತ್ತಾರೆ. ಹೀಗಾಗಿ ಇಂಥವರೇ ಸೀರಿಯಲ್ ಕಿಲ್ಲರ್ಸ್‌ಗಳ ಪ್ರಮುಖ ಬಲಿಪಶುಗಳಾಗುತ್ತಿದ್ದಾರೆ.

ಸಿಂಗಾಪುರದಲ್ಲಿ ಮಿಡತೆ, ರೇಷ್ಮೆ ಹುಳು ಸೇರಿದಂತೆ 16 ಕೀಟಗಳನ್ನು ತಿನ್ನಲು ಅನುಮತಿ

ಸಿಂಗಾಪುರ: ರೇಷ್ಮೆ ಹುಳು, ಮಿಡತೆ ಸೇರಿದಂತೆ 16 ಜಾತಿಯ ಕೀಟಗಳನ್ನು ಮಾನವರು ಸೇವಿಸಲು ಸಿಂಗಾಪುರ ಆಹಾರ ಸಂಸ್ಥೆ ಅನುಮತಿ ನೀಡಿದೆ. ಅಲ್ಲದೇ ಇವುಗಳನ್ನು ಪ್ರಖ್ಯಾತ ಅಂತಾರಾಷ್ಟ್ರೀಯ ಆಹಾರ ಹಾಗೂ ಚೀನಿ ಮತ್ತು ಭಾರತದ ಆಹಾರದಲ್ಲೂ ಸೇರಿಸಬಹುದಾಗಿದೆ. ಮಿಡತೆಗಳು ಮತ್ತು ರೇಷ್ಮೆ ಹುಳುಗಳು ಸೇರಿದಂತೆ ಅನೇಕ ಕೀಟಗಳು ಇದೀಗ ತಿನ್ನಲು ಯೋಗ್ಯ ಆಹಾರದ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಈ ಕುರಿತು ಮಾತನಾಡಿರುವ ಸಿಂಗಾಪುರ ಫುಡ್ ಏಜೆನ್ಸಿ, ಈ ಕೀಟಗಳನ್ನು ಆಮದು ಮಾಡಿಕೊಳ್ಳುವುದು ಅಥವಾ ಮಾನವನ ಸೇವನೆಗೆ ಕೃಷಿ ತೋಟ ಅಥವಾ ಜೀವಂತ ಆಹಾರಗಳ ಸೇವನೆ ಸೇರಿದಂತೆ ಪ್ರಮುಖ ವಿಷಯದಲ್ಲಿ ಎಸ್‌ಎಫ್‌ಎ ಮಾರ್ಗಸೂಚಿಯಂತೆ ಕ್ರಮ ನಡೆಸಬೇಕು. ಜೊತೆಗೆ ಈ ಕೀಟಗಳನ್ನು ವನ್ಯ ಪ್ರದೇಶದಲ್ಲಿ ಹೆಕ್ಕದೆ, ನಿಯಂತ್ರಿತ ಕೀಟ ಕೃಷಿ ಯಿಂದ ಆಮದು ನಡೆಸುವ ಸಂಬಂಧ ನಿಯಂತ್ರಣವನ್ನು ಸ್ಥಾಪಿಸಲಾಗಿದೆ.

ನಿವೃತ್ತ ನೌಕರರಿಗೆ ಪಿಂಚಣಿ ನೀಡಿಕೆಯಲ್ಲಿ ವಿಳಂಬ ಧೋರಣೆ ಖಂಡಿಸಿ ಪ್ರತಿಭಟನೆ

ಮೈಸೂರು, ಜು.8(ಎಂಟಿವೈ)- ನಿವೃತ್ತ ನೌಕರರಿಗೆ ಪಿಂಚಣಿ ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸಲಾಗುತ್ತಿದೆ ಎಂದು ಆರೋಪಿಸಿ ಇಪಿಎಸ್ 95, ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು.



ಮೈಸೂರಿನ ಗಾಯತ್ರಿಪುರಂನಲ್ಲಿರುವ ಭವಿಷ್ಯ ನಿಧಿ ಕಚೇರಿ ಮುಂದೆ ನಿವೃತ್ತ ನೌಕರರಿಗೆ ಪಿಂಚಣಿ ವಿಳಂಬ ಧೋರಣೆ ಅನುಸರಿಸಲಾಗುತ್ತಿದೆ ಎಂದು ಆರೋಪಿಸಿ ಇಪಿಎಸ್ 95, ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರಿನ ಗಾಯತ್ರಿಪುರಂನಲ್ಲಿರುವ ಭವಿಷ್ಯ ನಿಧಿ ಕಚೇರಿ ಮುಂಭಾಗ ಸೋಮವಾರ ಪ್ರತಿಭಟನೆ ನಡೆಸಿ, ನಿವೃತ್ತ ನೌಕರರಿಗೆ ಕೇಂದ್ರ ಸರ್ಕಾರ ಮತ್ತು ಭವಿಷ್ಯ ನಿಧಿ ಸಂಸ್ಥೆ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿ ವಿವಿಧ ಘೋಷಣೆ ಕೂಗಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸರ್ವೋಚ್ಚ ನ್ಯಾಯಾಲಯ ಕಳೆದ ಎರಡು ವರ್ಷಗಳ ಹಿಂದೆಯೇ ನಿವೃತ್ತ ನೌಕರರಿಗೆ ಪಿಂಚಣಿ ನೀಡುವ ಸಂಬಂಧ ಸ್ಪಷ್ಟ ಆದೇಶ ಹೊರಡಿಸಿ ಅನುಷ್ಠಾನಗೊಳಿಸುವಂತೆ ಸೂಚನೆ ನೀಡಿದೆ. ಆದರೆ, ಕೇಂದ್ರ ಸರ್ಕಾರ ಮತ್ತು ಭವಿಷ್ಯ ನಿಧಿ ಸಂಸ್ಥೆಯ ಅಧಿಕಾರಿಗಳು ನ್ಯಾಯಾಲಯದ ಆದೇಶವನ್ನು ಗಾಳಿಗೆ ತೂರಿ ನಿವೃತ್ತ ನೌಕರರನ್ನು ವಂಚಿಸುತ್ತಿದ್ದಾರೆ. ಪಿಂಚಣಿಯನ್ನೆ ನಂಬಿ ಬದುಕುತ್ತಿರುವ ಲಕ್ಷಾಂತರ ನಿವೃತ್ತ ನೌಕರರಿಗೆ ಪಿಂಚಣಿ ನೀಡಲು ಹಿಂದೇಟು ಹಾಕುತ್ತಿದೆ. ನಿಯಮಗಳಲ್ಲಿ ಗೊಂದಲ ಉಂಟುಮಾಡಿ ಅನ್ಯಾಯ ಮಾಡುತ್ತಿದ್ದಾರೆ. ಈ ಬಗ್ಗೆ ಕೂಡಲೇ ಪ್ರಧಾನಿ ನರೇಂದ್ರ ಮೋದಿ ಮತ್ತು ಕಾರ್ಮಿಕ ಸಚಿವರು ಮಧ್ಯ ಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಆಗ್ರಹಿಸಿದರು.

ಮಾಸಿಕ 9 ಸಾವಿರ ರೂ. ಪಿಂಚಣಿ ಜೊತೆಗೆ ಡಿಎ ನೀಡಬೇಕು. ನಿವೃತ್ತ ಪತಿ, ಪತ್ನಿ ಮರಣ ಹೊಂದಿದರೆ ಶೇ.100ರಷ್ಟು ಪಿಂಚಣಿ ನೀಡಬೇಕು. ಇಪಿಎಸ್ ನಿವೃತ್ತ ನೌಕರರಿಗೆ ಉಚಿತ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಒದಗಿಸಬೇಕು. ಹಾಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕ ನೌಕರರಿಗೆ ವರ್ಷಕ್ಕೆ 15 ದಿನ ಗ್ರಾಚ್ಯುಟಿಯನ್ನು 20 ದಿನಕ್ಕೆ ಹೆಚ್ಚಿಸಬೇಕು. ಹಿಂದೆ ಇದ್ದಂತೆ ರೈಲ್ವೆ ಪ್ರಯಾಣ ದರದಲ್ಲಿ ರಿಯಾಯಿತಿ ನೀಡಬೇಕು. ದೇಶದ ಎಲ್ಲಾ ಕೈಗಾರಿಕೆಗಳಲ್ಲಿ ದುಡಿಯುವ ಅಸಂಘಟಿತ ಕಾರ್ಮಿಕರಿಗೆ ಮಾಸಿಕ 30 ಸಾವಿರ ರೂ. ವೇತನ ನೀಡಬೇಕು. ಇಪಿಎಫ್ ವ್ಯಾಪ್ತಿಗೆ ಒಳಪಡದ ನಿವೃತ್ತ ಕಾರ್ಮಿಕ ನೌಕರರಿಗೆ ಮಾಸಿಕ 5 ಸಾವಿರ ರೂ. ಪಿಂಚಣಿ ನೀಡಬೇಕು. 2022ರ ಸುಪ್ರೀಂಕೋರ್ಟ್ ನ್ಯಾಯಪೀಠದ ತೀರ್ಪಿನಂತೆ ಸ್ವಯಂ ಗೊಂದಲ ಸೃಷ್ಟಿಸದೆ ಹೆಚ್ಚುವರಿ ಪಿಂಚಣಿ ನೀಡಬೇಕು. ಸೆಪ್ಟೆಂಬರ್ 2014ರ ನಂತರದ ನೌಕರರಿಗೆ ತ್ವರಿತಗತಿಯಲ್ಲಿ ಪಿಂಚಣಿ ನೀಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಇಪಿಎಸ್ 95 ಸಮನ್ವಯ ಸಮಿತಿ ನಾಗಪುರದ ರಾಷ್ಟ್ರೀಯ ಅಧ್ಯಕ್ಷ ಪ್ರಕಾಶ್ ಎಂಡೆ, ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಪಾಠಕ್, ಸದಸ್ಯ ಹಾಸನದ ರಾಮಭದ್ರಯ್ಯ, ಜಿಲ್ಲಾ ಸಮಿತಿಯ ಅಧ್ಯಕ್ಷ ಸ್ವಾಮಿಶೆಟ್ಟಿ, ಉಪಾಧ್ಯಕ್ಷ ನರಸಿಂಹರಾಜು, ಪ್ರಧಾನ ಕಾರ್ಯದರ್ಶಿ ಆರ್.ಜಿ.ಮೋಹನ್ ಕೃಷ್ಣ, ಜಂಟಿ ಕಾರ್ಯದರ್ಶಿ ವಿವೇಕಾನಂದ, ಖಜಾಂಚಿ ಎ.ಪಿ.ಶಿವಕುಮಾರ್ ಇನ್ನಿತರರು ಪಾಲ್ಗೊಂಡಿದ್ದರು.

ಭಗವಂತನ ಸ್ಮರಣೆಯಿಂದ ಬದುಕು ಸಾರ್ಥಕ

ಮಹಾಮೃತ್ಯುಂಜಯ ಹೋಮ ನೆರವೇರಿಸಿ ಶ್ರೀ ವಿದ್ಯಾಪ್ರಿಯತೀರ್ಥ ಅಭಿಮತ

ಮೈಸೂರು, ಜು.8-ಸದಾ ನಮ್ಮನ್ನು ಸಲಹುತ್ತಿರುವ ಭಗವಂತನ ಧ್ಯಾನ, ಜಪ, ತಪ ಮಾಡುವುದರಿಂದ ನಮ್ಮ ಬದುಕು ಕೂಡ ಸಾರ್ಥಕವಾಗುತ್ತದೆ ಎಂದು ಶ್ರೀ ಅದಮಾರು ಮಠದ ಪೀಠಾಧೀಶರಾದ ಶ್ರೀ ವಿದ್ಯಾಪ್ರಿಯತೀರ್ಥ ಶ್ರೀಪಾದಂಗಳ ಅವರು ಆಶೀರ್ವಚನ ನೀಡಿದರು.



ಮೈಸೂರಿನ ಶ್ರೀ ಕೃಷ್ಣಧಾಮದಲ್ಲಿ ಶ್ರೀ ಕೃಷ್ಣ ಟ್ರಸ್ಟ್ ಹಾಗೂ ಶ್ರೀ ಕೃಷ್ಣ ಮಿತ್ರ ಮಂಡಳಿ ವತಿಯಿಂದ ಮಹಾಮೃತ್ಯುಂಜಯ ಹೋಮ ನೆರವೇರಿತು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಶ್ರೀ ಕೃಷ್ಣ ಟ್ರಸ್ಟ್ ಹಾಗೂ ಶ್ರೀ ಕೃಷ್ಣ ಮಿತ್ರ ಮಂಡಳಿ ವತಿಯಿಂದ ನೂರಾರು ಭಕ್ತರ ಸಮಕ್ಷಮದಲ್ಲಿ ಮಹಾ ಮೃತ್ಯುಂಜಯ ಹೋಮ ನೆರವೇರಿತು.

ಸಂಜೆ ಶ್ರೀ ಪಾದಂಗಳ ಅವರ 7 ದಿನಗಳ ಪ್ರವಚನದ ಮಂಗಳ ಹಾಗೂ ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣ ಮಿತ್ರ ಮಂಡಳಿ ವತಿಯಿಂದ ಶ್ರೀಪಾದಂಗಳವರಿಗೆ ಪುಷ್ಪವೃಷ್ಟಿ ಹಾಗೂ ಭಕ್ತರಿಗೆ ಮಂಗಳಾಕ್ಷತೆ ಕೊಟ್ಟು ಅನುಗ್ರಹ ಭಾಷಣ ಮಾಡಿದರು. ಭಗವಂತನ ಶಾಂತ ಕೃಪಾದೃಷ್ಟಿ ನಮ್ಮ ಮೇಲೆ ಬೀಳಲಿ ಎನ್ನುವ ಉದ್ದೇಶದಿಂದ ನಾವೆಲ್ಲ ದೇವಸ್ಥಾನಗಳಿಗೆ ಹೋಗುತ್ತೇವೆ. ಭಗವಂತನ ಸ್ಮರಣೆ ಎಷ್ಟು ಮಾಡಿದರೂ ಕಡಿಮೆಯೇ. ಮನುಷ್ಯನ ನೆಮ್ಮದಿಗೆ ಭಗವಂತನೇ ಹಾದಿ ಎಂದರು. ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣ ಟ್ರಸ್ಟ್‌ನ ಉಪಾಧ್ಯಕ್ಷರಾದ ರವಿಶಾಸ್ತ್ರಿ, ಪಿ.ಎಸ್.ಶೇಖರ್, ಕಾರ್ಯದರ್ಶಿ ಕೆ.ವಿ. ಶ್ರೀಧರ್, ಶ್ರೀ ಕೃಷ್ಣಮಿತ್ರ ಮಂಡಳಿ ಅಧ್ಯಕ್ಷ ಪಿ.ಜಿ.ಪ್ರವೀಣ್, ಮಿತ್ರ ಮಂಡಳಿ ಸದಸ್ಯರು, ನೂರಾರು ಭಕ್ತಾದಿಗಳು ಉಪಸ್ಥಿತರಿದ್ದರು.

ಲಿಂಗತ್ವ ಅಲ್ಪಸಂಖ್ಯಾತ ವ್ಯಕ್ತಿಗಳಿಂದ ಗೃಹಲಕ್ಷ್ಮಿ ಯೋಜನೆಗೆ ಅರ್ಜಿ ಆಹ್ವಾನ

ಮೈಸೂರು,ಜು.8-ಲಿಂಗತ್ವ ಅಲ್ಪ ಸಂಖ್ಯಾತ (ಟ್ರಾನ್ಸ್-ಜೆಂಡರ್ಸ್) ಸಮುದಾಯದವರು ಅಥವಾ ಲಿಂಗತ್ವ ಅಲ್ಪ ಸಂಖ್ಯಾತ ವ್ಯಕ್ತಿಗಳು 'ಗೃಹಲಕ್ಷ್ಮಿ' ಯೋಜನೆಯಡಿ ಪ್ರಯೋಜನ ಪಡೆಯಲು ಅನುವಾಗು ವಂತೆ ಗೃಹಲಕ್ಷ್ಮಿ ಯೋಜನೆಯ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸುವ ಸಂದರ್ಭ ದಲ್ಲಿ National Portal For Trans gender Person ವತಿಯಿಂದ ಪಡೆದಿ ರುವ ಲಿಂಗತ್ವ ಅಲ್ಪಸಂಖ್ಯಾತರರೂ (ಟ್ರಾನ್ಸ್-ಜೆಂಡರ್ಸ್) ಗುರುತಿನ ಚೀಟಿಯನ್ನು ಪರಿಗಣಿಸಲು ಸರ್ಕಾರವು ಅನುಮೋದನೆ ನೀಡಿ ತಂತ್ರಾಂಶದಲ್ಲಿ ಮಾರ್ಪಾಡು ಮಾಡಲಾಗಿದೆ.

ಜುಲೈ 8ರಿಂದ ಲಿಂಗತ್ವ ಅಲ್ಪಸಂಖ್ಯಾತರು ಪ್ರಸ್ತುತ ವಾಸವಾಗಿರುವ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರ ಕಚೇರಿಗೆ ತೆರಳಿ ಗೃಹಲಕ್ಷ್ಮಿ ಯೋಜನೆಯ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಟ್ರಾನ್ಸ್-ಜೆಂಡರ್ಸ್ ಗುರುತಿನ ಚೀಟಿ, ಪಾಸ್ಪೋರ್ಟ್ ಸೈಜ್ ಫೋಟೋ ಮತ್ತು ಆಧಾರ್ ಕಾರ್ಡನ್ನು ಕಡ್ಡಾಯವಾಗಿ ನೀಡಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿ ಗಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ದೂ.ಸಂ: 0821-2495432/2498031 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪ ಕರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶ ಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್ಪಿಗೆ ಅಭಿನಂದನೆ



ಮೈಸೂರು ಜಿಲ್ಲಾ ಪೊಲೀಸ್ ಅಧೀಕ್ಷಕ(ಎಸ್ಪಿ) ಎನ್.ವಿಷ್ಣುವರ್ಧನ ಅವರನ್ನು ನಮ್ಮ ಮಾನವ ಹಕ್ಕುಗಳ ರಕ್ಷಣೆ ಹಾಗೂ ಭ್ರಷ್ಟಾಚಾರ ನಿರ್ಮೂಲನಾ ಸೇವಾ ಸಮಿತಿ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ವಿ.ಪಿ.ಸುಶೀಲ, ಆರ್.ವಿನೋದ್, ಪುಟ್ಟರಾಜು, ಲಿಂಗರಾಜು., ಸುದರ್ಶನ್, ಹೇಮಂತ್, ನಿತ್ಯಾ ಇದ್ದರು.

ಸಾರಿಗೆ ನಿಗಮದ ಸಿಬ್ಬಂದಿ ವರ್ಗಾವಣೆ ಪಟ್ಟಿ ಪ್ರಕಟ

ಮೈಸೂರು, ಜು.8(ಎಸ್‌ಪಿಎನ್)- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಅಂತರ ನಿಗಮ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದ ನೌಕರರ ವರ್ಗಾವಣೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಕೆಎಸ್ ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ, ಕೆಕೆಆರ್‌ಟಿಸಿಗಳ ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ನೌಕರರ 2023ನೇ ಸಾಲಿನ ಅಂತರ ನಿಗಮ ವರ್ಗಾವಣೆ ಪ್ರಕ್ರಿಯೆಗೆ ಅರ್ಜಿ ಸಲ್ಲಿಸಲು ಕಳೆದ ವರ್ಷ ಜುಲೈಯಿಂದ ಡಿಸೆಂಬರ್‌ವರೆಗೆ ಅವಕಾಶ ನೀಡಲಾಗಿತ್ತು. ಪರಸ್ಪರ 958 ನೌಕರರು ಅರ್ಜಿ ಸಲ್ಲಿಸಿದ್ದರು. ಈ ಪೈಕಿ 616 ನೌಕರರನ್ನು ಪರಸ್ಪರ ವರ್ಗಾವಣೆ ಮಾಡಲಾಗಿದ್ದು, ಅದರ ಆದೇಶವನ್ನು ksrtc. karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ನೌಕರರ ಆಕ್ಷೇಪಗಳು ಇದ್ದಲ್ಲಿ ಜುಲೈ 10ರ ಒಳಗೆ ಸಲ್ಲಿಸಲು ಅವಕಾಶ ನೀಡಲಾಗಿದೆ ಆಕ್ಷೇಪಣೆಗಳನ್ನು ಸಂಬಂಧಪಟ್ಟ ವಿಭಾಗದ ಆಡಳಿತಾಧಿಕಾರಿಗಳಿಗೆ ಸಲ್ಲಿಸಿ ಸ್ವೀಕೃತಿ ಪಡೆಯಬೇಕು ಎಂದು ಕೆಎಸ್‌ಆರ್‌ಟಿಸಿ ನಿರ್ದೇಶಕರು (ಸಿಬ್ಬಂದಿ ಮತ್ತು ಜಾಗೃತ) ತಿಳಿಸಿದ್ದಾರೆ.

ರೋಟರಿ ಮೈಸೂರು ಉತ್ತರ ನೂತನ ತಂಡದ ಪದಗ್ರಹಣ



ರೋಟರಿ ಮೈಸೂರು ಉತ್ತರ ನೂತನ ತಂಡದ ಪದಗ್ರಹಣ ಸಮಾರಂಭ ನಡೆಯಿತು. ಚಿತ್ರದಲ್ಲಿ (ಕುಳಿತಿರುವವರು) ಗಣೇಶ್ ಲಾಡ್ (ವಲಯಸೇನಾನಿ), ಕೇಶವಪ್ರಕಾಶ್ (ಸಹಾಯಕ ಗವರ್ನರ್), ಡಾ.ನಾಗಾರ್ಜುನ (ಮಾಜಿ ಜಿಲ್ಲಾ ಗವರ್ನರ್), ಪಿ.ಪ್ರಭಾಕರ್ (ನೂತನ ಅಧ್ಯಕ್ಷ), ಎಲ್.ಆರ್.ಮಹದೇವಸ್ವಾಮಿ (ನೂತನ ಕಾರ್ಯದರ್ಶಿ), ಎಂ.ಕೆ.ಶ್ರೀಧರ್ (ನಿರ್ಗಮಿತ ಅಧ್ಯಕ್ಷ), ರಾಜು (ನಿರ್ಗಮಿತ ಕಾರ್ಯದರ್ಶಿ), ಎಂ.ಚಂದ್ರಶೇಖರ್ (ನಿಯೋಜಿತ ಅಧ್ಯಕ್ಷ) (ನಿಂತಿರುವವರು) ನಿರ್ದೇಶಕರಾದ ವಿರೂಪಾಕ್ಷ, ಬಿ.ಆರ್.ಶಿವಕುಮಾರ್, ರಾಜಶೇಖರ ಕದಂಬ, ರತ್ನರಾಜ್, ಜಗದೀಶ್, ಬಿ.ಎಲ್.ಗೋಪಾಲ್, ಎಂ.ರಾಜು, ಆರ್.ಸ್ವಾಮಿ, ಪುಟ್ಟಬಸಪ್ಪ, ಡಿ.ಬಿ.ರಾಜಶೇಖರಮೂರ್ತಿ, ರಾಮಾರಾಧ್ಯ, ಚನ್ನಬಸವರಾಧ್ಯ ಮತ್ತಿತರರು ಉಪಸ್ಥಿತರಿದ್ದರು.

ಜು.11, ಸಮಾರೋಪ

ಮೈಸೂರು, ಜು.8-ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರದ ವತಿಯಿಂದ ಆಯೋಜಿಸಲಾಗಿದ್ದ ಕೆಎಎಸ್ ಮತ್ತು ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಜು.11 ರಂದು ಬೆಳಗ್ಗೆ 11 ಗಂಟೆಗೆ ಕೆಎಸ್‌ಒಯುನ ಕಾವೇರಿ ಸಭಾಂಗಣದಲ್ಲಿ ನಡೆಯಲಿದೆ. ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ.ವಿ ಹಲಸೆ ಅಧ್ಯಕ್ಷತೆ ವಹಿಸಲಿದ್ದು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತೆ ಡಾ.ಶಾಲಿನಿ ರಜನೀಶ್ ಸಮಾರೋಪ ಶುಭಹಾರೈಕೆ ಮಾಡಲಿದ್ದಾರೆ. ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿ ಡಾ.ಕುಮಾರ ಪ್ರೇರಣಾತ್ಮಕ ನುಡಿ ಆಡಲಿದ್ದು, ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ ಉಪಸ್ಥಿತರಿರಲಿದ್ದಾರೆ.

ಸಮಾಜದ ಆರೋಗ್ಯ, ಮಣ್ಣಿನ ಫಲವತ್ತತೆಗಾಗಿ ಎಣ್ಣೆಕಾಳುಗಳನ್ನು ಬೆಳೆಯಿರಿ

ರೈತರಿಗೆ ಹಮ್ಮಿಕೊಂಡಿದ್ದ ತರಬೇತಿಯಲ್ಲಿ ಸಹಾಯಕ ಕೃಷಿ ನಿರ್ದೇಶಕಿ ಮಮತಾ ಸಲಹೆ

ಮೈಸೂರು, ಜು.8- ರೈತರು ತಾವು ಬೆಳೆಯುವ ಬೆಳೆಗಳ ಜೊತೆಗೆ ಸಮಾಜದ ಆರೋಗ್ಯ ಮತ್ತು ಮಣ್ಣಿನ ಫಲವತ್ತತೆಗಾಗಿ ಎಣ್ಣೆಕಾಳುಗಳನ್ನು ಬೆಳೆಯಬೇಕು ಎಂದು ಸಹಾಯಕ ಕೃಷಿ ನಿರ್ದೇಶಕಿ ಮಮತಾ ಎಸ್.ಬಿ. ತಿಳಿಸಿದರು.



ಮೈಸೂರು ಜಿಲ್ಲಾ ಕೃಷಿ ತರಬೇತಿ ಕೇಂದ್ರ ನಾಗನಹಳ್ಳಿ ವತಿಯಿಂದ ಹಮ್ಮಿಕೊಂಡಿದ್ದ ಎಣ್ಣೆಕಾಳು ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳು -ಮೌಲ್ಯವರ್ಧನೆಗೆ ಇರುವ ಅವಕಾಶ ಕುರಿತ ತರಬೇತಿ ಕಾರ್ಯಕ್ರಮವನ್ನು ಸಹಾಯಕ ಕೃಷಿ ನಿರ್ದೇಶಕಿ ಮಮತಾ ಉದ್ಘಾಟಿಸಿದರು.

ಜಿಲ್ಲಾ ಕೃಷಿ ತರಬೇತಿ ಕೇಂದ್ರ ನಾಗನಹಳ್ಳಿ ವತಿಯಿಂದ ಹಮ್ಮಿಕೊಂಡಿದ್ದ ಎರಡು ದಿನಗಳ ಎಣ್ಣೆಕಾಳು ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳು ಮತ್ತು ಮೌಲ್ಯವರ್ಧನೆಗೆ ಇರುವ ಅವಕಾಶ ಕುರಿತ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬರಗಾಲದ ಸನ್ನಿವೇಶದಲ್ಲಿ ತೇವಾಂಶದ ಕೊರತೆ ನೀಗಿಸುವುದರ ಜೊತೆಗೆ ಉತ್ತಮ ಇಳುವರಿ ಪಡೆಯಲು ರೈತರು ಸಾವಯುವ ಕೃಷಿ, ಬೆಳೆ ಪರಿವರ್ತನೆ ಮತ್ತು ಮಿಶ್ರ ಬೆಳೆ ಪದ್ಧತಿಗಳನ್ನು ಅಳವಡಿಸಬೇಕೆಂದು ತಿಳಿಸಿದರು.

ಮಂಡ್ಯದ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಪಿ.ತಿಮ್ಮೇಗೌಡ, ವಿವಿಧ ಎಣ್ಣೆಕಾಳು ಬೆಳೆಗಳ ಸುಧಾರಿತ ತಳಿಗಳು ಮತ್ತು ಬೇಸಾಯ ಕ್ರಮಗಳ ಬಗ್ಗೆ ರೈತರಿಗೆ ತಾಂತ್ರಿಕ ಮಾಹಿತಿ ನೀಡಿದರು.

ಮೈಸೂರು ಸಿ.ಎಫ್.ಟಿ.ಆರ್.ಐ. ಹಿರಿಯ ವಿಜ್ಞಾನಿ ಡಾ.ಗೋವಿಂದರಾಜು ಕೆ. ಪ್ರಾತ್ಯಕ್ಷಿಕೆ ಮೂಲಕ ಎಣ್ಣೆಕಾಳು ಬೆಳೆಗಳಲ್ಲಿ ಮೌಲ್ಯವರ್ಧನೆ ಮತ್ತು ಕಲಬೆರಕೆ ಎಣ್ಣೆ ಕಂಡುಹಿಡಿಯುವ ವಿಧಾನಗಳ ಕುರಿತು ರೈತರಿಗೆ ತೋರಿಸಿಕೊಟ್ಟರು. ನಂತರ ರೋಗತಜ್ಞೆ ಡಾ. ಆರ್.ಎನ್. ಪುಷ್ಪ, ಬೀಜೋಪಚಾರ, ಸಮಗ್ರ ರೋಗ - ಕೀಟ ನಿರ್ವಹಣೆ ಮತ್ತು ದಾಸ್ತಾನು ಕೀಟಗಳ ನಿರ್ವಹಣೆ ಕುರಿತು ತಾಂತ್ರಿಕ ಉಪನ್ಯಾಸ ನೀಡಿದರು.

ತೆಂಗಿನ ಹಾಲಿನಿಂದ ಐಸ್‌ಕ್ರೀಮ್ ತಯಾರಿಕೆ ಮತ್ತು ಮೌಲ್ಯವರ್ಧನೆ ಕುರಿತು ಪ್ರಗತಿಪರ ರೈತರಾದ ಸುರೇಶ್ ಭಟ್, ಕೊರ್ಗಳ್ಳಿ, ಅನುಭವ ಹಂಚಿಕೊಂಡರು. ಸಹಾಯಕ ಕೃಷಿ ನಿರ್ದೇಶಕಿ ಮಧುಲತಾ ಹೆಚ್.ಬಿ., ಜೈವಿಕ ಗೊಬ್ಬರಗಳ ಮಹತ್ವ ಮತ್ತು ಬೆಳೆವಿಮೆ ಮತ್ತು ಬೆಳೆ ಸಮೀಕ್ಷೆ ಬಗ್ಗೆ ಮಾಹಿತಿ ನೀಡಿದರು.

ಸಹಾಯಕ ಕೃಷಿ ನಿರ್ದೇಶಕಿ ವಜ್ರೇಶ್ವರಿ ಎಸ್., ಮಣ್ಣು ಮಾದರಿಗಳ ಸಂಗ್ರಹಣೆ ಮತ್ತು ಫಲಿತಾಂಶ ಆಧಾರಿತ ರಸಗೊಬ್ಬರಗಳ ಬಳಕೆ ಬಗ್ಗೆ ಮಾಹಿತಿ ನೀಡಿದರು. ಉದಯೋನ್ಮುಖ ಉದ್ಯಮಿ ಮೋಹನ್ ಕುಮಾರ್, ಗಾಣದ ಮೂಲಕ ಎಣ್ಣೆ ತೆಗೆದು ಆರೋಗ್ಯಯುಕ್ತ ಅಡುಗೆ ಎಣ್ಣೆ ಉತ್ಪಾದನೆ ಮತ್ತು ಮಾರುಕಟ್ಟೆಗಿರುವ ಅವಕಾಶಗಳ ಕುರಿತು ಅನುಭವ ಹಂಚಿಕೊಂಡರು.

ತರಬೇತಿ ಸಂಯೋಜಕಿ ಹಾಗೂ ಕೃಷಿ ಅಧಿಕಾರಿ ಮಂಜುಳ FID ಹಾಗೂ ಪಿ.ಎಂ.ಕಿಸಾನ್ ಯೋಜನೆ ಬಗ್ಗೆ ತಿಳಿಸಿದರು. ತರಬೇತಿ ಮುಕ್ತಾಯದ ನಂತರ 25 ಅಂಕಗಳಿಗೆ ಪರೀಕ್ಷೆ ನಡೆಸಲಾಗಿ ತರಬೇತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಹೆಚ್ಚಿನ ಅಂಕ ಪಡೆದ ದೇವಮ್ಮ ಕೆ.ಎಂ, ರತ್ನೇಶ್ವರ ಅವರಿಗೆ ಪುಸ್ತಕಗಳನ್ನು ನೀಡಿ, ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ರಾಜಶೇಖರ ಹೆಚ್.ಆರ್, ಶಿಲ್ಪ ಜಿ.ಕೆ. ಹಾಗೂ ಜಿಲ್ಲೆಯ ವಿವಿಧ ಗ್ರಾಮಗಳ 30 ಜನ ರೈತರು ಭಾಗವಹಿಸಿದ್ದರು.

ಜು.12, ರೈತರಿಗೆ ತರಬೇತಿ

ಮೈಸೂರು: ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಜು.12 ರಂದು ತೆಂಗು ಬೆಳೆ ನಿರ್ವಹಣೆಯಲ್ಲಿ ಸಮಸ್ಯೆಗಳು ಮತ್ತು ಪರಿಹಾರಗಳು ಕುರಿತು ರೈತ, ರೈತಮಹಿಳೆಯರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ. ತರಬೇತಿಯಲ್ಲಿ ಭಾಗವಹಿಸುವ ರೈತ, ರೈತ ಮಹಿಳೆಯರಿಗೆ ಊಟದ ವ್ಯವಸ್ಥೆ ಒದಗಿಸಲಾಗಿದ್ದು, ತರಬೇತಿ ಸಂಯೋಜಕರಾದ ಸಹಾಯಕ ಕೃಷಿ ನಿರ್ದೇಶಕಿ ಮಮತಾ ದೂ. ಸಂ: 82779 33180ಗೆ ಕರೆಮಾಡಿ ಆಸಕ್ತ ರೈತ, ರೈತ ಮಹಿಳೆಯರು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ಮೈಸೂರು ಜಿಲ್ಲೆಯ 50 ರೈತ, ರೈತ ಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಆದ್ಯತೆ ನೀಡಲಾಗುವುದು.

ಮೈಸೂರು ಮಿತ್ರ ಮಂಗಳವಾರ 9 ಜುಲೈ 2024

ಗೃಹಲಕ್ಷ್ಮಿ ಯೋಜನೆ: ಕೊಡಗಲ್ಲಿ ಶೇ.98.98ರಷ್ಟು ಸಾಧನೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಯೋಜನೆ ಶೇ.98.98ರಷ್ಟು ಸಾಧಿಸಿದೆ.

ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಯೋಜನೆಗೆ ಇದುವರೆಗೆ 1,15,229 ಮಹಿಳೆಯರು ನೋಂದಣಿ ಮಾಡಿದ್ದು, ಇವರಲ್ಲಿ 1,14,056 ಫಲಾನುಭವಿಗಳಿಗೆ ಹಣ ಮಂಜೂರಾಗಿದೆ. ಮಡಿಕೇರಿ ತಾಲೂಕಿನಲ್ಲಿ 30,341 ಮಹಿಳೆಯರು ನೋಂದಣಿಯಾಗಿದ್ದು, ಇವರಲ್ಲಿ 30,169 ಮಹಿಳೆಯರಿಗೆ ಮಂಜೂರಾತಿ (ಶೇ.99.43) ದೊರೆತಿದೆ. ಸೋಮವಾರಪೇಟೆ ತಾಲೂಕಿನಲ್ಲಿ 24,238 ಮಹಿಳೆಯರು ಹೆಸರು ನೋಂದಾಯಿಸಿದ್ದು, ಇವರಲ್ಲಿ 24,124 ಫಲಾನುಭವಿಗಳಿಗೆ ಮಂಜೂರಾತಿ (ಶೇ.99.53) ದೊರೆತಿದೆ.

ಕುಶಾಲನಗರ ತಾಲೂಕಲ್ಲಿ 22,108 ಫಲಾನುಭವಿಗಳು ನೋಂದಣಿಯಾಗಿದ್ದು, ಇವರಲ್ಲಿ 21,830 ಮಹಿಳೆಯರಿಗೆ (ಶೇ.98.74), ವಿರಾಜಪೇಟೆ ತಾಲೂಕಲ್ಲಿ 20,519 ಹೆಸರು ನೋಂದಾಯಿಸಿದ್ದು, ಇವರಲ್ಲಿ 20,194 ಮಹಿಳೆಯರಿಗೆ (ಶೇ.98.42) ಹಾಗೂ ಪೊನ್ನಂ ಪೇಟೆ ತಾಲೂಕಲ್ಲಿ 18,023 ಹೆಸರು ನೋಂದಣಿಯಾಗಿದ್ದು, ಇವರಲ್ಲಿ 17,739 ಮಹಿಳೆಯರಿಗೆ ಮಂಜೂರಾತಿ (ಶೇ.98.42) ದೊರೆತು ಪ್ರಗತಿ ಸಾಧಿಸಲಾಗಿದೆ. ಒಟ್ಟಾರೆ 79 ಫಲಾನುಭವಿಗಳಿಗೆ ಸೌಲಭ್ಯ ಪಾವತಿಗೆ ಬಾಕಿ ಇದ್ದು, ಜಿಲ್ಲೆಯಲ್ಲಿ 1094 ಮಂದಿ ಎನ್‌ಪಿಸಿಐ ಮತ್ತು ಇಕೆವೈಸಿ ಮಾಡಿಸಲು ಬಾಕಿ ಇದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ನಟರಾಜು ತಿಳಿಸಿದ್ದಾರೆ.

ಹಾರಂಗಿ ಜಲಾಶಯಕ್ಕೆ ಹೆಚ್ಚಿನ ಒಳ ಹರಿವು ಹಿನ್ನೆಲೆ

ಸಾವಿರ ಕ್ಯೂಸೆಕ್ ನೀರು ಬಿಡುಗಡೆ



ಹಾರಂಗಿ ಜಲಾಶಯದಿಂದ ಸಾವಿರ ಕ್ಯೂಸೆಕ್ ನೀರು ನದಿಗೆ ಬಿಡುಗಡೆ.

ಕುಶಾಲನಗರ, ಜು.8–ಹಾರಂಗಿ ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಹೆಚ್ಚಿನ ಒಳ ಹರಿವು ಬರುತ್ತಿದ್ದು, ಜಲಾಶಯ ಸಂಪೂರ್ಣ ಭರ್ತಿಯಾಗುವ ಮುನ್ನವೇ ಪ್ರವಾಹ ಮುಂಜಾಗ್ರತಾ ಕ್ರಮವಾಗಿ ಜಲಾಶಯದಿಂದ ಮಂಗಳವಾರ ಸಂಜೆ 1 ಸಾವಿರ ಕ್ಯೂಸೆಕ್ ನೀರನ್ನು ಬಿಡುಗಡೆ ಮಾಡಲಾಯಿತು.

ಜಲಾಶಯಕ್ಕೆ ಭೇಟಿ ನೀಡಿದ ಶಾಸಕ ಡಾ.ಮಂತರ್‌ಗೌಡ, ಜಲಾಶಯದಲ್ಲಿ ಸಂಗ್ರಹವಾಗಿರುವ ನೀರಿನ ಪ್ರಮಾಣ, ಮುಂದಿನ ಮಳೆ ಮುನ್ಸೂಚನೆ, ಒಳ ಹರಿವಿನ ಪ್ರಮಾಣ, ಪ್ರಸ್ತುತ ನದಿಗೆ ಬಿಡಲಾಗುತ್ತಿರುವ ನೀರಿನ ಪ್ರಮಾಣ ಕುರಿತು ಜಲಾಶಯದ ಅಧಿಕಾರಿಗಳು ಮತ್ತು ಇಂಜಿನಿಯರ್‌ಗಳಿಂದ ಮಾಹಿತಿ ಪಡೆದರು.

ಉತ್ತಮ ಮಳೆಯಿಂದ ಕಾವೇರಿ ನದಿಯಲ್ಲೂ ನೀರಿನ ಮಟ್ಟ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಜಲಾಶಯದಿಂದ ಹರಿಸುವ ನೀರಿನಿಂದ ಪ್ರವಾಹ ಪರಿಸ್ಥಿತಿ ಉಂಟಾಗದಂತೆ ಎಚ್ಚರ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಬಳಿಕ ಶಾಸಕರು ಮತ್ತು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಜಲಾಶಯದ 4 ಕ್ರೆಸ್ಟ್ ಗೇಟ್‌ಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಕ್ರೆಸ್ಟ್ ಗೇಟ್‌ನ ವಿದ್ಯುತ್ ಚಾಲಿತ ಯಂತ್ರದ ಗುಂಡಿ ಒತ್ತುವ ಮೂಲಕ ನೀರು ಬಿಡುಗಡೆ ಮಾಡಿದರು.

ಮುನ್ನೆಚ್ಚರಿಕೆ ವಹಿಸಿ: ಹಾರಂಗಿ ಜಲಾನಯನ ಪ್ರದೇಶಗಳಾದ ಮಡಿಕೇರಿ ನಗರ, ಗಾಳಿಬೀಡು, ವಣಚಲು, ಕಾಲೂರು, ಸೂರ್ಲಬ್ಬಿ ಮತ್ತಿತರ ಗ್ರಾಮಗಳಲ್ಲಿ ವ್ಯಾಪಕ ಮಳೆಯಾಗುತ್ತಿದ್ದು, ಜಲಾಶಯದ ನೀರಿನ ಮೂಲಗಳಾದ ಹಟ್ಟಿಹೊಳೆ ಮತ್ತು ಮಾದಾಪುರ ಹೊಳೆಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ.

ಈ ನದಿಗಳ ನೀರು ಹಾರಂಗಿ ಹಿನ್ನೀರಿಗೆ ಸೇರುತ್ತಿದ್ದು, ಜಲಾಶಯದ ಒಳಹರಿವಿನ ಪ್ರಮಾಣ ಸಹಜವಾಗಿಯೇ ಏರಿಕೆಯಾಗುತ್ತಿದೆ. ಹವಾಮಾನ ಇಲಾಖೆ ಮುನ್ಸೂಚನೆಯಂತೆ ಜಲಾನಯನ ಪ್ರದೇಶಗಳಲ್ಲಿ ಭಾರೀ ಮಳೆಯಾಗುವ ಸಂಭವವಿದೆ. ಇದರಿಂದ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಲಕ್ಷಣಗಳಿವೆ. ಜಲಾಶಯ ಶೀಘ್ರ ಗರಿಷ್ಠ ಮಟ್ಟ ತಲುಪುವುದರಿಂದ ನದಿಗೆ ಹೆಚ್ಚುವರಿ ನೀರನ್ನು ಹರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹಾರಂಗಿ ಮತ್ತು ಕಾವೇರಿ ನದಿ ಪಾತ್ರದ ಸಾರ್ವಜನಿಕರು ತಮ್ಮ ಆಸ್ತಿ ಪಾಸ್ತಿ ಹಾಗೂ ಜನಜಾನುವಾರು ರಕ್ಷಣೆ ಬಗ್ಗೆ ಮುನ್ನೆಚ್ಚರಿಕೆ ವಹಿಸಿ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಹಾರಂಗಿ ಪುನರ್ವಸತಿ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಪುಟ್ಟಸ್ವಾಮಿ ತಿಳಿಸಿದ್ದಾರೆ.

ಈ ಸಂದರ್ಭ ಕುಶಾಲನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಸದಸ್ಯ ಕಿರಣ್‌ಕುಮಾರ್, ಕುಶಾಲನಗರ ಪುರಸಭಾ ನಾಮನಿರ್ದೇಶಿತ ಸದಸ್ಯ ಶಿವಶಂಕರ್, ಹರೀಶ್, ಕೂಡಿಗೆ ಗ್ರಾಪಂ ಸದಸ್ಯ ಟಿ.ಪಿ.ಹಮೀದ್, ತೊರೆನೂರು ನೀರು ಬಳಕೆದಾರರ ಸಂಘದ ಅಧ್ಯಕ್ಷ ಪಾಂಡುರಂಗ, ಕಾವೇರಿ ನೀರಾವರಿ ನಿಗಮದ ಮೇಲ್ವಿಚಾರಕ ಕೆ.ಕೆ.ರಘುಪತಿ, ಹಾರಂಗಿ ಜಲಾಶಯದ ಕಾರ್ಯಪಾಲಕ ಇಂಜಿನಿಯರ್ ಐ.ಕೆ.ಪುಟ್ಟ ಸ್ವಾಮಿ, ಕಿರಿಯ ಇಂಜಿನಿಯರ್ ಸಿದ್ದರಾಜು ಸೌಮ್ಯ, ಪ್ರಮುಖರಾದ ಕೃಷ್ಣೇಗೌಡ, ಶಿವಕುಮಾರ್, ಆದಂ, ಚಂದ್ರಶೇಖರ್, ಚೇತನ್, ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.

ಹಾರಂಗಿ ಜಲಾಶಯ ವಿವರ

ಹಾರಂಗಿ ಜಲಾಶಯದ ಗರಿಷ್ಠ ಮಟ್ಟ 2,859 ಅಡಿಗಳಾಗಿದ್ದು, ಪ್ರಸ್ತುತ ಜಲಾಶಯದಲ್ಲಿ 2848.76 ಅಡಿಗಳಷ್ಟು ನೀರಿನ ಸಂಗ್ರಹವಿದೆ. ಸೋಮವಾರ ಜಲಾಶಯಕ್ಕೆ 2394 ಕ್ಯೂಸೆಕ್ ಒಳ ಹರಿವು ಬರುತ್ತಿದೆ. ನದಿಗೆ 1 ಸಾವಿರ ಕ್ಯೂಸೆಕ್ ಹರಿಯ ಬಿಡಲಾಗಿದೆ.

ಹೈ ಬೀಮ್ ವಾಹನ ಚಾಲಕರಿಗೆ ದಂಡ



ನಾಪೋಕ್ಲುವಿನಲ್ಲಿ ಹೈ ಬೀಮ್ ಲೈಟ್ ಅಳವಡಿಸಿದ್ದ ವಾಹನ ಚಾಲಕರಿಗೆ ಪೊಲೀಸರು ದಂಡ ವಿಧಿಸಿದರು.

ಮಡಿಕೇರಿ, ಜು.8–'ಹೈ ಬೀಮ್' ಲೈಟ್ ಅಳವಡಿಸಿದ್ದ ವಾಹನ ಚಾಲಕರಿಗೆ ನಾಪೋಕ್ಲು ಪೊಲೀಸರು ಜಾಗೃತಿ ಮೂಡಿಸುವ ಜೊತೆಗೆ ದಂಡ ವಿಧಿಸಿ ಬಿಸಿ ಮುಟ್ಟಿಸಿದ್ದಾರೆ.

ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್ ನೇತೃತ್ವದಲ್ಲಿ ತಪಾಸಣೆ ನಡೆಸಿದ ಪೊಲೀಸರು, ಸಂಚಾರ ನಿಯಮ ಉಲ್ಲಂಘಿಸಿ, ಪ್ರಖರ ಹಾಗೂ ಹೆಚ್ಚು ಬೆಳಕು ಹೊರ ಸೂಸುವ ಎಲ್‌ಇಡಿ ಲೈಟ್ ಅಳವಡಿಸಿದ್ದ ವಾಹನ ಚಾಲಕರಿಗೆ ದಂಡ ವಿಧಿಸಿ, ಲೈಟ್ ತೆರವುಗೊಳಿಸುವಂತೆ ಸೂಚಿಸಿದರು.

ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸುವುದರಿಂದ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿವೆ. ಕೂಡಲೇ ವಾಹನ ಚಾಲಕರು ಎಲ್‌ಇಡಿ ಬಲ್ಬ್‌ಗಳನ್ನು ತೆರವುಗೊಳಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಠಾಣಾಧಿಕಾರಿ ಮಂಜುನಾಥ್ ಎಚ್ಚರಿಕೆ ನೀಡಿದರು.

ಇದೇ ವೇಳೆ ಚಾಲಕರು ನಾವು ಯಾವುದೇ ನಿಯಮ ಉಲ್ಲಂಘಿಸಿ ಬಲ್ಬ್‌ಗಳನ್ನು ಅಳವಡಿಸಿಲ್ಲ. ಇತ್ತೀಚೆಗೆ ಬರುವ ಎಲ್ಲಾ ಕಂಪನಿಗಳ ವಾಹನಗಳು ಎಲ್‌ಇಡಿ ಬಲ್ಬ್ ಅಳವಡಿಸಿಯೇ ಬರುತ್ತಿವೆ. ಆದ್ದರಿಂದ ನಾವು ದಂಡ ಕಟ್ಟಲು ತಯಾರಿಲ್ಲ ಎಂದು ಪೊಲೀಸರೊಂದಿಗೆ ವಾಗ್ವಾದ ನಡೆಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಠಾಣಾಧಿಕಾರಿ ಮಂಜುನಾಥ್, ಎಲ್‌ಇಡಿ ಬಲ್ಬ್ ಅಳವಡಿಸಿದ್ದ ವಾಹನಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಈಗಾಗಲೇ ಇಲಾಖೆ ಮೇಲಾಧಿಕಾರಿಗಳಿಂದ ಆದೇಶ ಬಂದಿದೆ. ವಾಹನ ಚಾಲಕರು ಹಾಗೂ ಮಾಲೀಕರು ತಮ್ಮ ವಾಹನಗಳ ಕಂಪನಿಗಳ ಗಮನಕ್ಕೆ ತಂದು ಎಲ್‌ಇಡಿ ಬಲ್ಬ್‌ಗಳನ್ನು ತೆರವುಗೊಳಿಸಬೇಕೆಂದು ಸೂಚಿಸಿದರು.

ಕಡಗದಾಳು ವಿದ್ಯಾರ್ಥಿಗಳು, ಶಿಕ್ಷಕರಿಗೆ ಸನ್ಮಾನ



ಕಡಗದಾಳು ಪ್ರೌಢಶಾಲೆ ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು ದಲಿತ ಸಂಘರ್ಷ ಸಮಿತಿ ವತಿಯಿಂದ ಸನ್ಮಾನಿಸಲಾಯಿತು.

ಮಡಿಕೇರಿ, ಜು.8–ಕಡಗದಾಳು ಪ್ರೌಢಶಾಲೆಯ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ಶೇ.100ರಷ್ಟು ಫಲಿತಾಂಶಕ್ಕೆ ಕಾರಣರಾದ ಶಿಕ್ಷಕರನ್ನು ದಲಿತ ಸಂಘರ್ಷ ಸಮಿತಿ ವತಿಯಿಂದ ಸನ್ಮಾನಿಸಲಾಯಿತು.

ಶಾಲೆಯ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಮಾಜ ಸೇವಕ ಟಿ.ಆರ್.ವಾಸುದೇವ್, ಪ್ರಸ್ತುತ ದಿನಗಳಲ್ಲಿ ಶಿಕ್ಷಕರಲ್ಲಿ ದೇವರನ್ನು ಕಾಣುತ್ತಿದ್ದೇವೆ. ಶಿಕ್ಷಕರನ್ನು ಗೌರವಿಸಿದರೆ ಎಲ್ಲಾ ಕೆಲಸ ಕಾರ್ಯ ನೆರವೇರುತ್ತವೆ. ವಿದ್ಯಾರ್ಥಿಗಳು ಮೊಬೈಲ್‌ನಿಂದ ದೂರವಿದ್ದು, ಉತ್ತಮವಾಗಿ ಓದಿ ಶಾಲೆಗೆ ಒಳ್ಳೆಯ ಹೆಸರು ತರಬೇಕು ಮತ್ತು ಸಮಾಜದಲ್ಲಿ ಒಳ್ಳೆಯ ಪ್ರಜೆಗಳಾಗಬೇಕು ಎಂದರು.

ಸಂಘಟನೆ ಜಿಲ್ಲಾ ಸಂಚಾಲಕ ಹೆಚ್.ಎಲ್.ದಿವಾಕರ್ ಮಾತನಾಡಿ, ಕೊಡಗಿನ ಎಲ್ಲಾ ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಶೇ.100ರಷ್ಟು ಫಲಿತಾಂಶ ಬರಬೇಕು ಎಂಬ ಕಾರಣಕ್ಕಾಗಿ ಸಂಘಟನೆ ವತಿಯಿಂದ ಸುಮಾರು 10 ವರ್ಷಗಳಿಂದ ಉತ್ತಮ ಫಲಿತಾಂಶ ಬಂದ ಸರ್ಕಾರಿ ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ ಕಾಲೇಜಿನ ಶಿಕ್ಷಕರು ಹಾಗೂ ಉಪನ್ಯಾಸಕರನ್ನು ಸನ್ಮಾನಿಸಲಾಗುತ್ತಿದೆ ಎಂದರು. ಸಮಾಜ ಸೇವಕ ಉಣ್ಣಿಕೃಷ್ಣ, ಶಾಲೆಯ ಶಿಕ್ಷಕ ದೀಪಕ್, ಮುಖ್ಯ ಶಿಕ್ಷಕಿ ಭವತಿ ಮಾತನಾಡಿದರು. ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ನಾಸಿರ್, ಕಡಗದಾಳು ಗ್ರಾಪಂ ಅಧ್ಯಕ್ಷೆ ಭಾರತಿ, ಅಭಿವೃದ್ಧಿ ಅಧಿಕಾರಿ ಅನಿತಾ, ಮೊದೂರು ತಿಮ್ಮಯ್ಯ ಹಾಜರಿದ್ದರು.

ರಾಷ್ಟ್ರ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಡಿಕೇರಿ, ಜು.8– ಪ್ರಸಕ್ತ ಸಾಲಿನಲ್ಲಿ ರಾಷ್ಟ್ರ ಪ್ರಶಸ್ತಿಗೆ ವಿಕಲಚೇತನರ ಸಬಲೀಕರಣಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವ್ಯಕ್ತಿ, ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವೆಬ್‌ಸೈಟ್ www.awards.gov.inನಲ್ಲಿ ಜು.31ರೊಳಗೆ ಅರ್ಜಿ ಸಲ್ಲಿಸಬೇಕು. ನಂತರ ಅರ್ಜಿಯ ಒಂದು ಪ್ರತಿಯನ್ನು ನಗರದ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕಚೇರಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಕಚೇರಿಗೆ ನೀಡಬೇಕು.

ಮಾಹಿತಿಗೆ ಕಚೇರಿಯ ದೂರವಾಣಿ ಸಂಖ್ಯೆ : 08272–295829 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಯವರು ತಿಳಿಸಿದ್ದಾರೆ.

ವಿರಾಜಪೇಟೆಯಲ್ಲಿ ಆಶ್ರಯದಾತ ಯೋಜನೆ ಜಾರಿ



ಸುದ್ದಿಗೋಷ್ಠಿಯಲ್ಲಿ ಹಿಂದೂ ಮಲಯಾಳಿ ಅಸೋಸಿಯೇಷನ್ ಅಧ್ಯಕ್ಷ ಎ.ವಿನೂಪ್ ಕುಮಾರ್ ಮಾತನಾಡಿದರು.

ವಿರಾಜಪೇಟೆ, ಜು.8–ಹಿಂದೂ ಮಲಯಾಳಿ ಅಸೋಸಿಯೇಷನ್ ವತಿಯಿಂದ ಆಶ್ರಯದಾತ ಯೋಜನೆ ಜಾರಿಗೊಳಿಸಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಎ.ವಿನೂಪ್ ಕುಮಾರ್ ತಿಳಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿರಾಜಪೇಟೆ ಮಲಬಾರ್ ರಸ್ತೆಯ ಶ್ರೀ ಚೈತನ್ಯ ಮಠಪುರ ಮುತ್ತಪ್ಪ ದೇವಾಲಯ ಆವರಣದಲ್ಲಿ ಯೋಜನೆಗೆ ಚಾಲನೆ ನೀಡಲಾಗಿದೆ. ಸಮುದಾಯದಲ್ಲಿ ಶೇ.80ರಷ್ಟು ದುರ್ಬಲ ಕುಟುಂಬಗಳಿವೆ. ಇವರಲ್ಲಿ ಹಲವಾರು ಮಂದಿ ಕೂಲಿ ಆಶ್ರಯಿಸಿದ್ದಾರೆ. ಕುಟುಂಬದ ಜವಾಬ್ದಾರಿ ಹೊತ್ತವರು ಮರಣ ಹೊಂದಿದಲ್ಲಿ ಆ ಕುಟುಂಬ ಆರ್ಥಿಕವಾಗಿ ಕುಗ್ಗಿ ಹೋಗುತ್ತದೆ. ಆದ್ದರಿಂದ ಆ ಕುಟುಂಬಕ್ಕೆ ದೇಣಿಗೆ ನೀಡುವ ಮೂಲಕ ಆಶ್ರಯದಾತ ಯೋಜನೆ ಉಪಯುಕ್ತವಾಗಲಿದೆ ಎಂದರು.

500 ರೂ. ನೀಡಿ ಅಸೋಸಿಯೇಷನ್ ಸದಸ್ಯತ್ವ ಪಡೆಯಬಹುದು. 60 ವರ್ಷದೊಳಗಿನವರು ಮರಣ ನಿಧಿ ಸದಸ್ಯತ್ವ ಪಡೆಯಬಹುದು. ಈಗಾಗಲೇ 100 ಜನ ಸದಸ್ಯತ್ವ ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು.

ಅಸೋಸಿಯೇಷನ್ ಕಾರ್ಯದರ್ಶಿ ಶಾಜು ಮೋನ್ ಮಾತನಾಡಿ, ಆಶ್ರಯ ಕುಟುಂಬಕ್ಕೆ ಆಸರೆಯಾಗುತ್ತದೆ. ಕುಟುಂಬದ ಜವಾಬ್ದಾರಿ ಹೊತ್ತವರು ಅನಾರೋಗ್ಯದಿಂದ ಬಳಲುತ್ತಿದ್ದರೆ ಆಸ್ಪತ್ರೆ ವೆಚ್ಚ ಹಾಗೂ ಮರಣ ಹೊಂದಿದಲ್ಲಿ ಈ ಯೋಜನೆಯಡಿ ಹಣ ಭರಿಸಲಾಗುವುದು. ಮಾಹಿತಿಗೆ ಮೊ.ಸಂ: 9902318205 ಅಥವಾ 80735 94133 ಅನ್ನು ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಅಸೋಸಿಯೇಷನ್ ಸಹ ಕಾರ್ಯದರ್ಶಿ ಉಣ್ಣಿಕೃಷ್ಣ, ಖಜಾಂಚಿ ಡಿ.ಕೆ.ಸುನೀಲ್ ಕುಮಾರ್, ನಿರ್ದೇಶಕ ಸುರೇಶ್, ಮುತ್ತಪ್ಪ ದೇವಾಲಯ ಆಡಳಿತ ಮಂಡಳಿ ಅಧ್ಯಕ್ಷ ಟಿ.ಕೆ.ರಾಜನ್ ಉಪಸ್ಥಿತರಿದ್ದರು.

ಮೌಢ್ಯಕ್ಕೆ ತಿಲಾಂಜಲಿ: ಸಿದ್ದರಾಮಯ್ಯಗೆ ಪ್ರಶಂಸೆ

• ನಾಳೆ ಮುಖ್ಯಮಂತ್ರಿ ಜಿಲ್ಲಾ ಕೇಂದ್ರಕ್ಕೆ ಭೇಟಿ • ಕೃತಜ್ಞತಾ ಸಮಾರಂಭದಲ್ಲಿ ಭಾಗಿ



ಸಿದ್ದರಾಮಯ್ಯ

ಚಾಮರಾಜನಗರ, ಜು.8–ನಾಳೆ (ಜು.10) ಜಿಲ್ಲಾ ಕೇಂದ್ರ ಚಾಮರಾಜನಗರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡುತ್ತಿದ್ದು, ಅತೀ ಹೆಚ್ಚು ಬಾರಿ ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಸಿದ್ದರಾಮಯ್ಯ ಪಾತ್ರರಾಗುತ್ತಿದ್ದಾರೆ.

ಜಿಲ್ಲೆಗೆ ಭೇಟಿ ನೀಡಿದರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ಮೌಢ್ಯಕ್ಕೆ ತಿಲಾಂಜಲಿ ಹಾಡಿರುವ ಸಿದ್ದರಾಮಯ್ಯ 2013–18ನೇ ಸಾಲಿನಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಜಿಲ್ಲಾ ಕೇಂದ್ರಕ್ಕೆ ಒಟ್ಟು 17 ಬಾರಿ ಹಾಗೂ ಜಿಲ್ಲೆಗೆ ಒಟ್ಟು 25ಕ್ಕೂ ಹೆಚ್ಚು ಬಾರಿ ಭೇಟಿ ನೀಡಿದ್ದರು. ಪ್ರಸ್ತುತ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ಒಂದು ವರ್ಷದ ಅವಧಿಯಲ್ಲಿ 4ನೇ ಬಾರಿಗೆ ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡುತ್ತಿರುವುದರಿಂದ ಅವರು ಜಿಲ್ಲೆಯ ಜನತೆಯ ಪ್ರಶಂಸೆಗೆ ಪಾತ್ರರಾಗಿದ್ದಾರೆ.

4ನೇ ಬಾರಿ ಜಿಲ್ಲಾ ಕೇಂದ್ರಕ್ಕೆ ಭೇಟಿ: ಸಿದ್ದರಾಮಯ್ಯ 2ನೇ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದ ಮೂರು ತಿಂಗಳಲ್ಲೇ ಚಾಮರಾಜನಗರಕ್ಕೆ ಭೇಟಿ ನೀಡಿ, ಕೆಡಿಪಿ ಸಭೆ ನಡೆಸಿದ್ದರು. ಬಳಿಕ ಎರಡನೇ ಬಾರಿ ಭೇಟಿ ಕೊಟ್ಟು ಚಾಮರಾಜನಗರದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಗ್ಯಾರಂಟಿ ಫಲಾನುಭವಿಗಳ ಸಮಾವೇಶ ನಡೆಸಿದ್ದರು.

ಬಳಿಕ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ನಾಮಪತ್ರ ಸಲ್ಲಿಕೆ ವೇಳೆ ಚಾಮರಾಜನಗರದಲ್ಲಿ ರೋಡ್ ಶೋ ನಡೆಸಿ ಮತದಾರರ ಮನ ಗೆದ್ದಿದ್ದರು. ಈಗ ನಾಲ್ಕನೇ ಬಾರಿ ಭೇಟಿ ನೀಡುತ್ತಿದ್ದಾರೆ.

ಕೃತಜ್ಞತಾ ಸಭೆ: ಜು.10ರಂದು ಸಿಎಂ ಸಿದ್ದರಾಮಯ್ಯ ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಚಾಮರಾಜನಗರ ಲೋಕಸಭಾ ಕ್ಷೇತ್ರದ ಮತದಾರರಿಗೆ ಕೃತಜ್ಞತಾ ಸಲ್ಲಿಕೆ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ.

ಅಂದು ಬೆಳಗ್ಗೆ 11.10ಕ್ಕೆ ಚಾಮರಾಜನಗರಕ್ಕೆ ಸಿಎಂ ಆಗಮಿಸಲಿದ್ದು, ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಚಿವರಾದ ಕೆ.ವೆಂಕಟೇಶ್, ಡಾ.ಹೆಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಜಮೀರ್ ಅಹಮದ್, ಸಂಸದ ಸುನೀಲ್‌ಬೋಸ್, ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ವಿಧಾನ ಸಭಾ ಕ್ಷೇತ್ರಗಳ ಹಾಲಿ ಹಾಗೂ ಮಾಜಿ ಶಾಸಕರು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.



ಚಾಮರಾಜನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿದರು.

ಸಮಾವೇಶದಲ್ಲಿ 30 ಸಾವಿರ ಮಂದಿ ಭಾಗಿ

ಚಾಮರಾಜನಗರ ಲೋಕಸಭಾ ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಲ್ಲಿಸುವ ಸಮಾವೇಶವನ್ನು ಬುಧವಾರ(ಜು.10) ಆಯೋಜಿಸಿದ್ದು, 30 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ ಎಂದು ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸುನೀಲ್ ಬೋಸ್ ಅವರು 1.88 ಲಕ್ಷ ಮತಗಳ ಅಂತರದಲ್ಲಿ ಜಯಗಳಿಸಿದ್ದಾರೆ. ಎಂಟು ವಿಧಾನಸಭಾ ಕ್ಷೇತ್ರಗಳ ಮತದಾರರಿಗೆ ಕೃತಜ್ಞತೆ ಸಲ್ಲಿಸಲು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಹಿಂದೆ ಬ್ಯಾಲೇಟ್ ಪೇಪರ್ ಬಳಸಿ ಚುನಾವಣೆ ನಡೆಸಲಾಗುತ್ತಿತ್ತು. ಆ ವೇಳೆ ಕಡಿಮೆ ಅವಧಿಯಲ್ಲಿ ಚುನಾವಣೆ ಮುಕ್ತಾಯ ಮಾಡಲಾಗುತ್ತಿತ್ತು. ಆದರೆ, ಪ್ರಸ್ತುತ ತಂತ್ರಜ್ಞಾನ ಮುಂದುವರೆದಿದ್ದರೂ 7 ಹಂತಗಳಲ್ಲಿ ಒಂದು ತಿಂಗಳು ಚುನಾವಣೆ ನಡೆಸಲಾಗಿದೆ. ಇದರಿಂದ ಅಭಿವೃದ್ಧಿ ಕಾರ್ಯ ಕುಂಠಿತವಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಆರ್.ಮಹದೇವ್, ಚಿಕ್ಕಮಹದೇವ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ನಾಯಕ, ಕನಿಷ್ಠ ವೇತನಾ ಮಂಡಳಿ ಮಾಜಿ ಅಧ್ಯಕ್ಷ ಉಮೇಶ್ ಇದ್ದರು.

ಬಿಆರ್‌ಟಿ ಅರಣ್ಯದಲ್ಲಿ ಹೆಣ್ಣಾನೆ ಸಾವು



ಯಳಂದೂರು, ಜು.8– ತಾಲೂಕಿನ ಪ್ರಸಿದ್ಧ ಗಿರಿಧಾಮ ಬಿಆರ್‌ಟಿ ಹುಲಿ ರಕ್ಷಿತ ಅರಣ್ಯದಲ್ಲಿ ಹೆಣ್ಣಾನೆಯೊಂದು ಮೃತಪಟ್ಟಿದೆ.

ಬಿಆರ್‌ಟಿ ಹುಲಿ ರಕ್ಷಿತ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಕೆಂಕೆರೆ ಸಮೀಪದಲ್ಲಿ ಆನೆಯ ಕಳೇಬರವನ್ನು ಬಾಳೆಬರೆ ಗಸ್ತಿನಲ್ಲಿದ್ದ ಸಿಬ್ಬಂದಿ ಪತ್ತೆ ಹಚ್ಚಿದ್ದಾರೆ. ಈ ಆನೆಯು 20ರಿಂದ 3 ವರ್ಷದ ಪ್ರಾಯದಾಗಿದ್ದು, ಸ್ವಾಭಾವಿಕವಾಗಿ ಮೃತಪಟ್ಟಿದೆ ಎಂದು ಅರಣ್ಯ ಇಲಾಖೆಯ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕಿ ದೀಪಾ ಜೆ.ಕಂಟ್ರಾಕ್ಟರ್ ಅವರ ಮಾರ್ಗದರ್ಶನದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಂದಗೋಪಾಲ್ ಸಮ್ಮುಖದಲ್ಲಿ ಲ್ಯಾಂಪ್ ಸೊಸೈಟಿಯ ಉಪಾಧ್ಯಕ್ಷ ಸಿ.ಮಾದೇಗೌಡ, ವೈಲ್ಡ್ ಲೈಫ್ ಟ್ರಸ್ಟ್ ಆಫ್ ಕರ್ನಾಟಕದ ಕಾರ್ಯದರ್ಶಿ ಮನೋಜ್‌ಕುಮಾರ್, ವಲಯ ಅರಣ್ಯಾಧಿಕಾರಿಗಳು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಪಶು ವೈದ್ಯಾಧಿಕಾರಿ ಮಿರ್ಜಾ ವಾಸಿಂ ಅವರು ಹೆಣ್ಣು ಆನೆಯ ಕಳೇಬರವನ್ನು ಶನಿವಾರ ರಾತ್ರಿ ಮರಣೋತ್ತರ ಪರೀಕ್ಷೆ ನಡೆಸಿ, ಇದು ಸ್ವಾಭಾವಿಕವಾಗಿ ಮೃತಪಟ್ಟಿದೆ ಎಂದು ಖಾತ್ರಿ ಪಡಿಸಿ ಅಂತ್ಯಕ್ರಿಯೆ ನಡೆಸಿದ್ದಾರೆ.

ಕಾರ್ಯಕರ್ತರಿಗೆ 50 ಬಸ್‌ಗಳ ವ್ಯವಸ್ಥೆ



ಹನೂರಿನ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾಜಿ ಶಾಸಕ ಆರ್.ನರೇಂದ್ರ ಮಾತನಾಡಿದರು.

ಹನೂರು, ಜು.8–ಚಾಮರಾಜನಗರದಲ್ಲಿ ಜು.10ರಂದು ನಡೆಯುವ ಕೃತಜ್ಞತಾ ಸಭೆಯಲ್ಲಿ ಭಾಗವಹಿಸಲು ಪಕ್ಷದ ಕಾರ್ಯಕರ್ತರು ತೆರಳಲು ಹನೂರು ಕ್ಷೇತ್ರದ 34 ಗ್ರಾಮ ಹಾಗೂ ಪಟ್ಟಣ ಪಂಚಾಯಿತಿ ಸೇರಿದಂತೆ ವಿವಿಧ ಗ್ರಾಮಗಳಿಂದ 50 ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ಮಾಜಿ ಶಾಸಕ ಆರ್.ನರೇಂದ್ರ ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಶ್ರಮಿಸಿದ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಕೃತಜ್ಞತಾ ಸಭೆ ಏರ್ಪಡಿಸಲಾಗಿದೆ. ಹನೂರು ಕ್ಷೇತ್ರದಿಂದ ಸುಮಾರು 3 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದರು.

ಕ್ಷೇತ್ರದ ಅಭಿವೃದ್ಧಿಗೆ ಬದ್ಧ: ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜನರಿಗೆ ಸುಳ್ಳು ಭರವಸೆಗಳನ್ನು ನೀಡಿ, ಹಣದ ಆಮಿಷ ಒಡ್ಡಿ ಜಯಗಳಿಸಿರುವ ಶಾಸಕರು, ಕಳೆದ ಒಂದು ವರ್ಷದಿಂದ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಂಡಿಲ್ಲ. ನಾನು ಮುಖ್ಯಮಂತ್ರಿ, ಸಚಿವರ ಜೊತೆ ಸಭೆ ನಡೆಸಿ ಕ್ಷೇತ್ರದಲ್ಲಿ ಬಾಕಿ ಉಳಿದಿರುವ ರಾಮನಗುಡ್ಡ, ಹುಬ್ಬೆಹುಣಸೆ ಜಲಾಶಯಗಳಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಪೂರ್ಣಗೊಳಿಸುವಂತೆ ಮನವಿ ಮಾಡಿದ್ದೇನೆ ಎಂದು ಆರ್.ನರೇಂದ್ರ ಹೇಳಿದರು.

ತಿರುಪತಿಯ ವೆಂಕಟರಮಣಸ್ವಾಮಿ ದೇವರ ದರ್ಶನ ಪಡೆಯಬಹುದು. ಆದರೆ, ಹನೂರು ಕ್ಷೇತ್ರದಲ್ಲಿ ಗೆದ್ದಿರುವ ಶಾಸಕರ ದರ್ಶನ ಸಿಗುತ್ತಿಲ್ಲ ಎಂದು ಶಾಸಕ ಎಂ.ಆರ್.ಮಂಜುನಾಥ್ ಹೆಸರು ಹೇಳದೆ ವಾಗ್ದಾಳಿ ನಡೆಸಿದರು.

ಕಾರ್ಯಕರ್ತರೇ ನನ್ನ ಜೀವಾಳ: ಚುನಾವಣೆಯಲ್ಲಿ ಸೋಲು–ಗೆಲುವು ಸಾಮಾನ್ಯ. ಆದರೆ, ಕ್ಷೇತ್ರದ ಜನರು ನನಗೆ ಕಳೆದ 25 ವರ್ಷಗಳಿಂದ ಕಷ್ಟ–ಸುಖಗಳಲ್ಲಿ ಸದಾ ಬೆನ್ನೆಲುಬಾಗಿದ್ದಾರೆ. ಕಾರ್ಯಕರ್ತರೇ ನನ್ನ ಜೀವಾಳ. ನಾನು ಕ್ಷೇತ್ರದ ಕಾರ್ಯಕರ್ತರ ಹೆಗಲಿಗೆ ಹೆಗಲು ಕೊಟ್ಟು ಅವರ ಕಷ್ಟಗಳಿಗೆ ಸದಾ ಸ್ಪಂದಿಸುತ್ತೇನೆ ಎಂದರು.

ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಈಶ್ವರ್, ಚಾಮುಲ್ ನಿರ್ದೇಶಕ ಶಾಹುಲ್ ಅಹಮದ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸಿದ್ದರಾಜು, ಪಪಂ ಸದಸ್ಯ ಗಿರೀಶ್, ಸೋಮಶೇಖರ್, ಕೆಪಿಸಿಸಿ ಸದಸ್ಯ ಬಸವರಾಜು, ರಾಮಪುರ ಬ್ಲಾಕ್ ಪರಿಶಿಷ್ಟ ಜಾತಿ ಘಟಕದ ಅಧ್ಯಕ್ಷ ರಾಮಲಿಂಗಂ, ಗ್ರಾಪಂ ಅಧ್ಯಕ್ಷ ಇಗ್ನೇಶಿ ಮುತ್ತು, ಸದಸ್ಯರಾದ ಸುರೇಶ್ ರಂಗಸ್ವಾಮಿ, ಮುಖಂಡರಾದ ಮುರುಡೇಶ್ವರ ಸ್ವಾಮಿ, ಮಧುವನಹಳ್ಳಿ ಶಿವಕುಮಾರ್, ರಾಜು, ಮಾದೇಶ್, ಎಲ್.ರಾಜೇಂದ್ರ, ನಟರಾಜು ಇನ್ನಿತರರು ಹಾಜರಿದ್ದರು.

ಶೀಘ್ರ ಕೋಲ್ಡ್ ಸ್ಟೋರೇಜ್ ಘಟಕ ನಿರ್ಮಾಣ



ಗುಂಡ್ಲುಪೇಟೆ ಎಪಿಎಂಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿದರು.

ಗುಂಡ್ಲುಪೇಟೆ, ಜು.8–ಶೀಘ್ರ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ನಬಾರ್ಡ್ ವತಿಯಿಂದ ಕೋಲ್ಡ್ ಸ್ಟೋರೇಜ್ ಘಟಕ ನಿರ್ಮಿಸಲಾಗುವುದು ಎಂದು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ಪಟ್ಟಣದ ಎಪಿಎಂಸಿ ಕಚೇರಿಯಲ್ಲಿ ಸೋಮವಾರ ಆಯೋಜಿಸಿದ್ದ ರೈತರು ಹಾಗೂ ವ್ಯಾಪಾರಿಗಳ ಕುಂದುಕೊರತೆ ಸಭೆಯಲ್ಲಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಮಾರುಕಟ್ಟೆಯಲ್ಲಿ ನಬಾರ್ಡ್ ವತಿಯಿಂದ ರಸ್ತೆ, ಚರಂಡಿ ಹಾಗೂ ಮೂಲ ಸೌಲಭ್ಯ ಕಲ್ಪಿಸಲಾಗುವುದು. ತರಕಾರಿ ವ್ಯಾಪಾರ ಮಾಡುವ ರೈತರು ಮಾರುಕಟ್ಟೆ ಶುಚಿತ್ವಕ್ಕೆ ಸಹಕಾರ ನೀಡಬೇಕು. ರೈತರ ವಿಶ್ರಾಂತಿ ಕೊಠಡಿ ಸೇರಿದಂತೆ ಎಲ್ಲಾ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸಲಾಗುವುದು ಎಂದರು.

ರೈತರ ಸಮಸ್ಯೆಗಳ ಬಗ್ಗೆ ನನಗೆ ಅರಿವಿದೆ. ಹೆಚ್ಚಿನ ಬೆಲೆ ದೊರಕುವ ಬೆಳೆಗಳನ್ನೇ ಎಲ್ಲಾ ರೈತರು ಬೆಳೆಯುವುದರಿಂದ ಮಾರುಕಟ್ಟೆಯಲ್ಲಿ ಬೆಲೆ ಕುಸಿತವಾಗುತ್ತಿದೆ. ಬೆಂಬಲ ಬೆಲೆ ಕೊಡಿಸಲು ಕ್ರಮ ಕೈಗೊಳ್ಳಲಾಗುವುದು. ರೈತರು ಮತ್ತು ವ್ಯಾಪಾರಿಗಳ ನಡುವೆ ಉಂಟಾಗುವ ಭಿನ್ನಾಭಿಪ್ರಾಯ ನಿವಾರಣೆಗೆ ಪ್ರತಿ ತಿಂಗಳು ಸಭೆ ನಡೆಸಲಾಗುವುದು ಎಂದು ಭರವಸೆ ನೀಡಿದರು.

ರೈತ ಮುಖಂಡರಾದ ಕುಂದಕೆರೆ ಸಂಪತ್ತು ಹಾಗೂ ಮಾಡ್ರಹಳ್ಳಿ ಮಹದೇವಪ್ಪ ಮಾತನಾಡಿ, ರೈತರ ಉತ್ಪನ್ನಗಳನ್ನು ಖರೀದಿಸುವ ವ್ಯಾಪಾರಿಗಳು ಶೇ.7ರಷ್ಟು ಕಮಿಷನ್ ಕಡಿತ ಮಾಡಿಕೊಳ್ಳುವ ಜೊತೆಗೆ ವಿಳಂಬವಾಗಿ ಹಣ ಪಾವತಿಸುತ್ತಿದ್ದಾರೆ. ಈ ಬಗ್ಗೆ ಹಲವಾರು ಬಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಉಪಯೋಗವಾಗುತ್ತಿಲ್ಲ. ಆಯಾ ದಿನವೇ ಖರೀದಿಗಳಿಗೆ ಹಣ ಪಾವತಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಸಭೆಯಲ್ಲಿ ಎಪಿಎಂಸಿ ಅಧ್ಯಕ್ಷ ಬಸವ ರಾಜಪ್ಪ, ನಿರ್ದೇಶಕರಾದ ಪಿ.ಮಹದೇವಪ್ಪ, ಮಾಡ್ರಹಳ್ಳಿ ಮಹದೇವಪ್ಪ, ಆರ್.ಎಸ್.ನಾಗರಾಜು, ವಿರೂಪಾಕ್ಷಪ್ಪ, ಶಿವಮಾದಪ್ಪ, ವೆಂಕಟನಾಯಕ, ಬಿ.ನಾಗರಾಜು, ಕಾರ್ಯದರ್ಶಿ ಶ್ರೀಧರ್ ಇತರರು ಇದ್ದರು.

ಜು.12ರಂದು ಹನೂರು ಶಾಸಕರ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಕೆಡಿಪಿ ಸಭೆ



ಮಂಜುನಾಥ್

ಹನೂರು, ಜು.8– ತಾಲೂಕು ಮಟ್ಟದ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆ (ಕೆಡಿಪಿ) ಶಾಸಕ ಎಂ.ಆರ್.ಮಂಜುನಾಥ್ ಅಧ್ಯಕ್ಷತೆಯಲ್ಲಿ ಜು.12ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ನಡೆಯಲಿದೆ ಎಂದು ತಾಲೂಕು ಪಂಚಾಯಿತಿ ಕಾರ್ಯ ನಿರ್ವಾಹಕಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರನೇ ಪುಟದಿಂದ

ರಾಜಕಾರಣಿಗಳು, ಅಧಿಕಾರಿಗಳು ಜನಸೇವಕರು...

ಯಾವ ರೀತಿ ಮಾಡಿದ್ದೀರಿ ಎಂದು ತಿಳಿಯಲು. ಡಿಸಿ, ಸಿಇಒ ಹಾಗೂ ಎಸ್‌ಪಿ ಮೂರೂ ಜನ ಸಮನ್ವಯದಿಂದ ಬೇರೆ ಅಧಿಕಾರಿಗಳನ್ನು ಜೊತೆಯಲ್ಲಿ ಕರೆದೊಯ್ದಾಗ ಉತ್ತಮ ಆಡಳಿತ ನೀಡಲು ಸಾಧ್ಯ. ಕರ್ನಾಟಕ ರಾಜ್ಯ ಆಡಳಿತ ವ್ಯವಸ್ಥೆಯಲ್ಲಿ ಮುಂಚೂಣಿಯಲ್ಲಿದೆ. ನೀವು ಕೆಲಸ ಮಾಡುವ ಜಿಲ್ಲೆಯ ಬಗ್ಗೆ ಮೊದಲೇ ತಿಳಿದುಕೊಂಡಿರಬೇಕು. ಅಲ್ಲಿನ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳ ಬಗ್ಗೆ ಅರಿತುಕೊಂಡಿರಬೇಕು. ಅಲ್ಲಿನ ಶಿಕ್ಷಣ, ತಲಾ ಆದಾಯಗಳ ಬಗ್ಗೆ ಅರಿತಿರಬೇಕು.

ಗೆಜೆಟಿಯರ್, ಎಕಾನಾಮಿಕ್ ಸರ್ವೆಗಳನ್ನು ಕಡ್ಡಾಯವಾಗಿ ಓದಿ, ಉತ್ತಮ ಕೆಲಸ ಮಾಡದೆ ನಾಲ್ವಡಿ ಕೃಷ್ಣರಾಜ ಒಡೆಯರ್, ಗಾಯಕ್ವಾಡ್ ಮಹಾರಾಜ್ ಮೊದಲಾದವರು ಒಳ್ಳೆಯ ಅರಸರೆಂದು ಹೆಸರು ಗಳಿಸಲು ಸಾಧ್ಯವಾಗುತ್ತಿರಲಿಲ್ಲ.

ನಮ್ಮ ಜನರು, ತಮ್ಮ ಮಕ್ಕಳಿಗೆ ನಿಮ್ಮ ಹೆಸರಿಡುವ ರೀತಿಯಲ್ಲಿ ಗುಣಾತ್ಮಕವಾಗಿ, ಪರಿಣಾಮಕಾರಿಯಾಗಿ ಕೆಲಸ ಮಾಡಲು ಅವಕಾಶಗಳಿವೆ. ಅದು ನಿಮ್ಮಿಂದ ಸಾಧ್ಯ ಎಂದರು. ಬಡವರ ಬಗ್ಗೆ ಅನುಕಂಪ ಇರಬೇಕು, ಅಸಮಾನತೆ ನೀಗಿಸಲು ಪ್ರಯತ್ನಿಸಬೇಕು. ನಮ್ಮ ಕಾನೂನುಗಳು ಮತ್ತು ಸಂವಿಧಾನವನ್ನು ಅನುಷ್ಠಾನಗೊಳಿಸಲು ನೀವು ಮುಂದಾಗಬೇಕು.

ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಇಲಾಖಾ ಕಾರ್ಯದರ್ಶಿಗಳು ಜವಾಬ್ದಾರಿಯ ಆತ್ಮಾವಲೋಕನ ಮಾಡಿಕೊಂಡು ಪರಿಸ್ಥಿತಿ ಸುಧಾರಿಸಲು ಪ್ರಯತ್ನಿಸಲೇಬೇಕು.

ಡಿಡಿಪಿಐ, ಡಿಸಿ, ಸಿಇಒಗಳು ಒಟ್ಟಿಗೆ ಕುಳಿತು ಚರ್ಚಿಸಿ ಪರಿಸ್ಥಿತಿ ಸುಧಾರಿಸಬೇಕು. ಜನಸ್ಪಂದನ ಸಭೆಗಳಲ್ಲಿ 15 ರಿಂದ 20 ಸಾವಿರ ಅರ್ಜಿಗಳು ಬರುತ್ತವೆ, ನೀವು ಸ್ಥಳೀಯವಾಗಿ ಕೆಲಸ ನಿರ್ವಹಿಸಿದರೆ ಇಷ್ಟೊಂದು ಮಂದಿ ನನ್ನ ಬಳಿಗೆ ಏಕೆ ಬರುತ್ತಿದ್ದರು. ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಇರುವುದು ಜನಸಂಪರ್ಕ ಸಭೆಗಳಿಗೆ ಬಂದ ಅರ್ಜಿಗಳನ್ನು ಮುಂದಿನ ಅಧಿಕಾರಿಗೆ ಕಳುಹಿಸಿ ಕೊಟ್ಟು ಕೈತೊಳೆದುಕೊಳ್ಳುವುದಕ್ಕಲ್ಲ. ಜನರ ಸಮಸ್ಯೆಗಳ ಅರ್ಜಿಗಳು ಸಕಾರಾತ್ಮಕವಾಗಿ, ಗುಣಾತ್ಮಕವಾಗಿ ವಿಲೇವಾರಿ ಆಗಿಲ್ಲವೆಂದರೆ, ನಿಮ್ಮ ವಿರುದ್ಧ ಕ್ರಮ ಖಚಿತ ಎಂದು ಎಚ್ಚರಿಸಿದರು. ತಹಶೀಲ್ದಾರ್, ಜಿಲ್ಲಾಧಿಕಾರಿಗಳ ಸಮೇತ ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳೂ ಜನರನ್ನು ನೇರ ಭೇಟಿ ಮಾಡುತ್ತಿಲ್ಲ, ಅಧಿಕಾರಿಗಳು ಕರ್ತವ್ಯ ನಿರ್ವಹಿಸುವ ಕಡೆಯೇ ಉಳಿಯಬೇಕು ಎಂಬ ತಮ್ಮ ಸೂಚನೆ ಸರಿಯಾಗಿ ಪಾಲನೆಯಾಗುತ್ತಿಲ್ಲ, ಪಿಡಿಓಗಳು, ಗ್ರಾಮ ಲೆಕ್ಕಿಗರು ಕೆಲಸದ ಜಾಗದಲ್ಲೇ ಉಳಿಯಬೇಕು, ಈ ಬಗ್ಗೆ ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಗಮನಹರಿಸಬೇಕು.

ಕುರಿಗಾಹಿಗಳಿಗೆ ಬಂದೂಕು ಲೈಸೆನ್ಸ್: ಸಂಚಾರಿ ಕುರಿಗಾಹಿಗಳಿಗೆ ಗುರುತಿನ ಚೀಟಿ ನೀಡಬೇಕು, ಕುರಿ–ಮೇಕೆಗಳ ಬಿಡಾರ ಸ್ಥಳಕ್ಕೇ ತೆರಳಿ ಲಸಿಕೆ ಮತ್ತು ಚುಚ್ಚುಮದ್ದುಗಳನ್ನು ನೀಡಬೇಕು, ಸಂಚಾರಿ ಕುರಿಗಾಹಿಗಳಿಗೆ ಬಂದೂಕು ಲೈಸೆನ್ಸ್ ಕೊಡುವುದು ಕಡ್ಡಾಯ. ಕುರಿ ಕಳ್ಳತನ ತಡೆಯಲು ಇದು ಅಗತ್ಯ.

ಮಣ್ಣಿನ ಫಲವತ್ತತೆ ಹೆಚ್ಚಿಸಲು ಅಗತ್ಯ ಕ್ರಮ ಕೈಗೊಳ್ಳುವ ಜೊತೆಗೆ ರೈತರಿಗೆ ಮಣ್ಣಿನ ಆರೋಗ್ಯ ಕಾರ್ಡ್‌ನ್ನು ಕಡ್ಡಾಯವಾಗಿ ನೀಡಬೇಕು, ಪ್ರತೀ ಎರಡು ವರ್ಷಕ್ಕೊಮ್ಮೆ ಮಣ್ಣಿನ ಪರೀಕ್ಷೆ ನಡೆಸಬೇಕು, ಈ ಎಲ್ಲಾ ಕೆಲಸಗಳನ್ನು ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಪರಸ್ಪರ ಸಮನ್ವಯತೆಯಿಂದ ಮಾಡಬೇಕು.

ಡಿಸಿ ಕೋರ್ಟ್‌ಗಳಲ್ಲಿ ಪ್ರಕರಣ ಬಾಕಿ: ತಹಶೀಲ್ದಾರ್ ನ್ಯಾಯಾಲಯಗಳಲ್ಲಿ 8,234 ಪ್ರಕರಣಗಳು ಬಾಕಿ ಇವೆ. ಉಪವಿಭಾಗಾಧಿಕಾರಿಗಳ ಬಳಿ ಹಕ್ಕು ಬದಲಾವಣೆ (ಆರ್‌ಆರ್‌ಟಿ) ಪ್ರಕರಣಗಳು 37,587 ಬಾಕಿ ಇವೆ ಇವುಗಳಲ್ಲಿ 5 ವರ್ಷಕ್ಕೂ ಮೇಲ್ಪಟ್ಟವು 7,522 ಪ್ರಕರಣಗಳಿವೆ. ಜಿಲ್ಲಾಧಿಕಾರಿಗಳ ಬಳಿ 10,838 ಪ್ರಕರಣಗಳು ಬಾಕಿ ಇವೆ, 5 ವರ್ಷಕ್ಕೂ ಮೇಲ್ಪಟ್ಟವು 4,207 ಪ್ರಕರಣಗಳಿವೆ, ಜಿಲ್ಲಾಧಿಕಾರಿಗಳೇ ಬಾಕಿ ಉಳಿಸಿಕೊಂಡರೆ, ಎಸಿ ಮತ್ತು ತಹಶೀಲ್ದಾರ್‌ಗಳಿಗೆ ಏನು ಸೂಚನೆ ಕೊಡುತ್ತೀರಿ.

ಕೆಲವು ಜಿಲ್ಲಾಧಿಕಾರಿಗಳ ಬಳಿ ಒಂದೂ ಪ್ರಕರಣಗಳೂ ಬಾಕಿ ಇಲ್ಲ, ಉಳಿದ ಜಿಲ್ಲಾಧಿಕಾರಿಗಳಿಂದ ಇದು ಏಕೆ ಸಾಧ್ಯವಾಗಿಲ್ಲ. ಜನ ಡಿಸಿ, ಎಸಿ, ತಹಶೀಲ್ದಾರ್ ಕಚೇರಿಗಳಿಗೆ ಅಲೆದರೂ ಅಧಿಕಾರಿಗಳು ಸಿಗದೇ ಇದ್ದರೆ, ಏನು ಮಾಡಬೇಕು ಎಂದರು.

14 ಸಕ್ರಿಯ ಡೆಂಗ್ಯೂ ಪ್ರಕರಣಗಳು

ಲಲಿತಾ ಸಾವು ಸಂಬಂಧ ಡೆತ್ ಆಡಿಟಿಂಗ್: ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ ಮಹಿಳಾ ಸಿಬ್ಬಂದಿ ಲಲಿತಾ (32) ಅವರ ಸಾವಿಗೆ ಡೆಂಗ್ಯೂ ಕಾರಣವೆಂಬ ಶಂಕೆ ವ್ಯಕ್ತವಾಗಿರುವ ಸಂಬಂಧ ಪ್ರತಿಕ್ರಿಯಿಸಿದ ಅವರು, ಬೇರೆ ಬೇರೆ ಅನಾರೋಗ್ಯ ಇರುವ ಹಿನ್ನೆಲೆಯಲ್ಲಿ ಲಲಿತಾ ಅವರ ಸಾವಿನ ನಿರ್ದಿಷ್ಟ ಕಾರಣವನ್ನು ಪರಿಶೀಲಿಸಬೇಕಿದೆ. ಹಾಗಾಗಿ ಡೆತ್ ಆಡಿಟಿಂಗ್ ನಂತರ ಅವರ ಸಾವಿಗೆ ಕಾರಣವಾದ ಅನಾರೋಗ್ಯ ಅಂಶವನ್ನು ತಿಳಿಸಲಾಗುವುದು ಎಂದು ಹೇಳಿದರು.

ಡೆತ್ ಆಡಿಟಿಂಗ್‌ಗಾಗಿ ಮೈಸೂರು ವೈದ್ಯಕೀಯ ಕಾಲೇಜಿನ ವೈದ್ಯರು ಒಳಗೊಂಡ ಸಮಿತಿ ರಚನೆ ಮಾಡಲಾಗಿದೆ. ಡೆತ್ ಆಡಿಟಿಂಗ್ ನಂತರ ಯಾವುದೇ ಸಾವಿನ ಅನಾರೋಗ್ಯ ಕಾರಣ ಘೋಷಣೆ ಮಾಡಬೇಕೆಂದು ಸರ್ಕಾರದ ಈಗಿನ ಮಾರ್ಗಸೂಚಿ ಇದೆ. ಗುರುವಾರ ಡೆತ್ ಆಡಿಟಿಂಗ್ ಮಾಡಿಸಿ ನಂತರ ಅವರ ಸಾವಿನ ಅನಾರೋಗ್ಯ ಕಾರಣ ಪ್ರಕಟಿಸಲಾಗುವುದು ಎಂದು ತಿಳಿಸಿದರು.

ಲಲಿತಾ ಅವರ ರಕ್ತ ಮಾದರಿ ಪರೀಕ್ಷೆಯ ವರದಿ ಈಗಾಗಲೇ ಬಂದಿರಬೇಕಲ್ಲವೇ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಐಜಿಎಂ'ನಲ್ಲಿ ಎಲಿಸಾ ಪಾಸಿಟಿವ್ ಇದ್ದರೆ ಮಾತ್ರ ನಾವು ಡೆಂಗ್ಯೂ ಎಂದು ಘೋಷಣೆ ಮಾಡುತ್ತೇವೆ. ಈ ಪ್ರಕರಣದಲ್ಲಿ ಐಜಿಎಂ ಎಲಿಸಾ ಪಾಸಿಟಿವ್ ಇಲ್ಲ. ಅವರು ಸಾವನ್ನಪ್ಪಿದ ದಿನ ಪ್ಲೇಟ್‌ಲೇಟ್ ಕೌಂಟ್ 1 ಲಕ್ಷದ 61 ಸಾವಿರ ಇದೆ. ಅಂದರೆ ಇದರಲ್ಲಿ ಯಾವುದೇ ಸಮಸ್ಯೆ ಉಂಟಾಗಿರಲಿಲ್ಲ ಎಂದು ಹೇಳಿದರು.

ಡೆಂಗ್ಯೂ ಪ್ರಕರಣಗಳ ಮಾಹಿತಿ: ಖಾಸಗಿ ಕ್ಲಿನಿಕ್ ಹಾಗೂ ಆಸ್ಪತ್ರೆಗೆ ಭೇಟಿ ನೀಡುವ ಸಾರ್ವಜನಿಕರಿಗೆ ಡೆಂಗ್ಯೂ ಸಂಬಂಧ ಪರೀಕ್ಷೆ ಮಾಡಿಸಲು ವೈದ್ಯರು ಸೂಚಿಸಿದರೆ ಅವರು, ಖಾಸಗಿ ಡಯಾಗ್ನೊಸ್ಟಿಕ್ ಕೇಂದ್ರಗಳಿಗೆ ಹೋಗುವುದಿದೆ. ಇಂತಹ ಸನ್ನಿವೇಶದಲ್ಲಿ ಡೆಂಗ್ಯೂ ಪಾಸಿಟಿವ್ ಬಂದರೆ ಆರೋಗ್ಯ ಇಲಾಖೆಗೆ ಮಾಹಿತಿ ಯಾವ ರೀತಿ ದೊರೆಯಲಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಖಾಸಗಿ ವೈದ್ಯರ ಮಹಾನ್ (ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಮ್ಸ್, ಕ್ಲಿನಿಕ್ ಹಾಗೂ ಡಯಾಗ್ನೋಸ್ಟಿಕ್ ಕೇಂದ್ರಗಳ ಸಂಘಟನೆ) ಸಂಸ್ಥೆಯೊಂದಿಗೆ ಸಭೆ ನಡೆಸಿ ಡೆಂಗ್ಯೂ ಪಾಸಿಟಿವ್ ಪ್ರಕರಣಗಳನ್ನು ಇಲಾಖೆಗೆ ವರದಿ ಮಾಡುವಂತೆ ಸುತ್ತೋಲೆ ನೀಡಲಾಗಿದೆ. ಅದರಂತೆ ಇ–ಮೇಲ್ ಮೂಲಕ ಇಲಾಖೆಗೆ ಡೆಂಗ್ಯೂ ಪಾಸಿಟಿವ್ ಪ್ರಕರಣಗಳ ಸಂಬಂಧ ಮಾಹಿತಿ ಪಡೆಯಲಾಗುತ್ತಿದೆ. ಯಾವುದೇ ಡೆಂಗ್ಯೂ ಪ್ರಕರಣಗಳ ಮಾಹಿತಿ ತಪ್ಪಿ ಹೋಗದಂತೆ ಕಲೆ ಹಾಕಲಾಗುತ್ತಿದೆ ಎಂದು ವಿವರಿಸಿದರು.

ಅನರ್ಹ ಬಿಪಿಎಲ್ ಕಾರ್ಡ್‌ಗಳ ಅರ್ಹರಿಗೆ ಕಲ್ಪಿಸಿ!

ಕುಟುಂಬಗಳಿಗೆ ಬಿಪಿಎಲ್ ಕಾರ್ಡ್ ನೀಡಿದ್ದೇವೆ, ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಿ. ಹೊಸ ಪಡಿತರ ಚೀಟಿ ನೀಡುವುದೂ ಸೇರಿದಂತೆ ಸಮಸ್ಯೆಗಳ ಪರಿಹಾರಕ್ಕಾಗಿ ನಿಮ್ಮ ಕಚೇರಿಗೆ ಬರುವ ಜನರನ್ನು ಅನಗತ್ಯವಾಗಿ ಅಲೆದಾಡಿಸಬೇಡಿ. ಅವರ ದೂರುಗಳನ್ನು ಆಲಿಸಿ ಸ್ಥಳದಲ್ಲೇ ಪರಿಹಾರ ಕೊಡಿ ಎಂದು ಆದೇಶ ಮಾಡಿದರು.

ಬರ ನಿರ್ವಹಣೆ ಉತ್ತಮ: ರಾಜ್ಯದಲ್ಲಿ ಈ ಬಾರಿ ಬರ ನಿರ್ವಹಣೆಯನ್ನು ಉತ್ತಮವಾಗಿ ಮಾಡಿದ್ದೇವೆ. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಸಮಸ್ಯಾತ್ಮಕ ಗ್ರಾಮಗಳನ್ನು ಮೊದಲೇ ಗುರುತಿಸಿ ಪರ್ಯಾಯ ವ್ಯವಸ್ಥೆ ಮಾಡಿದ ಕಾರಣ ಎಲ್ಲೂ ಹೆಚ್ಚು ತೊಂದರೆಯಾಗಿಲ್ಲ. ಬರ ನಿರ್ವಹಣೆಗೆ 85 ಕೋಟಿ ರೂ. ವೆಚ್ಚವಾಗಿದ್ದು, ಪಾರದರ್ಶಕವಾಗಿ ಮಾಡಲಾಗಿದೆ. 783 ಕೋಟಿ ರೂ. ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಲಭ್ಯವಿದೆ.

ಅತಿವೃಷ್ಟಿ ಎಚ್ಚರಿಕಾ ಕ್ರಮ: ರಾಜ್ಯದಲ್ಲಿ ಪ್ರಸ್ತುತ ಮುಂಗಾರು ಅವಧಿಯಲ್ಲಿ ಇದುವರೆಗೆ ಶೇ.7ರಷ್ಟು ಹೆಚ್ಚು ಮಳೆಯಾಗಿದೆ, ಈ ವರ್ಷ ಮಳೆ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಅತಿವೃಷ್ಟಿಯಿಂದ ಸಮಸ್ಯೆಯಾಗುವ ಗ್ರಾಮಗಳನ್ನು ಗುರುತಿಸಲಾಗಿದೆ, 225 ಅಂತಹ ಜಲಗ್ರಾಮಗಳನ್ನು, 1,247 ಗ್ರಾಮ ಪಂಚಾಯತ್‌ನಲ್ಲಿ ಗುರುತಿಸಲಾಗಿದೆ.

ಪ್ರತಿಯೊಂದು ಗ್ರಾಮ ಪಂಚಾಯತ್‌ನಲ್ಲಿ ಟಾಸ್ಕ್ ಫೋರ್ಸ್ ರಚನೆ, ಕಂದಾಯ ಇಲಾಖೆ, ಪಂಚಾಯತ್, ಪೊಲೀಸ್, ಅಗ್ನಿಶಾಮಕ, ಆರೋಗ್ಯ ಸೇರಿದಂತೆ ತಾಲೂಕಿಗೆ ಒಬ್ಬರಂತೆ ನೋಡಲ್ ಅಧಿಕಾರಿ ನೇಮಕ, ಎಲ್ಲಾ ಕಡೆ ಅಣಕು ಪ್ರದರ್ಶನ ಮಾಡಲಾಗುತ್ತಿದೆ. ಎಲ್ಲಾ ಸಲಕರಣೆ ಲಭ್ಯವಿರುವಂತೆ ಸೂಚನೆ ನೀಡಲಾಯಿತು. ಬೆಳೆ ಹಾನಿ, ಮನೆ ಹಾನಿಗೆ ಪರಿಹಾರ ನೀಡಲು ಸೂಚನೆ ನೀಡಲಾಗಿದೆ, ಜಿಲ್ಲಾಡಳಿತ ಮುಂಜಾಗರೂಕತೆ ವಹಿಸಲು ಸೂಚನೆ ನೀಡಲಾಗಿದೆ, ಪ್ರಾಣ ಹಾನಿ ತಪ್ಪಿಸುವುದು ಆದ್ಯತೆಯಾಗಬೇಕು.

ರಾಜ್ಯದ 27 ಜಿಲ್ಲೆಗಳ 177 ತಾಲೂಕುಗಳು, 1,247 ಗ್ರಾಮ ಪಂಚಾಯತ್‌ಗಳಲ್ಲಿ ಅತಿವೃಷ್ಟಿಗೆ ತುತ್ತಾಗುವುದನ್ನು ಗುರುತಿಸಲಾಗಿದ್ದು, ಪ್ರತಿ ಕಡೆ ಟಾಸ್ಕ್ ಫೋರ್ಸ್ ರಚಿಸಬೇಕು, 20,38,334 ಜನರು ಪದೇ ಪದೆ ಪ್ರವಾಹಕ್ಕೆ ತುತ್ತಾಗುವುದನ್ನು ಗುರುತಿಸಲಾಗಿದೆ. ಅಂತಹ ಜನರನ್ನು ಬೇರೆ ಕಡೆಗೆ ಸ್ಥಳಾಂತರಿಸಿ ಮನೆ ಒದಗಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕು. 2,225 ಗ್ರಾಮಗಳು 2,242 ಕಾಳಜಿ ಕೇಂದ್ರಗಳನ್ನು ಗುರುತಿಸಲಾಗಿದೆ. ಉತ್ತಮವಾಗಿ ಮಳೆಯಾಗಿರುವ ಕಾರಣ ಎಲ್ಲಾ ಜಲಾಶಯಗಳಲ್ಲಿ ಒಟ್ಟು 293 ಟಿಎಂಸಿ ನೀರು ಸಂಗ್ರಹವಿದೆ.

ಈ ಬಾರಿ ಪೂರ್ವ ಮುಂಗಾರಿನಲ್ಲಿ 3,714 ಮನೆಗಳಿಗೆ ಹಾನಿ ಉಂಟಾಗಿದೆ. ಇದಕ್ಕೆ ಸೂಕ್ತ ಪರಿಹಾರವನ್ನು ತಕ್ಷಣ ಒದಗಿಸಬೇಕು. ಹವಾಮಾನ ಇಲಾಖೆಯೊಂದಿಗೆ ನಿಕಟ ಸಂಪರ್ಕದಲ್ಲಿದ್ದು, ಪರಿಸ್ಥಿತಿಯನ್ನು ನಿಭಾಯಿಸಬೇಕು ಎಂದು ಸೂಚಿಸಿದರು. ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಪರಿಹಾರ ಒದಗಿಸುವಲ್ಲಿ ವಿಳಂಬ ಸಲ್ಲದು, ಕಾನೂನು ಪ್ರಕಾರ ಪರಿಶೀಲಿಸಿ 1003 ಅರ್ಹ ಪ್ರಕರಣಗಳಲ್ಲಿ 994 ರೈತರ ಕುಟುಂಬಕ್ಕೆ ಪರಿಹಾರ ಒದಗಿಸಲಾಗಿದೆ. ರೈತರ ಸಭೆ ನಡೆಸಿ ಜಾಗೃತಿ, ಆತ್ಮವಿಶ್ವಾಸ ಮೂಡಿಸುವ ಕಾರ್ಯ ಮಾಡಬೇಕು ಎಂದು ನಿರ್ದೇಶನ ನೀಡಿದರು. ಜಮೀನು ಮಾರ್ಗಸೂಚಿ ದರಕ್ಕಿಂತ ಕಡಿಮೆ ಬೆಲೆಗೆ ನೋಂದಣಿ ಆಗುತ್ತಿರುವ ಪ್ರಕರಣಗಳು ಕಂಡು ಬಂದಿದ್ದು, ಬಾಕಿ ರಾಜಸ್ವ ವಸೂಲು ಮಾಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ, ಕಳೆದ 30 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಈ ಪ್ರಕ್ರಿಯೆ ಕೈಗೆತ್ತಿಕೊಳ್ಳಲಾಗಿದೆ.

ಕಾನೂನು ವ್ಯವಸ್ಥೆಯಲ್ಲಿ ಪಾರದರ್ಶಕತೆ, ತ್ವರಿತ ನ್ಯಾಯ ನಿರ್ಣಯಕ್ಕೆ ಹೊಸ ಕ್ರಿಮಿನಲ್ ಕಾನೂನು ಜಾರಿ

●ಎಡಿಜಿಪಿ ಅಲೋಕ್ ಕುಮಾರ್ ಅಭಿಮತ ●ಹೊಸ ಕಾನೂನು ಕುರಿತು ವಿಶೇಷ ಉಪನ್ಯಾಸ

ಮೈಸೂರು, ಜು.8(ಎಂಕೆ)– ಕಾನೂನು ವ್ಯವಸ್ಥೆಯಲ್ಲಿ ಇನ್ನಷ್ಟು ಪಾರದರ್ಶಕತೆ, ಜವಾಬ್ದಾರಿಯುತ ಹಾಗೂ ತ್ವರಿತ ನ್ಯಾಯ ಒದಗಿಸುವ ಮುಖ್ಯ ಉದ್ದೇಶದಿಂದ ಹೊಸ ಕ್ರಿಮಿನಲ್ ಕಾನೂನುಗಳನ್ನು ಅಳವಡಿಸಲಾಗಿದೆ ಎಂದು ಪೊಲೀಸ್ ತರಬೇತಿ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ(ಎಡಿಜಿಪಿ) ಅಲೋಕ್ ಕುಮಾರ್ ತಿಳಿಸಿದರು.



ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನಲ್ಲಿ 'ಹೊಸ ಕ್ರಿಮಿನಲ್ ಕಾನೂನುಗಳ' ಕುರಿತು ಪೊಲೀಸ್ ತರಬೇತಿ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ವಿಶೇಷ ಉಪನ್ಯಾಸ ನೀಡಿದರು. ಪೊಲೀಸ್ ಅಧಿಕಾರಿಗಳು, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳನ್ನು ಕಾಣಬಹುದು.

ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನಲ್ಲಿ ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು ಸಹಯೋಗದೊಂದಿಗೆ 'ಹೊಸ ಕ್ರಿಮಿನಲ್ ಕಾನೂನುಗಳಾದ ಭಾರತೀಯ ನ್ಯಾಯ ಸಂಹಿತಾ(BNS), ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ(BNSS) ಮತ್ತು ಭಾರತೀಯ ಸಾಕ್ಷಿ ಅಧಿನಿಯಮ್(BSA)' ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಮೂರು ಹೊಸ ಕ್ರಿಮಿನಲ್ ಕಾನೂನುಗಳ ಅಳವಡಿಕೆಯಿಂದ ತನಿಖಾ ಸಂದರ್ಭದಲ್ಲಿ ತಂತ್ರಜ್ಞಾನದ ಬಳಕೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದರು.

ಭಾರತವನ್ನು ಸೂಪರ್ ಪವರ್ ರಾಷ್ಟ್ರವನ್ನಾಗಿಸುವ ನಿಟ್ಟಿನಲ್ಲಿಯೂ ಹೊಸ ಕ್ರಿಮಿನಲ್ ಕಾನೂನುಗಳು ಸಹಕಾರಿಯಾಗಿದ್ದು, ಬ್ರಿಟಿಷರ ಕಾಲದ ಭಾರತೀಯ ದಂಡ ಸಂಹಿತೆ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯಿದೆಗಳನ್ನು ಬದಲಿಸಲಾಗಿದೆ. ಈಗಾಗಲೇ ಹೊಸ ಕ್ರಿಮಿನಲ್ ಕಾನೂನುಗಳು ಜಾರಿಯಲ್ಲಿದ್ದು, ಎಫ್‌ಐಆರ್‌ಗಳನ್ನು ಐಪಿಸಿ ಬದಲು ಬಿಎನ್‌ಎಸ್ ಅಡಿಯಲ್ಲಿ ದಾಖಲಿಸಲಾಗುತ್ತದೆ. ಹೊಸ ಕ್ರಿಮಿನಲ್ ಕಾನೂನುಗಳು ಭಾರತದ ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ಪರಿಣಾಮಕಾರಿ ಬದಲಾವಣೆಗಳನ್ನು ತರಲಿವೆ ಎಂದರು.

ನ್ಯಾಯ ಪಡೆಯಲು ವರ್ಷಾನುಗಟ್ಟಲೇ ಅಲೆದಾಡುವುದನ್ನು ನೋಡಿದ್ದೇವೆ. 10–20 ವರ್ಷವಾದರೂ ನ್ಯಾಯ ದೊರೆಯುತ್ತಿಲ್ಲ ಎಂಬುವವರ ಮಾತನ್ನು ಕೇಳಿದ್ದೇವೆ. ಹಲವು ಪ್ರಕರಣಗಳು ಮುಕ್ತಾಯವಾಗುವ ಮುನ್ನವೇ ದೂರುದಾರರೇ ನಿಧನರಾದ ಸನ್ನಿವೇಶಗಳನ್ನು ಗಮನಿಸಿದ್ದೇವೆ. ಆದರೆ ಇನ್ನೂ ಮುಂದೆ ಅಲೆದಾಟ ಕಡಿಮೆಯಾಗಲಿದೆ. ಭಾರತೀಯ ನಾಗರಿಕ ಸುರಕ್ಷಾ ಸಂಹಿತಾದಲ್ಲಿ ನಿಗದಿತ ಸಮಯದಲ್ಲಿ ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕು ಎಂದು ತಿಳಿಸಲಾಗಿದೆ. ಚಾರ್ಜ್‌ಶೀಟ್ ಅನ್ನು 90 ದಿನಗಳಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಬೇಕಿತ್ತು. ಅದನ್ನು 60 ದಿನಗಳಿಗೆ ಸೀಮಿತಗೊಳಿಸಲಾಗಿದೆ. ವಿಚಾರಣೆಗೊಂಡ 45 ದಿನಗಳೊಳಗೆ ತೀರ್ಪು ನೀಡುವುದಲ್ಲದೆ, ಪ್ರಕರಣದ ತನಿಖೆ ಯಾವ ಹಂತದಲ್ಲಿದೆ ಎಂಬುದನ್ನು ದೂರುದಾರರಿಗೆ ತಿಳಿಸಬೇಕಿದೆ ಎಂದು ಮಾಹಿತಿ ನೀಡಿದರು.

ಹೊಸ ಕಾನೂನುಗಳು ಆಧುನಿಕ ನ್ಯಾಯ ವ್ಯವಸ್ಥೆಯನ್ನು ತಂದಿವೆ. ಶೂನ್ಯ ಎಫ್‌ಐಆರ್, ಆನ್‌ಲೈನ್ ಮೂಲಕ ದೂರುಗಳ ನೋಂದಣಿ, ಎಸ್‌ಎಂಎಸ್‌ನಂತಹ ಎಲೆಕ್ಟ್ರಾನಿಕ್ ಮೋಡ್‌ಗಳ ಮೂಲಕ ಸಮನ್ಸ್ ಮತ್ತು ಎಲ್ಲಾ ಘೋರ ಅಪರಾಧಗಳಿಗೆ ಅಪರಾಧ ದೃಶ್ಯಗಳ ಕಡ್ಡಾಯ ವೀಡಿಯೋಗ್ರಫಿಯಂತಹ ನಿಬಂಧನೆಗಳನ್ನು ಹೊಸ ಕ್ರಿಮಿನಲ್ ಕಾನೂನುಗಳು ಒಳಗೊಂಡಿವೆ. ಶೂನ್ಯ ಎಫ್‌ಐಆರ್ ಪರಿಕಲ್ಪನೆಯಲ್ಲಿ ಸಂಜ್ಞೇಯ ಅಪರಾಧಗಳ ಸಂಬಂಧ ಮೊದಲು ದೂರು ದಾಖಲಿಸಿಕೊಂಡು ವಿಚಾರಣೆ ನಡೆಸಬೇಕು. ಪ್ರಕರಣ ಗಂಭೀರವಾದದ್ದು ಎಂದು ಕಂಡು ಬಂದರೆ ಎಫ್‌ಐಆರ್ ದಾಖಲಿಸಬೇಕಿದೆ ಎಂದು ತಿಳಿಸಿದರು.

ಯಾವುದೇ ಮಗುವನ್ನು ಖರೀದಿಸುವುದು ಮತ್ತು ಮಾರಾಟ ಮಾಡುವುದು ಘೋರ ಅಪರಾಧವಾಗಿದೆ. ಮಂಡ್ಯದಲ್ಲಿ ನಡೆದ ಭ್ರೂಣ ಹತ್ಯೆಯೂ ಕೂಡ ಘೋರ ಅಪರಾಧ. ಹಾಗೆಯೇ ಅಪ್ರಾಪ್ತ ವಯಸ್ಕರ ಸಾಮೂಹಿಕ ಅತ್ಯಾಚಾರಕ್ಕೆ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಗೆ ಅವಕಾಶವಿದೆ. ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳ ಕುರಿತು ಹೊಸ ಅಧ್ಯಾಯವನ್ನು ಸೇರಿಸಲಾಗಿದೆ. ಅತ್ಯಾಚಾರ ಸಂತ್ರಸ್ತರ ಹೇಳಿಕೆಯನ್ನು ಮಹಿಳಾ ಪೊಲೀಸ್ ಅಧಿಕಾರಿಯೊಬ್ಬರು ಆಕೆಯ ಪೋಷಕರು ಅಥವಾ ಸಂಬಂಧಿಕರ ಸಮ್ಮುಖದಲ್ಲಿ ದಾಖಲಿಸಿಕೊಳ್ಳುತ್ತಾರೆ ಮತ್ತು ವೈದ್ಯಕೀಯ ವರದಿಗಳು ಏಳು ದಿನಗಳಲ್ಲಿ ಬರಬೇಕು. ಸಂತ್ರಸ್ತರಿಗೆ ಹೆಚ್ಚಿನ ರಕ್ಷಣೆ ಒದಗಿಸಲು ಮತ್ತು ಅತ್ಯಾಚಾರದ ಅಪರಾಧಕ್ಕೆ ಸಂಬಂಧಿಸಿದ ತನಿಖೆಯಲ್ಲಿ ಪಾರದರ್ಶಕತೆಯನ್ನು ಜಾರಿಗೊಳಿಸಲು, ಹೇಳಿಕೆಯನ್ನು ಆಡಿಯೋ–ವಿಡಿಯೋ ವಿಧಾನಗಳ ಮೂಲಕ ದಾಖಲಿಸಬೇಕಿದೆ ಎಂದು ವಿವರಿಸಿದರು.

ಮೂರು ದಿನದೊಳಗೆ(72 ಗಂಟೆ) ಠಾಣೆಗೆ ಹಾಜರಾಗಬೇಕು: ಆನ್‌ಲೈನ್ ಮೂಲಕ ದೂರು ದಾಖಲಿಸಿದ ವ್ಯಕ್ತಿ ಮೂರು ದಿನಗಳು ಅಥವಾ 72 ಗಂಟೆಯೊಳಗೆ ಠಾಣೆಗೆ ಹಾಜರಾಗಿ ಹೇಳಿಕೆ ನೀಡಬೇಕು. ಇಲ್ಲವಾದರೆ ದೂರನ್ನು ಪರಿಗಣಿಸುವುದಿಲ್ಲ. ಸುಳ್ಳು ದೂರುಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಹಾಗೆಯೇ ಮದುವೆಯಾಗುವುದಾಗಿ ವಂಚಿಸಿ, ಆರೋಪ ಸಾಬೀತಾದರೆ ಶಿಕ್ಷೆಯ ಪ್ರಮಾಣ 10 ವರ್ಷಗಳವರೆಗೆ ಇರಬಹುದು. ಸೈಬರ್ ಕ್ರೈಂಗಳಲ್ಲಿ ವಂಚನೆಗೊಳಗಾದರೆ ಮೊದಲು 1930 ಟೋಲ್ ಫ್ರೀ ನಂಬರ್‌ಗೆ ಕರೆ ದೂರು ನೀಡಿದ ನಂತರ ಠಾಣೆಗೆ ತೆರಳಿ ಮಾಹಿತಿ ನೀಡಿ. ಇದರಿಂದ ಕಳೆದುಕೊಂಡಿರುವ ಹಣ, ವಂಚಕರ ಕೈ ಸೇರದಂತೆ ತಡೆಯಬಹುದು ಎಂದು ತಿಳಿಸಿದರು.

ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಾಂಶುಪಾಲ ಡಾ.ಬಸವನ ಗೌಡಪ್ಪ ಮುಖ್ಯ ಅತಿಥಿಯಾಗಿದ್ದರು. ಮೈಸೂರು ದಕ್ಷಿಣ ವಲಯ ಡಿಐಜಿಪಿ ಡಾ.ಬೋರಲಿಂಗಯ್ಯ, ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ), ಮೈಸೂರು ನಿರ್ದೇಶಕಿ ಎಂ.ಎಸ್.ಗೀತಾ ಪ್ರಸನ್ನ, ಕಲಬುರಗಿ ಪೊಲೀಸ್ ಅಕಾಡೆಮಿ ನಿರ್ದೇಶಕ ಕಿಶೋರ್ ಬಾಬು, ಕೆಪಿಎ ಮೈಸೂರು ಉಪ ನಿರ್ದೇಶಕ ಎಸ್.ಎಲ್.ಚೆನ್ನಬಸವಣ್ಣ, ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಆಡಳಿತಾಧಿಕಾರಿ ಎಸ್. ಆರ್.ಸತೀಶ್‌ಚಂದ್ರ, ಉಪ ಪ್ರಾಂಶುಪಾಲರಾದ ಡಾ.ಎಂ.ಎನ್.ಸುಮ, ಡಾ.ಪ್ರವೀಣ್ ಕುಲಕರ್ಣಿ, ವಿಧಿವಿಜ್ಞಾನ ಔಷಧ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಹೆಚ್. ವಿ.ಚಂದ್ರಕಾಂತ್ ಮತ್ತಿತರರು ಉಪಸ್ಥಿತರಿದ್ದರು. ನಂತರ ಕೆಪಿಎ ಮೈಸೂರಿನ ಕಾನೂನು ಸಲಹೆಗಾರ ಡಾ.ಗುರುಸ್ವಾಮಿ ಹೊಸ ಕ್ರಿಮಿನಲ್ ಕಾನೂನುಗಳ ಕುರಿತು ಹೆಚ್ಚಿನ ವಿವರ ನೀಡಿದರು.

> ಭಾರತದ ಯುವ ಪೀಳಿಗೆಯ ಭವಿಷ್ಯದ ದೃಷ್ಟಿಯಿಂದ ಮೂರು ಹೊಸ ಕ್ರಿಮಿನಲ್ ಕಾನೂನುಗಳ ಅಳವಡಿಕೆ ಅವಶ್ಯವಾಗಿವೆ. ಸಕಾಲದಲ್ಲಿ ನೊಂದವರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕಾನೂನು ವ್ಯವಸ್ಥೆ ಮಾರ್ಪಾಡಾಗಿದೆ. ಆಧುನಿಕತೆಗೆ ಅನುಗುಣವಾಗಿ ತಂತ್ರಜ್ಞಾನಗಳಿಗೆ ಆದ್ಯತೆ ನೀಡುವ ಮೂಲಕ ಪಾರದರ್ಶಕತೆ ಕಾಯ್ದುಕೊಳ್ಳಲು ಹಾಗೂ ತನಿಖೆಯ ಮಾಹಿತಿಯನ್ನು ದೂರುದಾರರು ಪಡೆದುಕೊಳ್ಳಲು ಹೊಸ ಕಾನೂನುಗಳಲ್ಲಿ ಅವಕಾಶ ನೀಡಲಾಗಿದೆ.
>
> - **ಅಲೋಕ್ ಕುಮಾರ್**, ಎಡಿಜಿಪಿ, ಪೊಲೀಸ್ ತರಬೇತಿ ವಿಭಾಗ

ನಿಮ್ಮನ್ನು ನೀವು ರಕ್ಷಿಸಿಕೊಳ್ಳಲು ಹೆಲ್ಮೆಟ್ ಧರಿಸಿ...

ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ. ಅದು ನಿಮಗೆ ರಕ್ಷಣೆ ನೀಡಲಿದೆ. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ದಿನದ 24 ಗಂಟೆಯೂ ಪೊಲೀಸರು ಎಚ್ಚರ ತಪ್ಪಿದರೂ ಕ್ಯಾಮರಾಗಳು ವಾಚ್ ಮಾಡುತ್ತಿರುತ್ತವೆ. ಹಾಗೆಯೇ ನಗರದೆಲ್ಲೆಡೆ ಕ್ಯಾಮರಾಗಳಿದ್ದು, ಅಪಘಾತದಲ್ಲಿ ಪ್ರಾಣಾಪಾಯದಿಂದ ಪಾರಾಗಲು ಹೆಲ್ಮೆಟ್ ಅವಶ್ಯ. ರ್‍ಯಾಷ್ ಅಂಡ್ ಡೇಂಜರಸ್ ಡ್ರೈವಿಂಗ್‌ಗೆ ದಂಡದ ಜೊತೆಗೆ ಬಂಧನವಾಗುವ ಸಾಧ್ಯತೆಯೂ ಇರಲಿದೆ ಎಂದು ಎಡಿಜಿಪಿ ಅಲೋಕ್ ಕುಮಾರ್ ಎಚ್ಚರಿಸಿದರು.

ಪ್ರಖರ ಬೆಳಕಿನ ಎಲ್‌ಇಡಿ ದೀಪ ಅಳವಡಿಕೆ ವಿರುದ್ಧ ಕಾರ್ಯಾಚರಣೆ

ಮೈಸೂರಿನ 381, ಜಿಲ್ಲೆಯಲ್ಲಿ 91 ವಾಹನ ಚಾಲಕರಿಗೆ ದಂಡ

ಮೈಸೂರು, ಜು.8(ಬಿಎಲ್‌ಯು)– ಹೆಚ್ಚು ಬೆಳಕು ಹೊರ ಹಾಕುವ ಎಲ್‌ಇಡಿ ದೀಪ (ಹೈಬೀಮ್) ಗಳನ್ನು ಅಳವಡಿಸಿ ವಾಹನ ಚಾಲನೆ ಮಾಡುತ್ತಿದ್ದ ಮೈಸೂರು ನಗರದ 381 ಚಾಲಕರು ಹಾಗೂ ಮೈಸೂರು ಜಿಲ್ಲೆಯ 91 ಚಾಲಕರಿಗೆ ದಂಡ ವಿಧಿಸಲಾಗಿದೆ ಎಂದು ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದ್ದಾರೆ.



ತಮ್ಮ ಎಕ್ಸ್ ಖಾತೆಯಲ್ಲಿ ದಂಡ ವಿಧಿಸಿರುವ ಬಗ್ಗೆ ಅಂಕಿ ಅಂಶಗಳ ವಿವರ ನೀಡಿದ್ದಾರೆ.

ಹೆಚ್ಚು ಪ್ರಖರ ಬೆಳಕು ಹೊರ ಹಾಕುವ ಎಲ್‌ಇಡಿ ದೀಪ (ಹೆಡ್ ಲೈಟ್) ಗಳನ್ನು ಅಳವಡಿಸಿ ವಾಹನ ಚಾಲನೆ ಮಾಡಿದಾಗ ಎದುರಿನಿಂದ ಬರುವ ವಾಹನ ಅಸ್ಪಷ್ಟವಾಗುತ್ತದೆ. ಇದರಿಂದ ಅಪಘಾತಗಳು ಸಂಭವಿಸುತ್ತಿತ್ತು. ಈ ಹಿನ್ನೆಲೆಯಲ್ಲಿ ಇಂತಹ ಹೆಡ್‌ಲೈಟ್‌ಗಳ ಅಳವಡಿಕೆಗೆ ಪೊಲೀಸ್ ಇಲಾಖೆ ನಿರ್ಬಂಧ ಹೇರಿತ್ತು.

ಜುಲೈ 1 ರ ನಂತರವೂ ಎಲ್‌ಇಡಿ ದೀಪ ಅಳವಡಿಸಿಕೊಳ್ಳುವ ವಾಹನ ಚಾಲಕರಿಗೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಲಾಗಿತ್ತು ಇದನ್ನು ಲೆಕ್ಕಿಸದ ವಾಹನ ಚಾಲಕರಿಗೆ ದಂಡ ವಿಧಿಸಲಾಗಿದೆ. ಜುಲೈ 1 ರಿಂದ ಜುಲೈ 7 ರವರೆಗೆ ಮೈಸೂರು ನಗರದಲ್ಲಿ 381 ವಾಹನ ಹಾಗೂ ಮೈಸೂರು ಜಿಲ್ಲೆಯಲ್ಲಿ 91 ವಾಹನ ಚಾಲಕರಿಗೆ ದಂಡ ವಿಧಿಸಲಾಗಿದೆ.

ಜೊತೆಗೆ ಮಂಡ್ಯ ಜಿಲ್ಲೆಯಲ್ಲಿ 60, ಹಾಸನ ಜಿಲ್ಲೆಯಲ್ಲಿ 105, ಕೊಡಗು ಜಿಲ್ಲೆಯ 193 ಹಾಗೂ ಚಾಮರಾಜನಗರದ 269 ವಾಹನ ಚಾಲಕರಿಗೆ ದಂಡ ವಿಧಿಸಲಾಗಿದೆ.

ಬೆಂಗಳೂರು ನಗರದಲ್ಲಿ ಅತೀ ಹೆಚ್ಚು ಅಂದರೆ 3354 ವಾಹನ ಚಾಲಕರಿಗೆ ದಂಡ ವಿಧಿಸಲಾಗಿದ್ದು, ಒಟ್ಟಾರೆ ರಾಜ್ಯದಲ್ಲಿ ಏಳು ದಿನದ ಅವಧಿಯಲ್ಲಿ 8244 ವಾಹನ ಚಾಲಕರಿಗೆ ದಂಡ ವಿಧಿಸಲಾಗಿದೆ ಎಂದು ಅಲೋಕ್ ಕುಮಾರ್ ತಿಳಿಸಿದ್ದಾರೆ.

ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಹೆಸರು ಪ್ರಸ್ತಾಪ: ಸಿಬಿಐ ತನಿಖೆ ಸೂಕ್ತ

ಮೈಸೂರು, ಜು.8– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಹಗರಣದಲ್ಲಿ ಮುಖ್ಯಮಂತ್ರಿಗಳ ಹೆಸರು ಕೇಳಿ ಬಂದಿರುವುದರಿಂದ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವುದು ಸೂಕ್ತ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರಿನಲ್ಲಿ ಸೋಮವಾರ ಮುಡಾ ಹಗರಣದ ಬಗ್ಗೆ ಪ್ರತಿಕ್ರಿಯಿಸಿ, ಇದೊಂದು ಗಂಭೀರವಾದ ಪ್ರಕರಣವಾದ್ದರಿಂದ ಮುಕ್ತ ತನಿಖೆ ಅವಶ್ಯವಿದೆ. ಈಗಾಗಲೇ ನಮ್ಮ ವರಿಷ್ಠರು ಆಗ್ರಹಿಸಿರುವಂತೆ ಹಗರಣದಲ್ಲಿ ಮುಖ್ಯಮಂತ್ರಿಗಳ ಹೆಸರು ಕೇಳಿ ಬಂದಿರುವುದರಿಂದ ಸಿಬಿಐ ತನಿಖೆಗೆ ವಹಿಸಬೇಕಿದೆ ಎಂದರು.

ಮೈಸೂರು–ಕೊಡಗು ಅಭಿವೃದ್ಧಿ ನಿಟ್ಟಿನಲ್ಲಿ ಈಗಾಗಲೇ ಕೊಡಗಿನಲ್ಲಿ ಸಭೆ ನಡೆಸಲಾಗಿದೆ. ಮೈಸೂರಿನಲ್ಲೂ ಇಷ್ಟರಲ್ಲೇ ದಿಶಾ ಸಭೆ ನಡೆಯಬೇಕಿತ್ತು ಆದರೆ ಹೊಸ ಜಿಲ್ಲಾಧಿಕಾರಿಗಳು ಸ್ವಲ್ಪ ಕಾಲಾವಕಾಶ ಕೇಳಿದ್ದಾರೆ. ರೈಲ್ವೆ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದ್ದೇನೆ. ವಿಮಾನ ನಿಲ್ದಾಣದ ವಿಸ್ತರಣೆ ಯೋಜನೆ ಸಂಬಂಧ ಬುಧವಾರ ಸಭೆ ನಡೆಸಲಿದ್ದೇವೆ. ಆದಷ್ಟು ವೇಗವಾಗಿ ಅಭಿವೃದ್ಧಿ ಯೋಜನೆಗಳನ್ನು ತರಲು ಪ್ರಯತ್ನಿಸುತ್ತೇನೆ ಎಂದು ತಿಳಿಸಿದರು.

ಮೈಸೂರಿನ ಕಾಡಾ ಕಚೇರಿ ಹಾಗೂ ಮಡಿಕೇರಿಯಲ್ಲೂ ಕಚೇರಿ ತೆರೆಯಲಾಗುವುದು. ಕಚೇರಿಗಳಲ್ಲಿ ನನ್ನ ಹಾಗೂ ಆಪ್ತ ಸಹಾಯಕರನ್ನು ಸಾರ್ವಜನಿಕರು ಭೇಟಿ ಮಾಡಬಹುದು. ಮೈಸೂರು–ಕೊಡಗಿನ ಜನತೆಗೆ ಬಹಳಷ್ಟು ನಿರೀಕ್ಷೆಗಳಿದ್ದು, ಅವರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲಿದ್ದೇನೆ ಎಂದು ಹೇಳಿದರು.

ಮೈಸೂರು ರೈಲು ನಿಲ್ದಾಣ ದೇಶದ ಮಾದರಿ ನಿಲ್ದಾಣವಾಗಿ ಅಭಿವೃದ್ಧಿ; ಸಂಸದ ಯದುವೀರ್ ಆಶಯ

●ರೈಲ್ವೆ ಅಧಿಕಾರಿಗಳೊಂದಿಗೆ ಸಭೆ; ಯೋಜನೆ, ಕಾಮಗಾರಿಗಳ ಪ್ರಗತಿ ಪರಿಶೀಲನೆ ●ರೈಲ್ವೆ ಮೂಲಸೌಕರ್ಯಗಳ ಅಭಿವೃದ್ಧಿಗೆ ನೆರವಿನ ಭರವಸೆ

ಮೈಸೂರು, ಜು.8(ಎಸ್‌ಬಿಡಿ)– ಮೈಸೂರು ರೈಲ್ವೆ ನಿಲ್ದಾಣವನ್ನು ದೇಶದ ಮಾದರಿ ನಿಲ್ದಾಣವಾಗಿ ಅಭಿವೃದ್ಧಿಪಡಿಸಬೇಕಿದೆ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆಶಯ ವ್ಯಕ್ತಪಡಿಸಿದರು.



ಮೈಸೂರು ರೈಲ್ವೆ ನಿಲ್ದಾಣದಲ್ಲಿ ಸೋಮವಾರ ಪರಿಶೀಲನೆ ನಡೆಸಿದ ಸಂಸದ ಯದುವೀರ್, ಪ್ರಯಾಣಿಕರ ಕುಂದು–ಕೊರತೆ ಆಲಿಸಿದರು. ಈ ವೇಳೆ ಡಿಆರ್‌ಎಂ ಶಿಲ್ಪಿ ಅಗರ್ವಾಲ್ ಇನ್ನಿತರ ಅಧಿಕಾರಿಗಳಿದ್ದರು.

ನೈರುತ್ಯ ರೈಲ್ವೆ ಮೈಸೂರು ವಿಭಾಗೀಯ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಮೈಸೂರು–ಕೊಡಗು ಕ್ಷೇತ್ರ ವ್ಯಾಪ್ತಿಯ ರೈಲ್ವೆ ಯೋಜನೆ ಹಾಗೂ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಮೈಸೂರಿನ ಪಾರಂಪರಿಕ ರಕ್ಷಣೆಗೆ ನಮ್ಮ ಪೂರ್ವಜರು ಸ್ಫೂರ್ತಿಯಾಗಿದ್ದಾರೆ. ಈ ನಿಟ್ಟಿನಲ್ಲಿ ಮೈಸೂರು ರೈಲ್ವೆ ನಿಲ್ದಾಣವನ್ನು ದೇಶದ ಮಾದರಿ ನಿಲ್ದಾಣವಾಗಿ ಅಭಿವೃದ್ಧಿಪಡಿಸುವ ಆಶಯವಿದೆ ಎಂದರು.

ಮೈಸೂರು ನಿಲ್ದಾಣದಿಂದ ದೇಶದ ಎಲ್ಲಾ ಪ್ರಮುಖ ನಗರಗಳಿಗೆ ರೈಲು ಸಂಪರ್ಕ ಕಲ್ಪಿಸುವ ಯೋಜನೆ ಆಗಬೇಕಿದೆ. ಹಾಗೆಯೇ ಮೈಸೂರಿನಿಂದ ರಾಜ್ಯದ ಎಲ್ಲಾ ನಗರಗಳಿಗೂ ರೈಲು ಸಂಪರ್ಕ ಒದಗಿಸುವ ಬಗ್ಗೆಯೂ ಸಚಿವರೊಂದಿಗೆ ಚರ್ಚೆ ಮಾಡಲಿದ್ದೇನೆ. ಇದರ ಸಾಧ್ಯಾಸಾಧ್ಯತೆ ಬಗ್ಗೆ ಪರಾಮರ್ಶಿಸಿ ಮುಂದುವರೆಯೋಣ ಎಂದು ತಿಳಿಸಿದರು.

ಮೈಸೂರು–ಕೊಡಗು ಕ್ಷೇತ್ರ ವ್ಯಾಪ್ತಿಯ ರೈಲ್ವೆ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಸರ್ಕಾರದಿಂದ ನೆರವು ತರಲಾಗುವುದು. ಇಲ್ಲಿನ ಆರ್ಥಿಕ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿ ಜೊತೆಗೆ ಜನಜೀವನದ ಗುಣಮಟ್ಟ ಸುಧಾರಣೆ ಗುರಿಯೊಂದಿಗೆ ಕಾರ್ಯ ನಿರ್ವಹಿಸುತ್ತೇನೆ. ರಾಜ್ಯದವರೇ ಆದ ರೈಲ್ವೆ ರಾಜ್ಯ ಸಚಿವರಾದ ವಿ.ಸೋಮಣ್ಣನವರು ಸಂಪೂರ್ಣ ಸಹಕಾರ ನೀಡಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು.

ಸಭೆಯಲ್ಲಿ ನೈರುತ್ಯ ರೈಲ್ವೆ ಮೈಸೂರು ವಿಭಾಗದ ವಿಭಾಗೀಯ ವ್ಯವಸ್ಥಾಪಕಿ (ಡಿಆರ್‌ಎಂ) ಶಿಲ್ಪಿ ಅಗರ್ವಾಲ್ ಅವರು ಮೈಸೂರು ಯಾರ್ಡ್ ವಿಸ್ತರಣೆ ಸೇರಿದಂತೆ ವಿವಿಧ ಮಹತ್ವದ ಯೋಜನೆಗಳ ಪ್ರಗತಿ ಬಗ್ಗೆ ಸಂಸದರಿಗೆ ಮಾಹಿತಿ ನೀಡಿದರು. ಯೋಜನೆಗಳ ಅನುಷ್ಠಾನ, ಅಭಿವೃದ್ಧಿ ಹಾಗೂ ನಿರ್ವಹಣೆಯಲ್ಲಿ ಮೈಸೂರು ವಿಭಾಗ ಮೈಲಿಗಲ್ಲು ಸ್ಥಾಪಿಸಿರುವುದು, ಮೈಸೂರು ರೈಲ್ವೆ ಜಾಲದ ಕಾರ್ಯಾಚರಣೆಯ ದಕ್ಷ ಹಾಗೂ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕಾರ್ಯತಂತ್ರಗಳ ಪ್ರಾಮುಖ್ಯತೆ ಬಗ್ಗೆ ವಿವರಿಸಿದರು.

ನಿಲ್ದಾಣ ಪರಿಶೀಲನೆ: ಸಭೆ ಬಳಿಕ ಸಂಸದ ಯದುವೀರ್, ಡಿಆರ್‌ಎಂ ಶಿಲ್ಪಿ ಅಗರ್ವಾಲ್ ಹಾಗೂ ಹಿರಿಯ ರೈಲ್ವೇ ಅಧಿಕಾರಿಗಳೊಂದಿಗೆ ಮೈಸೂರು ರೈಲು ನಿಲ್ದಾಣ ಮತ್ತು ಮೈಸೂರು ರೈಲು ಮ್ಯೂಸಿಯಂಗೆ ಭೇಟಿ ನೀಡಿ, ಪರಿಶೀಲಿಸಿದರು. ಪ್ಲಾಟ್‌ಫಾರ್ಮ್‌ಗಳು, ಶೌಚಾಲಯಗಳ ಸೌಲಭ್ಯ, ಪ್ರಯಾಣಿಕರು ಕಾಯುವ ಪ್ರದೇಶಗಳು, ಟಿಕೆಟ್ ಬುಕಿಂಗ್ ಕಚೇರಿ, ಎಸ್ಕಲೇಟರ್‌ಗಳು ಮತ್ತು ಸರ್ಕ್ಯುಲೇಟಿಂಗ್ ಸೇರಿದಂತೆ ನಿಲ್ದಾಣದಲ್ಲಿನ ಸೌಕರ್ಯಗಳು ಮತ್ತು ಪ್ರಯಾಣಿಕರಿಗೆ ಪ್ರಸ್ತುತ ಕಲ್ಪಿಸಿರುವ ಸೌಲಭ್ಯಗಳನ್ನು ವೀಕ್ಷಿಸಿದರು.

ಮೈಸೂರು ರೈಲು ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದರೊಂದಿಗೆ ಗಮನಾರ್ಹ ಸುಧಾರಣೆ ಮಾಡಲಾಗಿದೆ. ನೂತನ ಸೌಕರ್ಯಗಳು, ಸಿಸಿ ಕ್ಯಾಮೆರಾ ಅಳವಡಿಕೆ, ಬ್ಯಾಗೇಜ್ ಸ್ಕ್ಯಾನರ್‌ಗಳೊಂದಿಗೆ ಭದ್ರತಾ ವ್ಯವಸ್ಥೆಯ ಸುಧಾರಣೆ, ನಿಲ್ದಾಣದ ಆಧುನೀಕರಣದ ಜೊತೆಗೆ ಪ್ರಯಾಣಿಕರಿಗೆ ಪ್ರಯಾಣ ಪ್ರಕ್ರಿಯೆಯನ್ನು ಮತ್ತಷ್ಟು ಸುಲಭ ಹಾಗೂ ಆರಾಮದಾಯಕಗೊಳಿಸುವ ನಿಟ್ಟಿನಲ್ಲಿ ಸಾಕಷ್ಟು ಕ್ರಮ ವಹಿಸಲಾಗಿದೆ ಎಂದು ಇದೇ ವೇಳೆ ಡಿಆರ್‌ಎಂ ಶಿಲ್ಪಿ ಅಗರ್ವಾಲ್ ವಿವರಿಸಿದರು.

ಸಂಸದ ಯದುವೀರ್ ಪರಿಶೀಲನೆ ನಡುವೆ ಪ್ರಯಾಣಿಕರೊಂದಿಗೆ ಮಾತನಾಡಿ, ಅವರ ಕುಂದು–ಕೊರತೆಗಳನ್ನು ಆಲಿಸಿದರು. ಅಲ್ಲದೆ ಆ ಬಗ್ಗೆ ಅಧಿಕಾರಿಗಳಿಗೆ ತಿಳಿಸಿ ಸೂಕ್ತ ಪರಿಹಾರ ಕ್ರಮಕ್ಕೆ ಸೂಚಿಸಿದರು. ರೈಲ್ವೆ ನಿಲ್ದಾಣದಲ್ಲಿನ ಶ್ರಮಿಕರನ್ನು ಭೇಟಿಯಾಗಿ ಅವರ ಸಮಸ್ಯೆಯನ್ನೂ ಕೇಳಿದರು. ಯೋಜನೆಗಳ ಪ್ರಗತಿ ಬಗ್ಗೆ ತೃಪ್ತಿ ವ್ಯಕ್ತಪಡಿಸಿ, ರೈಲ್ವೆ ಅಧಿಕಾರಿಗಳ ಪ್ರಯತ್ನವನ್ನು ಶ್ಲಾಘಿಸಿದರು. ಯೋಜನೆಗಳನ್ನು ಕೈಗೊಳ್ಳುವಷ್ಟೇ ಅವುಗಳನ್ನು ಸಕಾಲದಲ್ಲಿ ಪೂರ್ಣಗೊಳಿಸುವುದು ಬಹಳ ಮುಖ್ಯ. ಈ ಬಗ್ಗೆ ಅಧಿಕಾರಿಗಳು ಹೆಚ್ಚು ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಇಂದಿನಿಂದ ಶ್ರೀಕಂಠೇಶ್ವರ, ಪಾರ್ವತಿ ಗಿರಿಜಾ ಕಲ್ಯಾಣ

ಮಹೋತ್ಸವಕ್ಕೆ ದೇವಾಲಯದಲ್ಲಿ ಸಕಲ ಸಿದ್ಧತೆ



ಗಿರಿಜಾ ಕಲ್ಯಾಣ ಅಂಗವಾಗಿ ಶ್ರೀಕಂಠೇಶ್ವರ ದೇವಾಲಯದಲ್ಲಿ ಸಿದ್ಧತೆ ನಡೆಯುತ್ತಿರುವುದು.

ನಂಜನಗೂಡು, ಜು.8– ಶ್ರೀಕಂಠೇಶ್ವರ, ಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಮಹೋತ್ಸವ ಜು.9 ರಿಂದ 16ರವರೆಗೆ ನಡೆಯಲಿದ್ದು, ಇದಕ್ಕಾಗಿ ದೇವಾಲಯದಲ್ಲಿ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

ಗಿರಿಜಾ ಕಲ್ಯಾಣ ಅಂಗವಾಗಿ ಪ್ರಧಾನ ಅರ್ಚಕ ನೀಲಕಂಠ ದೀಕ್ಷಿತ್ ನೇತೃತ್ವದಲ್ಲಿ ಪ್ರತಿದಿನ ವಿವಿಧ ಧಾರ್ಮಿಕ ಕೈಂಕರ್ಯಗಳು ನಡೆಯಲಿದೆ. ಜು.9ರಂದು ಸಂಜೆ 5 ರಿಂದ ರಾತ್ರಿ 8ರವರೆಗೆ ವರಪೂಜಾ ಮಹೋತ್ಸವ ನಡೆಯಲಿವೆ. ಜು.10 ರಂದು ಬೆಳಗ್ಗೆ 9 ಗಂಟೆಗೆ ಅನುಷ್ಠಾ ಪೂರ್ವಕ ಕನ್ನಡಿ, ಕಳಸ, ಅಂಕುರಾರ್ಪಣ ಪೂರ್ವಕ ಮಂಗಳಸ್ನಾನ, ಮಧ್ಯಾಹ್ನ 12 ಗಂಟೆಗೆ ನಾಂದಿ ಗ್ರಹಯಜ್ಞ, ಸಂಜೆ 5ಕ್ಕೆ ಕಾಶಿಯಾತ್ರಾ ಮಹೋತ್ಸವ ಜರುಗಲಿದ್ದು, ರಾತ್ರಿ 7.15 ರಿಂದ 7.45 ಗಂಟೆಯೊಳಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಸಂಬಂಧ ಮಾಲಾ ನಿರೀಕ್ಷಣಾ ಪೂರ್ವಕ ಕಲ್ಯಾಣ ಮಂಟಪ ಪ್ರವೇಶ ನಡೆಯಲಿದೆ. ನಂತರ ಪಾರ್ವತಿ ಮತ್ತು ಶ್ರೀಕಂಠೇಶ್ವರ ಸ್ವಾಮಿಯವರ ಗಿರಿಜಾ ಕಲ್ಯಾಣ ಮಹೋತ್ಸವದ ಧಾರಾ ಮಹೋತ್ಸವ ಹಾಗೂ ಅಕ್ಷತಾರೋಹಣದ ನಂತರ ಮದುವೆಯಲ್ಲಿ ಭಾಗಿಯಾದ ಭಕ್ತರಿಗೆ ದಾಸೋಹ ನಡೆಯಲಿದೆ.

ಜು.11 ರಂದು ಗುರುವಾರ ಉರುಟಣೆ, ಉಯ್ಯಾಲೋತ್ಸವ ನಡೆಯಲಿದ್ದು, ಜು.13 ರಂದು ರಾತ್ರಿ 7ಕ್ಕೆ ನಾಕಬಲಿ, ಹೊಳಲು ಸುತ್ತುವುದು, ಶೇಷಹೋಮ, ಗಜಾರೋಹಣ, ಗೃಹಪ್ರವೇಶ ಮಹೋತ್ಸವ ನಡೆಯಲಿದೆ. ಜು 14, 15, 16 ರಂದು ಕ್ರಮವಾಗಿ 3 ದಿನಗಳ ಕಾಲ ಕಪಿಲಾ ನದಿಯ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ ಜರುಗಲಿದೆ. ನಂತರ ಶಯನೋತ್ಸವ ಕಾರ್ಯಕ್ರಮದ ಮೂಲಕ ಗಿರಿಜಾ ಕಲ್ಯಾಣ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಗಿರಿಜಾ ಕಲ್ಯಾಣ ಅಂಗವಾಗಿ ದೇವಾಲಯದಲ್ಲಿ ಸಿದ್ಧತೆಗಳು ಪೂರ್ಣಗೊಂಡಿದ್ದು, ದೇವಾಲಯದ ಆವರಣದಲ್ಲಿ ತಳಿರು ತೋರಣಗಳಿಂದ ಕೂಡಿದ ಹಸಿರು ಚಪ್ಪರ ಹಾಕಿ ಸಿದ್ಧತೆ ಕೈಗೊಳ್ಳಲಾಗಿದೆ. ದೇವಾಲಯದ ಶಾಸ್ತ್ರ ಮಂಟಪದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವ ಜರುಗುವ ಕಾರಣ ವಿವಿಧ ಬಗೆಯ ಹೂಗಳಿಂದ ಅಲಂಕೃತಗೊಳಿಸಲಾಗಿದೆ. ಅಲ್ಲದೇ ದೇವಾಲಯದ ಸುತ್ತಮುತ್ತ ವಿದ್ಯುತ್ ದೀಪದಿಂದ ಅಲಂಕಾರ ಮಾಡಲಾಗಿದೆ.

ಈ ಬಾರಿ ಅದ್ಧೂರಿಯಾಗಿ ಗಿರಿಜಾ ಕಲ್ಯಾಣ ಮಹೋತ್ಸವ ಆಚರಣೆ ನಡೆಸಲು ಜಿಲ್ಲಾಡಳಿತ ತೀರ್ಮಾನಿಸಿರುವುದರಿಂದ ಮಹೋತ್ಸವದಲ್ಲಿ ಭಾಗಿಯಾಗಲು ಭಕ್ತರು ಉತ್ಸುಕರಾಗಿದ್ದಾರೆ.

ಬೆಂಗಳೂರು ನಿರುದ್ಯೋಗಿಗಳಿಗೆ ಉದ್ಯೋಗ ನೀಡುವ ನಗರ

ಕೆಂಪೇಗೌಡರ ಜಯಂತಿಯಲ್ಲಿ ಶಾಸಕ ಅನಿಲ್



ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ತಾಲೂಕಿನಲ್ಲಿ ಕೆಂಪೇಗೌಡರ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರು ಮಾಡಿಸಿದ್ದು, ಶೀಘ್ರದಲ್ಲೇ ಭೂಮಿಪೂಜೆ ಸಲ್ಲಿಸಲಾಗುವುದು.

- ಅನಿಲ್, ಶಾಸಕ.

ಹೆಚ್.ಡಿ.ಕೋಟೆ, ಜು.8– ಉದ್ಯೋಗ ಅರಸಿ ಬರುವ ಗ್ರಾಮೀಣ ನಿರುದ್ಯೋಗಿಗಳಿಗೆ ಉದ್ಯೋಗ ನೀಡುವ ನಗರವಾಗಿ ಬೆಂಗಳೂರು ರೂಪುಗೊಂಡಿರುವುದಕ್ಕೆ ನಾಡಪ್ರಭು ಕೆಂಪೇಗೌಡರೇ ಕಾರಣ ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ಜೆ.ಕೆ.ಶೋರೂಂ ಆವರಣದಲ್ಲಿ ಯುವ ಒಕ್ಕಲಿಗರ ಹಿತರಕ್ಷಣಾ ಸಮಿತಿಯಿಂದ ನಡೆದ ನಾಡಪ್ರಭು ಕೆಂಪೇಗೌಡರ ಜಯಂತಿ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೆಂಪೇಗೌಡರು ತಮ್ಮ ದೂರದೃಷ್ಟಿಯಿಂದ ಬೆಂಗಳೂರನ್ನು ಉತ್ತಮ ರೀತಿ ನಿರ್ಮಿಸಿ, ಅಗತ್ಯಕ್ಕೆ ತಕ್ಕಂತೆ ಕೆರೆಕಟ್ಟೆಗಳನ್ನು ನಿರ್ಮಿಸಿ, ಅಂದಿನ ದಿನದಲ್ಲೇ ಸುಸಜ್ಜಿತ ನಗರಕ್ಕೆ ನಾಂದಿ ಹಾಡಿದರು ಎಂದರು.

ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಆದಿ ಚುಂಚನಗಿರಿ ಮಠದಲ್ಲಿ ಉಚಿತವಾಗಿ ವಿದ್ಯೆ ನೀಡುತ್ತಿರುವುದು ಒಕ್ಕಲಿಗ ಸಮಾಜದ ಹೆಮ್ಮೆಯ ವಿಷಯ ಎಂದರು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ಉತ್ತಮ ಆಡಳಿತಗಾರರಾದ ಕೆಂಪೇಗೌಡರಿಂದ ಉತ್ತಮ ಬೆಂಗಳೂರು ನಿರ್ಮಾಣವಾಗಲು ಸಾಧ್ಯವಾಯಿತು. ಅಂದು ನಿರ್ಮಾಣವಾದ ಬೆಂಗಳೂರು ಇಂದು ವಿಶ್ವದ ಹಲವು ಪ್ರಮುಖ ನಗರಗಳ ಸಾಲಿನಲ್ಲಿ ನಿಲ್ಲುತ್ತದೆ. ಕೆಂಪೇಗೌಡರು ಎಲ್ಲರನ್ನು ಸಮಾನವಾಗಿ ಕಾಣುವ ದೃಷ್ಟಿಯಿಂದ ಎಲ್ಲಾ ಸಮಾಜದವರಿಗೂ ಪೇಟೆಗಳನ್ನು ನಿರ್ಮಿಸಿ ಅಂದೇ ಸಮಾನತೆಯತ್ತ ದಿಟ್ಟ ಹೆಜ್ಜೆ ಇಟ್ಟಿದ್ದರು ಎಂದರು.

ಇದೇ ವೇಳೆ ಎಂಬಿಬಿಎಸ್, ದ್ವಿತೀಯ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಯುವ ಒಕ್ಕಲಿಗರ ಹಿತರಕ್ಷಣಾ ಸಮಿತಿ ಅಧ್ಯಕ್ಷ ಸತೀಶ್, ಕಾರ್ಯದರ್ಶಿ ರಾಜಣ್ಣ, ತಾಲೂಕು ಒಕ್ಕಲಿಗ ಸಮಾಜದ ಅಧ್ಯಕ್ಷ ಸುರೇಂದ್ರ ಡಿ.ಗೌಡ, ಡಾ.ಪ್ರಜ್ವಲ್, ಜಯ ಕರ್ನಾಟಕ ರಾಜ್ಯ ಉಪಧ್ಯಾಕ್ಷ ಸತೀಶ್‌ಗೌಡ, ಬಿಜೆಪಿ ಅಧ್ಯಕ್ಷ ಶಂಭೇಗೌಡ, ಮುಖಂಡರಾದ ಮಂಜುನಾಥ್, ಮಹೇಶ್, ನರಸಿಂಹೇಗೌಡ, ಜಯರಾಮ್, ಮಾರುತಿ, ಶಶಿ, ಹರೀಶ್‌ಗೌಡ, ಶ್ರೀನಿವಾಸ್, ಮಹೇಶ್, ನಿಂಗರಾಜು, ಸ್ವಾಮಿ, ರಾಮಚಂದ್ರ, ವೀರೇಂದ್ರ, ಸೋಮೇಶ್, ರಾಜೇಶ್, ರವಿಗೌಡ, ಸಿದ್ದೇಗೌಡ, ಯಶವಂತ್, ಕಲ್ಲೇಶ್‌ಗೌಡ, ಶಂಭು ಇದ್ದರು.

ಇಂದು ಅಂಬೇಡ್ಕರ್ ಪ್ರತಿಮೆ ಅನಾವರಣ

ಸರಗೂರು, ಜು.8– ತಾಲೂಕಿನ ಹಳೆಯೂರು ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಅನಾವರಣ ಕಾರ್ಯಕ್ರಮ ಜು.9ರಂದು ನಡೆಯಲಿದೆ.



ಸಮಾರಂಭದ ಸಾನಿಧ್ಯವನ್ನು ಮೈಸೂರಿನ ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶ್ ಸ್ವಾಮೀಜಿ ವಹಿಸಲಿದ್ದು, ಪ್ರತಿಮೆ ಅನಾವರಣ ವಿಧಿವಿಧಾನವನ್ನು ಸಾರನಾಥ ಬುದ್ಧ ವಿಹಾರದ ಗೌತಮಿ ಬಂತೇಜಿ ನಡೆಸುವರು. ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪಅಂಬೇಡ್ಕರ್ ಪ್ರತಿಭೆ ಅನಾವರಣಗೊಳಿಸಲಿದ್ದು, ಶಾಸಕ ಅನಿಲ್ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಸುನೀಲ್ ಬೋಸ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ದರ್ಶನ್ ಹಾಗೂ ಮುಖ್ಯ ಭಾಷಣಕಾರರಾಗಿ ಅಕ್ಕ ಐಎಎಸ್ ಅಕಾಡೆಮಿ ಸಂಸ್ಥಾಪಕ ಡಾ.ಶಿವಕುಮಾರ್ ಸೇರಿದಂತೆ ತಾಲೂಕಿನ ಎಲ್ಲಾ ಜನಪ್ರತಿನಿಧಿಗಳು ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಗಾಂಜಾ ಮಾರುತ್ತಿದ್ದ ಮಹಿಳೆ ಬಂಧನ

ಬೈಲಕುಪ್ಪೆ, ಜು.8– ಗಾಂಜಾ ಮಾರಾಟ ಮಾಡುತ್ತಿದ್ದ ಮಹಿಳೆ ಬಂಧಿಸುವಲ್ಲಿ ಬೈಲಕುಪ್ಪೆ ಪೊಲೀಸರು ಯಶಸ್ವಿಯಾಗಿದ್ದಾರೆ.



ಪಿರಿಯಾಪಟ್ಟಣ ತಾಲೂಕಿನ ಆಯಬೀಡು ಗ್ರಾಮದ ಬಿ.ಭಾರತೀಬಾ ಬಂಧಿತ ಆರೋಪಿ. ಈಕೆಯಿಂದ 49 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಮಾಹಿತಿ ಮೇರೆಗೆ ಎಸ್‌ಐ ಅಜಯ್ ಕುಮಾರ್ ಮಾರ್ಗ ದರ್ಶನದಲ್ಲಿ ಕ್ರೈಂ ಎಸ್‌ಐ ಮಹಾಲಿಂಗಯ್ಯ ನೇತೃತ್ವದಲ್ಲಿ ದಾಳಿ ನಡೆಸಿ ಮಹಿಳೆ ಬಂಧಿಸಿ ಆಕೆಯಿಂದ ಗಾಂಜಾ ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಈ ಸಂಬಂಧ ಬೈಲಕುಪ್ಪೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ಸೋಮಶೇಖರ್, ಮಹದೇವಪ್ಪ, ಮುದ್ದುರಾಜ್, ರವಿಕುಮಾರ್ ಮತ್ತು ಕುಮಾರಸ್ವಾಮಿ, ಅನಿತಾ ಇದ್ದರು.

ನಾಳೆ ಚಾ.ನಗರದಲ್ಲಿ ಕೃತಜ್ಞತಾ ಸಭೆ: ಸಿಎಂ ಭಾಗಿ

ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮನವಿ



ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿದರು.

ತಿ.ನರಸೀಪುರ, ಜು.8– ಚಾಮರಾಜನಗರದ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜು.10ರಂದು ಹಮ್ಮಿಕೊಂಡಿರುವ ಕೃತಜ್ಞತಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಲಿದ್ದು, ತಾಲೂಕಿನ ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸುವಂತೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮನವಿ ಮಾಡಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕರ್ತರ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರಿಗೆ ಅಭೂತಪೂರ್ವ ಜಯತಂದು ಕೊಟ್ಟ ಮತದಾರರಿಗೆ ಕೃತಜ್ಞತೆ ಸಲ್ಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ವೆಂಕಟೇಶ್ ಹಾಗೂ ಶಾಸಕರಾದ ಪುಟ್ಟರಂಗಶೆಟ್ಟಿ, ದರ್ಶನ್, ಗಣೇಶ್ ಪ್ರಸಾದ್, ಎ.ಆರ್.ಕೃಷ್ಣಮೂರ್ತಿ, ಅನಿಲ್, ರವಿಶಂಕರ್, ಹರೀಶ್‌ಗೌಡ ಭಾಗವಹಿಸಲಿದ್ದು, ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ನಿಗದಿತ ಸಮಯಕ್ಕೆ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಹಾಜರಿರುವಂತೆ ಮನವಿ ಮಾಡಿದರು.

ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಅಂದು ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ನಡೆಯುವುದರಿಂದ ಕಾಂಗ್ರೆಸ್ ಕಾರ್ಯಕರ್ತರು 10 ಗಂಟೆಗೆ ಸ್ಥಳದಲ್ಲಿ ಹಾಜರಿರುವಂತೆ ಮನವಿ ಮಾಡಿದ ಅವರು, ಕೃತಜ್ಞತೆ ಸಮಾರಂಭದಲ್ಲಿ 40 ಸಾವಿರಕ್ಕೂ ಹೆಚ್ಚು ಮಂದಿ ಸೇರುವ ನಿರೀಕ್ಷೆ ಇದ್ದು, ತಾಲೂಕಿನಿಂದ 10 ಸಾವಿರ ಕಾರ್ಯಕರ್ತರು ಭಾಗವಹಿಸಲಿದ್ದೇವೆ ಎಂದು ವಿವರ ನೀಡಿದರು.

ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನೂತನ ಸಂಸದ ಸುನೀಲ್ ಬೋಸ್ ಅವರಿಗೆ ಕ್ಷೇತ್ರ ಕಾಂಗ್ರೆಸ್ ಕಾರ್ಯಕರ್ತರು ಅಭಿನಂದನೆ ಸಲ್ಲಿಸಲಿದ್ದಾರೆ. ಕಾರ್ಯಕ್ರಮಕ್ಕೆ ತೆರಳಲು ಕಾರ್ಯಕರ್ತರಿಗೆ ಹೋಬಳಿ ವ್ಯಾಪ್ತಿ ಬಸ್ ಸೌಕರ್ಯ ಕಲ್ಪಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚೆನ್ನಕೇಶವ, ತಾಪಂ ಮಾಜಿ ಸದಸ್ಯರಾದ ಗಣೇಶ್, ರಾಮಲಿಂಗು, ರಂಗಪ್ಪ, ಡಾ.ಜ್ಞಾನಪ್ರಕಾಶ್, ಶೇಷಾದ್ರಿ, ಸೋಮಣ್ಣ, ಪುರಸಭಾ ಸದಸ್ಯ ಬಾದಾಮಿ ಮಂಜು, ಶಿವಶಂಕರ್, ಸಿದ್ದಶೆಟ್ಟಿ, ಶಂಕರ್, ಕೆ.ಎಂ.ಮಲ್ಲು, ಬಸವಣ್ಣ, ಪ್ರಭಾಕರ್, ಮಲ್ಲು, ಡೈರಿ ಅಧ್ಯಕ್ಷ ಕುಮಾರ್, ಸಿದ್ದರಾಜು ಮತ್ತಿತರಿದ್ದರು.

ಜಾಬಗೆರೆಯಲ್ಲಿ ಡೆಂಗ್ಯೂ ತಡೆ ಮಾಸಾಚರಣೆ



ಜಾಬಗೆರೆಯಲ್ಲಿ ಡೆಂಗ್ಯೂ ತಡೆ ಮಾಸಾಚರಣೆ ಆಚರಿಸಲಾಯಿತು.

ಹಿರೀಕ್ಯಾತನಹಳ್ಳಿ, ಜು.8– ಪ್ರಾಥಮಿಕ ಆರೋಗ್ಯ ಕೇಂದ್ರ ಗಾವಡಗೆರೆ ವ್ಯಾಪ್ತಿಯ ಜಾಬಗೆರೆ ಗ್ರಾಮದಲ್ಲಿ ಡೆಂಗ್ಯೂ, ಚಿಕನ್ ಗುನ್ಯಾ ತಡೆಗಟ್ಟುವ ಸಂಬಂಧ ಗ್ರಾಪಂನಲ್ಲಿ ವಾರದಲ್ಲಿ ಒಂದು ದಿನ ಪ್ರತಿ ಶುಕ್ರವಾರ ಒಣಗಲು ದಿನ ಆಚರಿಸುವ ಬಗ್ಗೆ ಸಾರ್ವಜನಿಕರಿಗೆ, ಗ್ರಾಪಂ ಸದಸ್ಯರಿಗೆ, ಸಿಬ್ಬಂದಿಗೆ ಆರೋಗ್ಯ ಇಲಾಖೆ ವತಿಯಿಂದ ಮಾಹಿತಿ ನೀಡಲಾಯಿತು.

ಆರೋಗ್ಯ ಇಲಾಖೆಯಿಂದ ನಡೆದ ಡೆಂಗ್ಯೂ ತಡೆ ಮಾಸಾಚರಣೆಯಲ್ಲಿ ಪ್ರತಿ ಶುಕ್ರವಾರ ಮನೆ, ಕಚೇರಿ, ಶಾಲೆ ಸುತ್ತ ತ್ಯಾಜ್ಯಗಳನ್ನು ಶೇಖರಿಸಿ ವಿಲೇವಾರಿ ಮಾಡುವುದು ಹಾಗೂ ನೀರು ಶೇಖರಣ ತೊಟ್ಟಿ, ಡ್ರಮ್‌ಗಳು ಚೆನ್ನಾಗಿ ಉಜ್ಜಿ ತೊಳೆದು 2 ಗಂಟೆ ನಂತರ ನೀರು ತುಂಬುವುದು ಹಾಗೂ ಮುಚ್ಚಿಡುವುದು ಎಂದು ತಿಳಿಸಲಾಯಿತು.

ಸಾರ್ವಜನಿಕರು ಡೆಂಗ್ಯೂ ನಿಯಂತ್ರಣಕ್ಕೆ ಆರೋಗ್ಯ ಇಲಾಖೆಯೊಂದಿಗೆ ಸಹಕರಿಸುವಂತೆ ಆರೋಗ್ಯ ನಿರೀಕ್ಷಣಾಧಿಕಾರಿ ಹನುಮಂತ ತಿಳಿಸಿದರು. ಪಿಡಿಓ ಮೀನಾಕ್ಷಮ್ಮ, ಆರೋಗ್ಯ ಇಲಾಖೆಯ ಇಂದಿರಾ, ಶ್ರೀನಿವಾಸ್, ಶಾಂತಮ್ಮ, ಜಯಲಕ್ಷ್ಮಿ, ಮರಿಗೌಡರು, ಅಂಗನವಾಡಿ ಕಾರ್ಯಕರ್ತೆಯರು ಇದ್ದರು.

ಭೇರ್ಯ ಗ್ರಾಪಂಗೆ ಬಿ.ಕೆ.ಮಂಜಪ್ಪ ಅಧ್ಯಕ್ಷ



ಭೇರ್ಯ ಗ್ರಾಪಂ ಅಧ್ಯಕ್ಷರಾಗಿ ಬಿ.ಕೆ.ಮಂಜಪ್ಪ ಆಯ್ಕೆಯಾದರು.

ಭೇರ್ಯ, ಜು.8– ಇಲ್ಲಿನ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬಿ.ಕೆ.ಮಂಜಪ್ಪ ಆಯ್ಕೆಯಾಗಿದ್ದಾರೆ. ಈ ಹಿಂದಿನ ಅಧ್ಯಕ್ಷೆ ಜಯಲಕ್ಷ್ಮಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಹಿಂದುಳಿದ ವರ್ಗಕ್ಕೆ ಎ(ಅ) ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಸದಸ್ಯ ಬಿ.ಕೆ.ಮಂಜಪ್ಪ ಮತ್ತು ಜೆಡಿಎಸ್ ಬೆಂಬಲಿತ ಸದಸ್ಯೆ ರೇಖಾ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಬಿ.ಕೆ.ಮಂಜಪ್ಪ 8 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೇ, ಪ್ರತಿಸ್ಪರ್ಧಿ ರೇಖಾ 7 ಮತಗಳನ್ನು ಪಡೆದು ಪರಾಭವಗೊಂಡರು. ನೂತನ ಅಧ್ಯಕ್ಷರನ್ನು ಚುನಾವಣಾಧಿಕಾರಿ ಪಶುಪಾಲನೆ ಇಲಾಖೆ ಸಹಾಯಕ ನಿರ್ದೇಶಕ ಡಾ.ಮಂಜುನಾಥ್ ಪ್ರಕಟಿಸಿದರು. ಪಿಡಿಓ ಪ್ರತಾಪ್ ಸಹಕರಿಸಿದರು.

ಚುನಾವಣಾ ಸಭೆಯಲ್ಲಿ ಉಪಾಧ್ಯಕ್ಷೆ ರೂಪ, ಸದಸ್ಯರಾದ ಬಿ.ಎಲ್.ರಾಜಶೇಖರ್, ಕೃಷ್ಣೇಗೌಡ, ಬಿ.ಪಿ.ಪ್ರಕಾಶ್, ಜಯಲಕ್ಷ್ಮಿ, ತಾಯಮ್ಮ ಶಾಂತಮ್ಮ, ಮೊಹಸೀನ್ ತಾಜ್, ಜ್ಯೋತಿ, ಹರ್ಷವರ್ಧನಿ, ಬಿ.ಕೆ.ಕುಮಾರ್, ಬಿ.ಕೆ.ಶಿವಕುಮಾರ್, ಬಿ.ಬಿ.ಶಿವಣ್ಣ ಭಾಗವಹಿಸಿದ್ದರು. ನೂತನ ಅಧ್ಯಕ್ಷ ಬಿ.ಕೆ.ಮಂಜಪ್ಪ ಮಾತನಾಡಿದರು. ನಾಡಗೌಡ ಕುಮಾರಸ್ವಾಮಿ, ಕಾಂಗ್ರೆಸ್ ಮುಖಂಡರಾದ ಸುದರ್ಶನ್, ಸಣ್ಣಯ್ಯ, ರಾಜಯ್ಯ, ಹುಚ್ಚೇಗೌಡ, ತಿಮ್ಮಪ್ಪ, ಸಾಲಿಗ್ರಾಮ ತಾಲೂಕು ಮೀನುಗಾರರ ಸಂಘದ ಅಧ್ಯಕ್ಷ ಉದೇಶ್, ಗ್ರಾಮದ ಮುಖಂಡರಾದ ಕೃಷ್ಣ, ಸಾದೀಕ್ ಖಾನ್, ರಂಗಯ್ಯ ನೂತನ ಅಧ್ಯಕ್ಷರಿಗೆ ಹಾರಹಾಕಿ ಅಭಿನಂದಿಸಿದರು.

ಸರ್ಕಾರದಿಂದ ನಗರಸಭೆ ಸದಸ್ಯರ ಅಧಿಕಾರ ಮೊಟಕು



ಸುದ್ದಿಗೋಷ್ಠಿಯಲ್ಲಿ ನಗರಸಭೆ ಮಾಜಿ ಅಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ ಮಾತನಾಡಿದರು.

ನಂಜನಗೂಡು, ಜು.8– ಕಳೆದ 16 ತಿಂಗಳಿಂದ ನಗರಸಭೆ ಅಧ್ಯಕ್ಷರ ಚುನಾವಣೆಗೆ ಮೀಸಲಾತಿ ನಿಗದಿಪಡಿಸುವಲ್ಲಿ ವಿಳಂಬ ನೀತಿ ಅನುಸರಿಸುವ ಮೂಲಕ ರಾಜ್ಯ ಸರ್ಕಾರ ನಗರಸಭೆ ಸದಸ್ಯರ ಅಧಿಕಾರ ಮೊಟಕುಗೊಳಿಸಿ, ಅಧಿಕಾರಿಗಳ ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ನೀಡುತ್ತಿದೆ ಎಂದು ಬಿಜೆಪಿ ಮುಖಂಡ, ನಗರಸಭೆ ಮಾಜಿ ಅಧ್ಯಕ್ಷ ಹೆಚ್.ಎಸ್. ಮಹದೇವಸ್ವಾಮಿ ಆರೋಪಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಬಿಜೆಪಿ ಸರ್ಕಾರದಲ್ಲಿ ಶಾಸಕರಾಗಿದ್ದ ಹರ್ಷವರ್ಧನ್ ನಗರೋತ್ಥಾನ ಯೋಜನೆ ಅಡಿ ತಂದಿದ್ದ 30 ಕೋಟಿ ಅನುದಾನದಲ್ಲಿ ಟೆಂಡರ್ ನಡೆಸಿ ಗುತ್ತಿಗೆ ಪಡೆದಿದ್ದ ಗುತ್ತಿಗೆದಾರರು ಒಂದು ವರ್ಷವಾದರೂ ಕಾಮಗಾರಿ ಆರಂಭಿಸಿಲ್ಲ. 1.10 ಕೋಟಿ ವೆಚ್ಚದಲ್ಲಿ ವಿದ್ಯುತ್ ಚಿತಾಗಾರ ನಿರ್ಮಾಣ ಕಾಮಗಾರಿ ನೆನೆಗುದಿಗೆ ಬಿದ್ದಿದೆ. ನಗರಸಭೆಯಲ್ಲಿ ಅಧಿಕಾರಿಗಳು ಸಾರ್ವಜನಿಕರ ಕೆಲಸಗಳಿಗೆ ಮಧ್ಯವರ್ತಿಗಳನ್ನು ನೇಮಿಸಿಕೊಂಡಿದ್ದು, ನಗರಸಭೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಸರ್ಕಾರ ಶೀಘ್ರ ನಗರಸಭೆ ಅಧ್ಯಕ್ಷರ ಚುನಾವಣೆಗೆ ದಿನಾಂಕ ನಿಗದಿಪಡಿಸದಿದ್ದರೆ ನಗರಸಭೆಯ ಜೆಡಿಎಸ್ ಹಾಗೂ ಬಿಜೆಪಿ ಸದಸ್ಯರು ಒಟ್ಟಾಗಿ ನಗರಸಭೆ ಮುಂಭಾಗ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಬಿಜೆಪಿ ನಗರ ಘಟಕದ ಅಧ್ಯಕ್ಷ ಸಿದ್ದರಾಜು ಮಾತನಾಡಿ, ಕಳೆದ ವಾರ ನಗರಸಭೆ ನಿರ್ಲಕ್ಷ್ಯದಿಂದಾಗಿ 1 ವಾರ ನೀರಿನ ಸರಬರಾಜನ್ನು ನಿಲ್ಲಿಸಲಾಗಿತ್ತು. ಸ್ವಚ್ಛತೆ, ನೈರ್ಮಲ್ಯದಿಂದಾಗಿ ಕುಡಿಯುವ ನೀರು ಕಲುಷಿತಗೊಂಡಿತ್ತು. ಜಿಲ್ಲಾಧಿಕಾರಿ ಭೇಟಿ ನೀಡಿ ಪರಿಶೀಲನೆ ನಡೆಸಿದರೂ, ಶಾಸಕ ದರ್ಶನ್ ಸಮಸ್ಯೆಗೆ ಸ್ಪಂದಿಸಲಿಲ್ಲ. ಕಳೆದ ಬಿಜೆಪಿ ಆಡಳಿತದಲ್ಲಿ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಬೆಳ್ಳಿರಥ ನಿರ್ಮಾಣಕ್ಕಾಗಿ ಹಣ ಬಿಡುಗಡೆಯಾಗಿದ್ದರೂ ಬೆಳ್ಳಿರಥ ನಿರ್ಮಾಣವಾಗಲಿಲ್ಲ. ಭಕ್ತರ ಅನುಕೂಲಕ್ಕಾಗಿ 100 ಕೊಠಡಿಗಳ ವಸತಿ ಗೃಹ ನಿರ್ಮಾಣ ಕಾಮಗಾರಿಗೆ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೂಮಿಪೂಜೆ ನಡೆಸಿದ್ದರು. ಶಾಸಕರು ಖಾಸಗಿ ಲಾಡ್ಜ್ ಮಾಲೀಕರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಕುಂಟು ನೆಪ ತೆಗೆದು ಕಾಮಗಾರಿಗೆ ಅಡ್ಡಿಯಾಗಿದ್ದಾರೆ. ನಗರಸಭೆ ನೂತನ ಕಟ್ಟಡ ನಿರ್ಮಾಣಕ್ಕಾಗಿ 4 ಕೋಟಿ ಹಣ ಮೀಸಲಿಡಲಾಗಿದೆ. ಮಿನಿ ವಿಧಾನಸೌಧದ ಬಳಿ ನಗರಸಭೆ ಕಟ್ಟಡಕ್ಕಾಗಿ 1.5 ಎಕರೆ ಜಾಗ ಪಡೆದುಕೊಳ್ಳುವಲ್ಲಿ ಶಾಸಕರು ಉತ್ಸಾಹ ತೋರುತ್ತಿಲ್ಲ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ನಗರಸಭೆ ಸದಸ್ಯರಾದ ಕಪಿಲೇಶ್, ಮಹದೇವಪ್ರಸಾದ್, ನಾಗಮಣಿ, ಮಹದೇವಮ್ಮ, ವಿಜಯಲಕ್ಷ್ಮಿ, ಮಂಜುಳ, ಮುಖಂಡರಾದ ಶಂಕರಪ್ಪ, ಅನಂತ್, ಕುಮಾರ್, ಮುರುಗೇಶ್, ಚಂದ್ರು ಉಪಸ್ಥಿತರಿದ್ದರು.

ಕಾರಂಜಿಯಂತೆ ಚಿಮ್ಮಿದ ಪೈಪ್‌ಲೈನ್ ನೀರು

ಪಿರಿಯಾಪಟ್ಟಣ ತಾಲೂಕಿನ ಮುತ್ತಿನ ಮುಳಸೋಗೆಯಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಪ್ರಾಯೋಗಿಕವಾಗಿ ನೀರು ಹರಿಸುವ ವೇಳೆ ಪೈಪ್‌ಲೈನ್ ಒಡೆದು ಕಾರಂಜಿಯಂತೆ ನೀರು ಚಿಮ್ಮುತ್ತಿರುವುದು.



ಹಳ್ಳಿಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ: ಶಾಸಕ ದರ್ಶನ್



ಸಿಸಿ ರಸ್ತೆ, ಚರಂಡಿ ಹಾಗೂ ಶಾಲಾ ಕೊಠಡಿ ನಿರ್ಮಾಣಕ್ಕೆ ಶಾಸಕ ದರ್ಶನ್ ಚಾಲನೆ ನೀಡಿದರು.

ಮಲ್ಕುಂಡಿ, ಜು.8– ಗ್ರಾಮೀಣ ಭಾಗದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಶಾಸಕ ದರ್ಶನ್ ತಿಳಿಸಿದರು.

ಸಮೀಪದ ಕೆಲ್ಲೂಪುರದಲ್ಲಿ 15 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿ, ಚನ್ನಪಟ್ಟಣ ಗ್ರಾಮ ದಲ್ಲಿ 10.60 ಲಕ್ಷ ರೂ. ವೆಚ್ಚದ ಶಾಲಾ ಕೊಠಡಿ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ರಸ್ತೆ ಅಭಿವೃದ್ಧಿ ಪಡಿಸಲು ಚಾಲನೆ ನೀಡಲಾಗಿದೆ. ಹೀಗಾಗಿ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ಮಾಡಬೇಕು. ಗ್ರಾಮೀಣ ಭಾಗದಲ್ಲಿ ಯಾವುದೇ ಸಮಸ್ಯೆಗಳು ಇದ್ದರೂ ನನ್ನ ಗಮನಕ್ಕೆ ತನ್ನಿ, ಹಂತ ಹಂತವಾಗಿ ಬಗೆಹರಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಗ್ರಾಪಂ ಅಧ್ಯಕ್ಷೆ ತಾಯಮ್ಮ, ಉಪಾಧ್ಯಕ್ಷ ಮಹದೇವಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಜಿಪಂ ಮಾಜಿ ಸದಸ್ಯ ಕೆ. ಮಾರುತಿ, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್ ಕುಮಾರ್, ಅಭಿನಂದನ್ ಪಾಟೀಲ್, ಜಯರಾಂ, ಮಣಿಕಂಠ, ನೀರಾವರಿ ಇಲಾಖೆ ಅಧಿಕಾರಿ ಕೃಷ್ಣ, ಇಂಜಿನಿಯರ್ ಯಶವಂತ್ ಇದ್ದರು.

ವಿದ್ಯಾರ್ಥಿಗಳು ಗುರಿ ಸಾಧನೆ ಮೂಲಕ ಸಮಾಜಕ್ಕೆ ಕೀರ್ತಿ ತನ್ನಿ

ದೇವನೂರು ಶ್ರೀಗುರುಮಲ್ಲೇಶ್ವರ ಮಠದ ರಾಜಶೇಖರ ಸ್ವಾಮೀಜಿ ಸಲಹೆ



ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ತಿ.ನರಸೀಪುರ, ಜು.8– ವೀರಶೈವ ಲಿಂಗಾಯತ ಸಮಾಜದ ವಿದ್ಯಾರ್ಥಿಗಳು ಹಾಗೂ ಯುವ ಜನರು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು. ಪ್ರತಿಭಾ ಪುರಸ್ಕಾರ ಪಡೆದವರೆಲ್ಲರೂ ಉನ್ನತ ಧ್ಯೇಯ, ಗುರಿ, ಸಾಧನೆಯ ಮೂಲಕ ಹೆತ್ತವರಿಗೆ, ವಿದ್ಯೆ ಕಲಿಸಿದ ಗುರುಗಳಿಗೆ ಹಾಗೂ ಸಮಾಜಕ್ಕೆ ಕೀರ್ತಿ ತರಬೇಕು ಎಂದು ದೇವನೂರು ಶ್ರೀಗುರುಮಲ್ಲೇಶ್ವರ ಮಹಾಸಂಸ್ಥಾನ ಮಠದ ರಾಜಶೇಖರ ಸ್ವಾಮೀಜಿ ಸಲಹೆ ನೀಡಿದರು.

ವೀರಶೈವ ಲಿಂಗಾಯತ ವಿದ್ಯಾರ್ಥಿ ಪ್ರೋತ್ಸಾಹಕರ ವೇದಿಕೆ ವತಿಯಿಂದ ತಾಲೂಕಿನ ಹೊಸೂರುಹುಂಡಿ ಗುರುಮಲ್ಲೇಶ್ವರ ಭಿಕ್ಷದ ಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ದಾಸೋಹ ಚಕ್ರವರ್ತಿ ಶ್ರೀಗುರುಮಲ್ಲೇಶ್ವರ ಸಂಸ್ಮರಣೋತ್ಸವ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ವೀರಶೈವ ಲಿಂಗಾಯತ ವಿದ್ಯಾರ್ಥಿ ಪ್ರೋತ್ಸಾಹಕರ ವೇದಿಕೆಯಿಂದ ಪ್ರತಿಭಾ ಪುರಸ್ಕಾರ ನೀಡುತ್ತಿರುವುದು ಸತ್ಸಂಪ್ರದಾಯ. ಬಸವಣ್ಣನವರು 12ನೇ ಶತಮಾನದಲ್ಲೇ ಪ್ರಜಾಪ್ರಭುತ್ವದ ಪರಿಕಲ್ಪನೆಯ ಬೀಜ ಬಿತ್ತಿದವರು. ಬಸವಣ್ಣ ಕಾರ್ಯ ಮಾಡಿ ಸಾಧಿಸಿ ತೋರಿದವರು. ಮಹಿಳೆಯರಿಗೂ ಸಮಾನ ಸ್ಥಾನಮಾನದ ಮೂಲಕ ಆಗಲೇ ಬದಲಾವಣೆಗೆ ಮುನ್ನುಡಿ ಬರೆದವರು. ಬಸವಣ್ಣನವರು ಹಾಕಿಕೊಟ್ಟ ಹಾದಿಯಲ್ಲೇ ಪ್ರಜಾಪ್ರಭುತ್ವ ರಚನೆಯಾಗಿದೆ ಎಂದರು.

ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರೆ ಉಳಿದ ವಿದ್ಯಾರ್ಥಿಗಳಿಗೂ ಸ್ಫೂರ್ತಿಯಾಗುತ್ತದೆ. ಇದರಿಂದ ಕಷ್ಟಪಟ್ಟು ಓದುವ ವಿದ್ಯಾರ್ಥಿಗಳು ಯಶಸ್ವಿಯಾಗುತ್ತಾರೆ ಎಂದರು.

ಚಿದರವಳ್ಳಿ ಪಾರಮಾರ್ಥಿಕ ಗವಿಮಠದ ಶ್ರೀಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವುದರೊಂದಿಗೆ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುವುದು ಹಾಗೂ ಅವರು ಇನ್ನಷ್ಟು ಸಾಧನೆ ಮಾಡುವಂತೆ ಪ್ರೋತ್ಸಾಹಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರಬೇಕು. ಪರಿಶ್ರಮ, ಶ್ರದ್ಧೆ ಮತ್ತು ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡುವ ಗುಣಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು. ಯಾರಿಂದಲೋ ನಾವು ಉದ್ಧಾರವಾಗುವುದಿಲ್ಲ ನಮ್ಮ ಉದ್ಧಾರಕ್ಕೆ ನಾವೇ ಶ್ರಮಿಸಬೇಕು. ನಮ್ಮೊಳಗಿನ ಮಿತ್ರನನ್ನು ಪೋಷಿಸಿ, ನಮ್ಮೊಳಗಿನ ಶತ್ರುವನ್ನು ಮಣಿಸಬೇಕು. ಪ್ರಯತ್ನವೆಂಬುದು ನಿರಂತರವಾಗಿರಲಿ ಎಂದು ನುಡಿದರು. ಈ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿರುವ ತಾಲೂಕಿನ 40ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿ, ವಿದ್ಯಾರ್ಥಿನಿಯ ರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ತಾಪಂ ಮಾಜಿ ಸದಸ್ಯ ಗುರುಮೂರ್ತಿ, ಕಾವೇರಿಪುರ ಮಲ್ಲಣ್ಣ, ನಿಲಸೋಗೆ ನಂಜುಂಡಸ್ವಾಮಿ, ಕೆಇಬಿ ಸಿದ್ದಲಿಂಗ ಸ್ವಾಮಿ, ಶಂಭುದೇವನಪುರ ಸುಗಂಧರಾಜು, ಎಸ್‌ಎಂಆರ್ ಪ್ರಕಾಶ್, ಟಿಎಪಿಸಿಎಂಎಸ್ ಉಪಾಧ್ಯಕ್ಷ ಮಲ್ಲಣ್ಣ, ಪೂಜಿತ್ ಮೆಡಿಕಲ್ ಕುಮಾರ್, ಸೇತುವೆ ಮಠದ ಸಹಜಾನಂದ ಸ್ವಾಮೀಜಿ, ಬೆನಕನಹಳ್ಳಿ ಮಠದ ಮಹದೇವ ಸ್ವಾಮೀಜಿ, ಬಿಳಿಗೆರೆಹುಂಡಿ ಗುರುಸ್ವಾಮಿ, ನಿಲಸೋಗೆ ಮಲ್ಲಪ್ಪಸ್ವಾಮಿ, ಕೊತ್ತೇಗಾಲ ನಾಗಪ್ಪಸ್ವಾಮಿ, ವಕೀಲ ಜ್ಞಾನೇಂದ್ರ ಮೂರ್ತಿ, ಉಪನ್ಯಾಸಕ ಮೂಗೂರು ಕುಮಾರ ಸ್ವಾಮಿ, ಪುರಸಭಾ ಸದಸ್ಯೆ ರೂಪಾ, ಸಮಾಜ ಸೇವಕ ರತ್ನಶೇಖರ್, ಅಂಗಡಿ ನಾಗೇಶ್, ತೊಂಟೇಶ್ ಮತ್ತಿತರಿದ್ದರು.

ಮಾಡುವ ಕೆಲಸದಲ್ಲಿ ಶ್ರದ್ಧೆ, ನಿಷ್ಠೆ ಮತ್ತು ನೈತಿಕ ಮೌಲ್ಯ ಇರಬೇಕು. ಮರಳಿ ಯತ್ನವ ಮಾಡು ಎಂಬ ಮಾತಿನಂತೆ ನಿರಂತರ ಪ್ರಯತ್ನದಿಂದ ಮಾತ್ರ ಯಶಸ್ಸು ಸಿಗಬಲ್ಲದು. ಅದರ ಜೊತೆಗೆ ಜೀವನದ ಸವಾಲನ್ನು ಎದುರಿಸುವ ಶಕ್ತಿ, ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಸಾಧನೆಯ ಮೆಟ್ಟಿಲನ್ನು ಏರುವ ತುಡಿತ ನಮ್ಮಲ್ಲಿರಬೇಕು. ನಮ್ಮ ಸಾಧನೆ ಮುಂದಿನ ಜನಾಂಗಕ್ಕೆ ಪ್ರೇರಣೆಯಾಗಬೇಕು.

-ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ, ಹಲವಾರ ಮುಡುಕನಪುರ ಮಠ.

ಕೆ.ಆರ್.ಕ್ಷೇತ್ರ ವ್ಯಾಪ್ತಿ ಬಡಾವಣೆಗಳಲ್ಲಿ ಸಂಸದ ಯದುವೀರ್ ಯಾತ್ರೆ

ಜನರ ಭೇಟಿಗೆ ಅನುಕೂಲವಾಗುವಂತೆ ಕಾಡಾ ಕಚೇರಿ ಆವರಣದಲ್ಲಿ 'ಸಂಸದರ ಕಚೇರಿ' ಪ್ರಾರಂಭ

ಮೈಸೂರು, ಜು.8(ಎಸ್‌ಪಿಎನ್)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ, ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೆ.ಆರ್.ಕ್ಷೇತ್ರ ವ್ಯಾಪ್ತಿಯ ವಿವಿಧ ಬಡಾವಣೆಗಳಿಗೆ ತೆರಳಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು.

ಕೆ.ಆರ್.ಕ್ಷೇತ್ರ ವ್ಯಾಪ್ತಿಯ ತೊಣಚಿಕೊಪ್ಪಲಿನ ಗಣೇಶ್ ಭಂಡಾರ್ ಬಳಿ ಕನಕದಾಸ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ನಂತರ ಕುವೆಂಪುನಗರದ ನವಿಲು ರಸ್ತೆಯ ರಾಘವೇಂದ್ರ ಸ್ವಾಮಿ ದೇವಸ್ಥಾನ ಮತ್ತು ಶಾಂತಿಸಾಗರ್ ಹೋಟೆಲ್ ಮುಂಭಾಗದ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ, ಮತದಾರರನ್ನುದ್ದೇಶಿಸಿ ಮಾತನಾಡಿದರು. ವಿವೇಕಾನಂದನಗರ ವೃತ್ತ, ಬೆಮೆಲ್ ಕಮಾನ್ ಹಾಗೂ ಚಿನ್ನಗಿರಿ ಕೊಪ್ಪಲಿಗೆ ತೆರಳಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಸಂಸದರು, ಮೈಸೂರು ನಗರದ ನಾಗರಿಕರ ಸುಲಭ ಭೇಟಿಗೆ ಕಾಡಾ ಕಚೇರಿ ಆವರಣದಲ್ಲಿ ಸಂಸದರ ಕಚೇರಿ ತೆರೆದು ವಾರದಲ್ಲಿ ಎರಡು ದಿನ ಕುಂದುಕೊರತೆ ಆಲಿಸುತ್ತೇನೆ. ಅಲ್ಲದೆ, ಹುಣಸೂರು, ಪಿರಿಯಾಪಟ್ಟಣ ಜನರ ಭೇಟಿಯಾಗಲು ಆಯಾಯ ತಾಲೂಕಿನಲ್ಲೇ ಸಂಸದರ ಕಚೇರಿ ತೆರೆಯುವ ಚಿಂತನೆ ಇದೆ ಎಂದರು.

ಮೈಸೂರು–ಕೊಡಗು ಕ್ಷೇತ್ರದ ಮತದಾರರು, ಒಂದು ಲಕ್ಷದ 29 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ನನ್ನನ್ನು ಗೆಲ್ಲಿಸಿದ್ದೀರಿ. ಅದರಲ್ಲಿ ಕೆ.ಆರ್.ಕ್ಷೇತ್ರದಲ್ಲಿ ಸುಮಾರು 56 ಸಾವಿರ ಅಧಿಕ ಮತಗಳನ್ನು ನೀಡಿ, ನನ್ನ ಗೆಲುವಿಗೆ ಸಹಕರಿಸಿದ್ದೀರಿ. ನಿಮ್ಮ ಸಮಸ್ಯೆಗಳಿಗೆ ಸದಾ ದನಿಯಾಗಿ ಕೆಲಸ ಮಾಡುತ್ತೇನೆ. ಅಂತೆಯೆ ಹಿಂದಿನ ಸಂಸದರ ಅಭಿವೃದ್ಧಿ ಕೆಲಸಗಳನ್ನು ಮುಂದುವರೆಸುತ್ತ, ಹೊಸ ಕೆಲಸಗಳಿಗೂ ಆದ್ಯತೆ ನೀಡುತ್ತೇನೆ ಎಂದು ಭರವಸೆ ನೀಡಿದರು.

ಶ್ರೀ ಚಾಮುಂಡೇಶ್ವರಿ ತಾಯಿ, ಕನ್ನಡಾಂಬೆ ಹಾಗೂ ಪ್ರಭು ಶ್ರೀರಾಮಚಂದ್ರರ ಆಶೀರ್ವಾದದಿಂದ ಮೊದಲ ಪ್ರಯತ್ನದಲ್ಲೇ ಸಂಸದನಾಗಿ ಆಯ್ಕೆಯಾಗಿದ್ದೇನೆ. ಜೊತೆಗೆ ನಮ್ಮ ಪೂರ್ವಜರ ಆಶೀರ್ವಾದವೂ ಇದ್ದು, ನಿಮ್ಮೆಲ್ಲರ ಸಹಕಾರದಿಂದ ಲಕ್ಷಕ್ಕೂ ಅಧಿಕ ಮತಗಳಿಂದ ಗೆಲುವು ಪಡೆಯಲು ಸಾಧ್ಯವಾಯಿತು.

ಇದಕ್ಕಾಗಿ ನಿಮ್ಮೆಲ್ಲರಿಗೂ ಆಭಾರಿಯಾಗಿ, ಕೃತಜ್ಞತೆ ಸಲ್ಲಿಸಲು ನಿಮ್ಮ ಮನೆಯ ಬಾಗಿಲಿಗೆ ಬಂದಿದ್ದೇನೆ. ಮುಂದಿನ ದಿನಗಳಲ್ಲಿ ಬಡಾವಣೆಯ ಯಾವುದೇ ಕುಂದು–ಕೊರತೆಗಳನ್ನು ಬಗೆಹರಿಸಿಕೊಳ್ಳಲು ನನ್ನನ್ನು ನೇರವಾಗಿ ಸಂಸದರ ಕಚೇರಿಯಲ್ಲಿ ಭೇಟಿ ಮಾಡಬಹುದು ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಯದುವೀರರು ರಾಜವಂಶಸ್ಥರು, ಅವರು ಸಂಸದರಾಗಿ ಆಯ್ಕೆಯಾದರೆ, ಜನಸಾಮಾನ್ಯರ ಜೊತೆ ಬೆರೆಯುವುದಿಲ್ಲ ಎಂಬ ಅನುಮಾನ ಚುನಾವಣೆಗೂ ಮುನ್ನ ಮತದಾರರಲ್ಲಿತ್ತು. ಈ ಅನುಮಾನವನ್ನು ಹೋಗಲಾಡಿಸಲು ಇಂದು ಸಂಸದ ಯದುವೀರರೇ ಮತದಾರರ ಬಳಿ ಬಂದು ಕೃತಜ್ಞತೆ ಸಲ್ಲಿಸುತ್ತಿದ್ದಾರೆ. ಬರುವ ದಿನಗಳಲ್ಲಿ ಕೆ.ಆರ್.ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಬಿಡುಗಡೆಗೆ ಮನವಿ ಮಾಡಲಾಗುವುದು. ಅಲ್ಲದೆ, ಕೆ.ಆರ್.ಕ್ಷೇತ್ರ ವ್ಯಾಪ್ತಿಯಲ್ಲಿ ಅತೀ ಹೆಚ್ಚು ನಗರಪಾಲಿಕೆ ಸದಸ್ಯರ ಗೆಲುವಿಗೂ ಸಹಕಾರ ಪಡೆಯಲಾಗುವುದು ಎಂದರು.

ಈ ವೇಳೆ ಮಾಜಿ ಮೇಯರ್ ಶಿವಕುಮಾರ್, ಮಂಡಲ ಅಧ್ಯಕ್ಷ ರಘು ಅರಸ್, ನಗರಪಾಲಿಕೆ ಮಾಜಿ ಸದಸ್ಯರಾದ ಜೆಎಸ್‌ಜಗದೀಶ್, ರಮೇಶ್, ಚಂಪಕ, ಗೀತಾಶ್ರೀ, ಯೋಗಾನಂದ, ಕೇಬಲ್ ರಮೇಶ್, ಶಂಕರ್, ಜಗದೀಶ್, ಮುಖಂಡರಾದ ಜೋಗಿ ಮಂಜು, ಅಮ್ಮ ಸಂತೋಷ್, ರಾಕೇಶ್ ಗೌಡ, ರಾಜೇಶ್, ಜಯಶಂಕರ್, ನಿಶಾಂತ್, ಹೇಮಂತ್, ಗಿರೀಶ್, ಸತೀಶ್, ಮಂಜುನಾಥ್ ಸೇರಿದಂತೆ ಇತರರಿದ್ದರು.



ಸಂಸದ, ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೆ.ಆರ್.ಕ್ಷೇತ್ರ ವ್ಯಾಪ್ತಿಯ ವಿವಿಧ ಬಡಾವಣೆಗಳಿಗೆ ತೆರಳಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಲ್ಕಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಿಗರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕಿಲ್ (ಹಿಂ)	4 ಪ್ರದರ್ಶನಗಳು
ಸಂಗಂ	
ಕಾದಾಡಿ (ಕ)	4 ಪ್ರದರ್ಶನಗಳು
ಲಿಡೋ	
ಜಿಗರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗರುಡನ್ (ತ)	4 ಪ್ರದರ್ಶನಗಳು
ಪ್ರಭಾ	
ಕಾಗದ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.11ಕ್ಕೆ, ಸಂ.4.30ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.35ಕ್ಕೆ, ಡೆಸ್ಪಿಕಬಲ್ ಮಿ 4 (3ಡಿ) (ಇಂ): ಮ.1.45ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4.05ಕ್ಕೆ, ಕಿಲ್ (ಹಿಂ): ರಾ.7.35ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ) (ತೆ): ಬೆ.11.45ಕ್ಕೆ, ಕಲ್ಕಿ 2898 ಎಡಿ (ಕ): ಮ.3.15ಕ್ಕೆ, ಕಲ್ಕಿ 2898 ಎಡಿ (3ಡಿ) (ಹಿಂ): ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಕಿಲ್ (ಹಿಂ): ಬೆ.11, ಕಲ್ಕಿ 2898 ಎಡಿ (3ಡಿ) (ತೆ): ಮ.1.15ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ಹಿಂ): ಬೆ.11.15ಕ್ಕೆ, ಸಂ.6.45ಕ್ಕೆ, ಕಲ್ಕಿ 2898 ಎಡಿ (3ಡಿ) (ತೆ): ಮ.3ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.10.15ಕ್ಕೆ, ಮ.2ಕ್ಕೆ, ಸಂ.5.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ತೆ): ಬೆ.10.45ಕ್ಕೆ, ಸಂ.6.15ಕ್ಕೆ, ಕಲ್ಕಿ 2898 ಎಡಿ (ಹಿಂ): ಮ.2.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.10.40ಕ್ಕೆ, ಮ.3.20ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಕಿಲ್ (ಹಿಂ): ಮ.12.55ಕ್ಕೆ, ಸಂ.5.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಲವ್ ಲಿ (ಕ): ಮ.1ಕ್ಕೆ, ಕಾಗದ (ಕ): ಸಂ.4ಕ್ಕೆ, ಬಿಗ್ ಬೆನ್ (ಮ): ಸಂ.6.55ಕ್ಕೆ, ಕುಂಡಲ ಪುರಾಣಂ (ಮ): ರಾ.9.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ(3ಡಿ) (ತೆ): ಮ.2.30ಕ್ಕೆ, ರಾ.9.30ಕ್ಕೆ, ಕಲ್ಕಿ 2898 ಎಡಿ (ಕ): ಸಂ.6ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 4	ಕಲ್ಕಿ 2898 ಎಡಿ (3ಡಿ) (ತೆ): ಸಂ.4ಕ್ಕೆ, ರಾ.7.25ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಯುವ ಜನರಿಗೆ ಉದ್ಯಮ ತರಬೇತಿ ಕಾರ್ಯಾಗಾರ

ಮೈಸೂರು, ಜು.8(ಎಂಟಿವೈ)– ಭೂಮಿ ಕಳೆದುಕೊಂಡು ಒಕ್ಕಲುತನ ಬಿಟ್ಟು ಕೂಲಿ ಕೆಲಸ ಅವಲಂಬಿಸಿರುವ ಯುವ ಜನರನ್ನು ಕಡಿಮೆ ಬಂಡವಾಳದಲ್ಲಿ ಉದ್ಯಮಿಗಳಾಗಿ ರೂಪಿಸಲು ತರಬೇತಿ ಕಾರ್ಯಾಗಾರ ಏರ್ಪಡಿಸಲಾಗಿದೆ ಎಂದು ಫಸ್ಟ್ ಸರ್ಕಲ್ ಸಂಸ್ಥೆಯ ಅಧ್ಯಕ್ಷ ಕಾರ್ತಿಕ್‌ಗೌಡ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಧ ಕಾರಣಗಳಿಂದ ಭೂಮಿ ಮಾರಾಟ ಮಾಡಿ ನಗರ ಪ್ರದೇಶಗಳಲ್ಲಿ ಕೂಲಿ ಕೆಲಸ ಅವಲಂಬಿಸಿರುವ ಯುವ ಜನರು ಕಡಿಮೆ ಬಂಡವಾಳದಲ್ಲಿ ಉದ್ಯಮಿಗಳಾಗಿ ರೂಪುಗೊಳ್ಳುವ ನಿಟ್ಟಿನಲ್ಲಿ ಆರು ತಿಂಗಳ ತರಬೇತಿ ಕಾರ್ಯಾಗಾರ ನಡೆಸಿ, ಮಾರ್ಗದರ್ಶನ ನೀಡಲಾಗುತ್ತದೆ. ಅದಕ್ಕಾಗಿ ಜು.10ರಂದು ಸಂಜೆ 5.30ಕ್ಕೆ ಹುಣಸೂರು ರಸ್ತೆ ಹಿನಕಲ್‌ನಲ್ಲಿನ ಹೋಟೆಲ್ ಲಿ ರುಚಿ ಸಭಾಂಗಣದಲ್ಲಿ ತರಬೇತಿ ಕಾರ್ಯಾಗಾರ ಹಾಗೂ ನಾಡಪ್ರಭು ಸರ್ಕಲ್ ಮತ್ತು ಎಫ್‌ಸಿ ನೆಕ್ಸ್ಟ್ ಆ್ಯಪ್ ಬಿಡುಗಡೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮಾಜಿ ಸಂಸದ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಈ ಕಾರ್ಯಾಗಾರದಲ್ಲಿ ಉದ್ಯಮಿಗಳಾಗ ಬಯಸುವವರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ಮಾರ್ಗದರ್ಶನ ದೊರೆಯಲಿದೆ. ಉಚಿತ ತರಬೇತಿ ನೀಡಲಾಗುವುದು. 20 ರಿಂದ 30 ಲಕ್ಷ ರೂ. ಬಂಡವಾಳ ಹೂಡಿ ಯಶಸ್ವಿ ಉದ್ಯಮಿಗಳಾಗಿ ಹೊರಹೊಮ್ಮಲು ಅನುಸರಿಸಬೇಕಾದ ಕ್ರಮ, ಯಾವ ಉದ್ಯಮ ಆರಂಭಿಸಬೇಕು. ಯಾವ ಉದ್ದಿಮೆ ಲಾಭದಾಯಕ ಎಂಬ ಮಾಹಿತಿ ನೀಡಿ ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಫಸ್ಟ್ ಸರ್ಕಲ್ ಸಂಸ್ಥೆಯ ಪದಾಧಿಕಾರಿಗಳಾದ ಚಂದ್ರು ನರಸೇಗೌಡ, ಚೇತನ್, ರಘುರಾಂ, ಸುಧೀರ್ ಇದ್ದರು.

ಹಳೆ ನಿಶ್ಚಿತ ಪಿಂಚಣಿ ಜಾರಿಗೆ ಮುಖ್ಯಮಂತ್ರಿಗಳಿಗೆ ಮನವಿ

ಮೈಸೂರು, ಜು.8(ಎಸ್‌ಪಿಎನ್)– ಹಳೆಯ ನಿಶ್ಚಿತ ಪಿಂಚಣಿ(ಓಪಿಎಸ್) ಯೋಜನೆಯನ್ನು ಮರು ಜಾರಿಗೊಳಿಸುವಂತೆ ಒತ್ತಾಯಿಸಿ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ಜಿಲ್ಲಾ ಘಟಕದ ಪದಾಧಿಕಾರಿಗಳು, ಮೈಸೂರು ತಾಲೂಕು ತಹಸೀಲ್ದಾರ್ ಮಹೇಶ್‌ಕುಮಾರ್ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಅನುದಾನಿತ ಶಾಲಾ ಕಾಲೇಜು ಪಿಂಚಣಿ ವಂಚಿತ ನೌಕರರಿಗೆ ಹಳೆಯ ನಿಶ್ಚಿತ ಪಿಂಚಣಿ ಯೋಜನೆಯನ್ನು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಒಂದು ತಿಂಗಳಲ್ಲಿ ಜಾರಿಗೊಳಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಪ್ರಣಾಳಿಕೆ ಸಮಿತಿ ಅಧ್ಯಕ್ಷರಾಗಿದ್ದ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರು, ಈ ಹಿಂದೆ ಖುದ್ದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆ ಸಂದರ್ಭದಲ್ಲಿ ನೌಕರರಿಗೆ ಆಶ್ವಾಸನೆ ನೀಡಿದ್ದರು.

ಆದರೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 13 ತಿಂಗಳು ಕಳೆದರೂ ಹಳೆಯ ನಿಶ್ಚಿತ ಪಿಂಚಣಿ ಯೋಜನೆ ಜಾರಿಗೊಳಿಸಿಲ್ಲ. ಹಾಗಾಗಿ ಆದಷ್ಟು ಬೇಗನೆ ಓಪಿಎಸ್ ಜಾರಿಗೊಳಿಸುವಂತೆ ಒತ್ತಾಯಿಸಿ ಪದಾಧಿಕಾರಿಗಳು ಮನವಿ ಪತ್ರ ಸಲ್ಲಿಸಿದ್ದಾರೆ. ಈ ವೇಳೆ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ಪದಾಧಿಕಾರಿಗಳಾದ ಬಿ.ಆರ್.ಶಿವಕುಮಾರ್, ಸಿದ್ದೇಶ್ವರ ಪ್ರಸಾದ್, ಮಹೇಂದ್ರ, ಹಮೀದ್, ನಂದೀಶ್, ಚಂದನ್ ಕುಮಾರ್ ಉಪಸ್ಥಿತರಿದ್ದರು.


ರಾಜ್ಯ ಅನುದಾನಿತ ಶಾಲಾ ಕಾಲೇಜು ಪಿಂಚಣಿ ವಂಚಿತ ನೌಕರರ ಸಂಘದ ಪದಾಧಿಕಾರಿಗಳು ಮೈಸೂರು ತಾಲೂಕು ತಹಸೀಲ್ದಾರ್ ಮಹೇಶ್‌ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಡೆಂಗ್ಯೂ ಜ್ವರ ಸರ್ಕಾರಿ ಉಚಿತ ಆರೋಗ್ಯ ಯೋಜನೆಗಳಡಿ ಸೇರಿಸಲು ಆಗ್ರಹ



ಮೈಸೂರು, ಜು. 8– ಡೆಂಗ್ಯೂ ಜ್ವರ ದಿನೇದಿನೆ ವ್ಯಾಪಕವಾಗಿ ಹರಡುತ್ತಿದ್ದು, ಹಲವಾರು ರೋಗಿಗಳು ಈಗಾಗಲೇ ಸಾವುನೋವುಗಳಿಗೀಡಾಗಿದ್ದಾರೆ. ಡೆಂಗ್ಯೂ ಜ್ವರದ ಚಿಕಿತ್ಸೆಯನ್ನು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ, ಯಶಸ್ವಿನಿ ಮತ್ತು ಇಎಸ್‌ಐ ಉಚಿತ ಚಿಕಿತ್ಸಾ ಯೋಜನೆಗಳ ಪಟ್ಟಿಯಲ್ಲಿ ಸೇರಿಸಿ ಖಾಸಗಿ ವೈದ್ಯರು ಮತ್ತು ಆಸ್ಪತ್ರೆಗಳೂ ಸಹ ಚಿಕಿತ್ಸೆ ನೀಡಲು ಅವಕಾಶ ಮಾಡಿಕೊಡಬೇಕೆಂದು ಕರ್ನಾಟಕ ರಾಜ್ಯ ಸರ್ಕಾರ ಅನುದಾನಿತ ಖಾಸಗಿ ಆಸ್ಪತ್ರೆಗಳ ಸಂಘದ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಡೆಂಗ್ಯೂ ಜ್ವರದಲ್ಲಿ ಮೂರು ವಿಧಗಳಿದ್ದು, ರಕ್ತಸ್ರಾವದ ಡೆಂಗ್ಯೂ ಮತ್ತು ವಿಷಮತೆಯ ವಿಧಗಳ ಡೆಂಗ್ಯೂ ಜ್ವರ ರೋಗಿಯನ್ನು ಬಲಿ ತೆಗೆದುಕೊಳ್ಳುವ ಸಾಧ್ಯತೆ ಇರುವುದರಿಂದ ಡೆಂಗ್ಯೂ ಜ್ವರದ ಚಿಕಿತ್ಸೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಸರ್ಕಾರಿ ಆಸ್ಪತ್ರೆಗಳು ಸೇರಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನೂ ಒಳಗೊಂಡಂತೆ ಸುಮಾರು 4500 ವೈದ್ಯರುಗಳಿದ್ದು, ಇವರುಗಳಿಂದಲೇ 7 ಕೋಟಿ ಜನರಿಗೆ ಚಿಕಿತ್ಸೆ ನೀಡಲು ಸಾಧ್ಯವಿಲ್ಲವಾದ್ದರಿಂದ ಡೆಂಗ್ಯೂ ಜ್ವರಕ್ಕೆ ಸಮಂಜಸವಾದ ಚಿಕಿತ್ಸೆ ನೀಡಬೇಕಾದಲ್ಲಿ ಖಾಸಗಿ ಆರೋಗ್ಯ ಸೇವಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ರಾಜ್ಯದ ಸುಮಾರು 50 ಸಾವಿರಕ್ಕೂ ಅಧಿಕ ವೈದ್ಯರನ್ನು ಡೆಂಗ್ಯೂಗೆ ಚಿಕಿತ್ಸೆ ನೀಡಲು ಸೂಕ್ತವಾಗಿ ಬಳಸಿಕೊಂಡಲ್ಲಿ ಮಾತ್ರ ಡೆಂಗ್ಯೂವಿನ ಸಾವು ನೋವುಗಳನ್ನು ನಿಯಂತ್ರಿಸಲು ಸಾಧ್ಯ ಎಂದು ತಿಳಿಸಿದ್ದಾರೆ.

ಗಂಭೀರ ಸ್ವರೂಪದ ಡೆಂಗ್ಯೂಗೀಡಾಗಿ ರಕ್ತಸ್ರಾವ ಮತ್ತಿತರ ಅವಘಡಗಳಿಗೀಡಾದ ರೋಗಿಗಳಿಗೆ ಐಸಿಯು ಚಿಕಿತ್ಸೆ ಅತ್ಯವಶ್ಯಕವಿದ್ದು, ಸರ್ಕಾರಿ ಆರೋಗ್ಯ ಕ್ಷೇತ್ರದಲ್ಲಿರುವ ವಿರಳ ಐಸಿಯು ಚಿಕಿತ್ಸಾ ವ್ಯವಸ್ಥೆಯ ಜೊತೆಗೆ ಖಾಸಗಿ ಆಸ್ಪತ್ರೆಗಳಲ್ಲಿ ವ್ಯಾಪಕವಾಗಿರುವ ಐಸಿಯು ಚಿಕಿತ್ಸಾ ಸೌಲಭ್ಯವನ್ನು ಸಮರ್ಥವಾಗಿ ಬಳಸಿಕೊಂಡಲ್ಲಿ ಮಾತ್ರ ಸಾವು ನೋವುಗಳನ್ನು ತಡೆಗಟ್ಟಲು ಸಾಧ್ಯ ಎಂದು ತಿಳಿಸಿರುವ ಡಾ.ಯೋಗಣ್ಣ ಅವರು, ಐಸಿಯು ಚಿಕಿತ್ಸೆ ದುಬಾರಿಯಾಗಿದ್ದು, ಸಾಮಾನ್ಯ ಮನುಷ್ಯ ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಈ ಚಿಕಿತ್ಸೆಯನ್ನು ಭರಿಸಲು ಸಾಧ್ಯವಿಲ್ಲ ಆದುದರಿಂದ ಸರ್ಕಾರದ ಉಚಿತ ಆರೋಗ್ಯ ಸೌಲಭ್ಯಗಳಾದ ಆಯುಷ್ಮಾನ್ ಭಾರತ್, ಯಶಸ್ವಿನಿ, ಎಬಿವೈ ಯೋಜನೆಗಳಡಿಯಲ್ಲಿ ಡೆಂಗ್ಯೂ ಜ್ವರದ ಚಿಕಿತ್ಸೆಯನ್ನು ಈ ಹಿಂದೆ ಸೇರಿಸಿಲ್ಲವಾದ್ದರಿಂದ ಡೆಂಗ್ಯೂ ಜ್ವರದ ಚಿಕಿತ್ಸೆಯನ್ನೂ ಸಹ ಸರ್ಕಾರದ ಈ ಆರೋಗ್ಯ ಉಚಿತ ಸೇವಾ ಯೋಜನೆಗಳಡಿಯಲ್ಲಿ ತಂದು ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡಬೇಕೆಂದು ಡಾ.ಎಸ್.ಪಿ.ಯೋಗಣ್ಣ ಒತ್ತಾಯಿಸಿದ್ದಾರೆ.

ಪುರಿ ಜಗನ್ನಾಥ ರಥಯಾತ್ರೆ ವೇಳೆ ನೂಕುನುಗ್ಗಲು; ಇಬ್ಬರು ಸಾವು

ಒಡಿಶಾ: ಪುರಿ ಜಗನ್ನಾಥ ರಥಯಾತ್ರೆಯ ಸಂದರ್ಭದಲ್ಲಿ ನಡೆದ ಎರಡು ಪ್ರತ್ಯೇಕ ಘಟನೆಗಳಲ್ಲಿ ಇಬ್ಬರು ಸಾವನ್ನಪ್ಪಿದ್ದು, 130ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಭಾನುವಾರ ರಥಯಾತ್ರೆಯ ಸಂದರ್ಭದಲ್ಲಿ ಉಂಟಾದ ಕಾಲ್ತುಳಿತದಲ್ಲಿ ಬೋಲಂಗಿರ್ ಜಿಲ್ಲೆಯ ನಿವಾಸಿಯೊಬ್ಬರು ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಥವನ್ನು ಎಳೆಯುವಾಗ ಮೂರ್ಛೆ ಹೋಗಿದ್ದ ಆತನನ್ನು ಜಿಲ್ಲಾಸ್ಪತ್ರೆಗೆ ಕರೆದೊಯ್ದು ಸಿಪಿಆರ್ ಮಾಡಲಾಯಿತು. ಆದರೆ ಅಲ್ಲಿ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ ಎಂದು ಸೇಂಟ್ ಜಾನ್ ಆಂಬುಲೆನ್ಸ್ ಸೇವೆಯ ಸಹಾಯಕ ಕಮಾಂಡೆಂಟ್ ಸುಶಾಂತ್ ಕುಮಾರ್ ಪಟ್ನಾಯಕ್ ಹೇಳಿದರು.

ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿರುವ ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ, ಮೃತರ ಕುಟುಂಬಕ್ಕೆ 4 ಲಕ್ಷ ರೂಪಾಯಿ ಪರಿಹಾರ ಘೋಷಿಸಿದ್ದಾರೆ. ಗಾಯಗೊಂಡ ಭಕ್ತರಿಗೆ ಉತ್ತಮ ವೈದ್ಯಕೀಯ ಸೇವೆಯನ್ನು ಒದಗಿಸುವಂತೆ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಮತ್ತೊಂದು ಘಟನೆಯಲ್ಲಿ, ಭಾನುವಾರ ಝಾರ್ಸುಗುಡಾ ಜಿಲ್ಲೆಯಲ್ಲಿ ರಥಯಾತ್ರೆಯ ವೇಳೆ ರಥದ ಚಕ್ರಗಳ ಅಡಿಯಲ್ಲಿ ಭಕ್ತರೊಬ್ಬರು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಶ್ವಾಸಮತ ಗೆದ್ದ ಹೇಮಂತ್ ಸೊರೇನ್

ರಾಂಚಿ: ತೀವ್ರ ಕುತೂಹಲ ಕೆರಳಿಸಿದ್ದ ಜಾರ್ಖಂಡ್ ಸಿಎಂ ಹೇಮಂತ್ ಸೊರೇನ್ ವಿಶ್ವಾಸಮತ ಯಾಚನೆ ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ಹೇಮಂತ್ ಸೊರೇನ್ ವಿಶ್ವಾಸಮತ ಗೆದ್ದಿದ್ದಾರೆ. ಹೇಮಂತ್ ಸೊರೇನ್ ಸರ್ಕಾರವು ಜಾರ್ಖಂಡ್ ವಿಧಾನಸಭೆಯಲ್ಲಿ ವಿಶ್ವಾಸಮತ ಪರೀಕ್ಷೆಯಲ್ಲಿ ಗೆಲುವು ಸಾಧಿಸಿದ್ದು, 81 ಸಂಖ್ಯಾಬಲ ಇರುವ ವಿಧಾನಸಭೆಯಲ್ಲಿ 45 ಶಾಸಕರು ವಿಶ್ವಾಸಮತದ ಪರ ಮತ ಚಲಾಯಿಸಿದ್ದಾರೆ.

ಈ ಹಿಂದೆ ಅಕ್ರಮ ಹಣ ಸಿಕ್ಕ ಪ್ರಕರಣದಲ್ಲಿ ಜೈಲುಪಾಲಾಗಿದ್ದ ಹೇಮಂತ್ ಸೊರೇನ್ ತಮ್ಮ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ ಚಂಪೈ ಸೊರೇನ್‌ರನ್ನು ಸಿಎಂ ಆಗಿ ಆಯ್ಕೆ ಮಾಡಿದ್ದರು. ಇದೀಗ ಹೇಮಂತ್ ಸೊರೇನ್ ಜಾಮೀನಿನ ಮೇಲೆ ಹೊರಗೆ ಬಂದಿದ್ದು, ಬಂದ ಕೂಡಲೇ ಚಂಪೈ ಸೊರೇನ್ ರಾಜೀನಾಮೆ ನೀಡುವಂತೆ ಮಾಡಿ ತಾವು ಸಿಎಂ ಆಗಿ ಸರ್ಕಾರ ರಚನೆ ಮಾಡಿದ್ದರು. ಅದರಂತೆ ಇಂದು ವಿಶ್ವಾಸಮತ ಯಾಚನೆಯಲ್ಲೂ ಜಯಭೇರಿ ಬಾರಿಸಿದ್ದಾರೆ.

ಕಲಬುರಗಿ: ವಿರಕ್ತ ಮಠದ ಶ್ರೀ ಸಿದ್ದರಾಮ ಮಹಾಸ್ವಾಮಿಗಳು ವಿಧಿವಶ



ಕಲಬುರಗಿ: ಹೃದಯಾಘಾತವಾದ ಹಿನ್ನೆಲೆಯಲ್ಲಿ ವಿರಕ್ತ ಮಠದ ಶ್ರೀ ಸಿದ್ದರಾಮ ಮಹಾಸ್ವಾಮಿ (35) ವಿಧಿವಶರಾಗಿದ್ದಾರೆ.

ಕಲಬುರಗಿ ಜಿಲ್ಲೆ ಕಾಳಗಿ ತಾಲೂಕಿನ ರಟಕಲ್ ಗ್ರಾಮದಲ್ಲಿರುವ ವಿರಕ್ತ ಮಠದಲ್ಲಿ ಇಂದು ಮುಂಜಾನೆ ತೀವ್ರ ಹೃದಯಾಘಾತದಿಂದ ಮಹಾಸ್ವಾಮಿಗಳು ಇಹಲೋಕ ತ್ಯಜಿಸಿದ್ದಾರೆ. ಇಂದು ಸಂಜೆ 5 ಗಂಟೆಗೆ ರಟಕಲ್ ಗ್ರಾಮದಲ್ಲಿ ಧಾರ್ಮಿಕ ವಿಧಿ–ವಿಧಾನದ ಪ್ರಕಾರ ಶ್ರೀಗಳ ಅಂತ್ಯಕ್ರಿಯೆ ನಡೆಯಲಿದೆ. ಭಾನುವಾರ ರಟಕಲ್ ಗ್ರಾಮದಲ್ಲಿ ನಡೆದ ವಚನ ಸಂಗಮ ಕಾರ್ಯಕ್ರಮದಲ್ಲಿ ಶ್ರೀಗಳು ಭಾಗಿಯಾಗಿದ್ದರು.

ಮುಡಾ ಹಗರಣ; ಸಿಬಿಐ ತನಿಖೆಗೆ ಆಗ್ರಹ



ಮೈಸೂರು,ಜು.8(ಎಂಟಿವೈ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 50:50 ಅನುಪಾತದಡಿ ಅಕ್ರಮವಾಗಿ ನಿವೇಶನ ಹಂಚಿಕೆ ಮಾಡಿ ಸಾವಿರಾರು ಕೋಟಿ ರೂ. ಹಗರಣ ನಡೆಸಿರುವುದರಿಂದ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಮೈಸೂರು ಹೃದಯವಂತ ಕನ್ನಡಿಗರು ಸಂಘಟನೆ ಸಂಸ್ಥಾಪಕ ಅಧ್ಯಕ್ಷ ಡಿಪಿಕೆ ಪರಮೇಶ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಗರಣ ಮೈಸೂರು ನಗರಕ್ಕೆ ಕಪ್ಪುಚುಕ್ಕೆಯಂತಾಗಿದೆ. ಈ ಹಗರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳನ್ನು ಶಾಶ್ವತವಾಗಿ ವಜಾಗೊಳಿಸಬೇಕು. ರಾಜಕಾರಣಿಗಳ ಕೈವಾಡವಿದ್ದರೆ ಅಂತಹವರನ್ನು ಪಕ್ಷದಿಂದ ಉಚ್ಚಾಟಿಸಬೇಕು. ತಮ್ಮ ಕುಟುಂಬದ ವಿರುದ್ಧ ಕೇಳಿಬಂದಿರುವ ಆರೋಪ ಕುರಿತಂತೆ ಸಿಎಂ ಸಿದ್ದರಾಮಯ್ಯ ತನಿಖೆಯನ್ನು ಸಿಬಿಐಗೆ ವಹಿಸುವ ಮೂಲಕ ಕಳಂಕ ಮುಕ್ತರಾಗಬೇಕು ಎಂದು ಆಗ್ರಹಿಸಿದರು.


ಸುದ್ದಿಗೋಷ್ಠಿಯಲ್ಲಿ ಮೈಸೂರು ಹೃದಯವಂತ ಕನ್ನಡಿಗರು ಸಂಘಟನೆಯ ಪದಾಧಿಕಾರಿಗಳಾದ ರಾಜಶೇಖರ್, ಗಿರೀಶ್, ರವಿ, ರಾಜೇಂದ್ರ, ಮಂಜುನಾಥ್, ಯೋಗೇಶ್ ಇದ್ದರು.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಸೋಮವಾರ	108.80 ಅಡಿ
ಒಳಹರಿವು	8425 ಕ್ಯೂಸೆಕ್
ಹೊರಹರಿವು	567 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಸೋಮವಾರ	2281.89 ಅಡಿ
ಒಳಹರಿವು	4711 ಕ್ಯೂಸೆಕ್
ಹೊರಹರಿವು	2292 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಸೋಮವಾರ	2848.76 ಅಡಿ
ಒಳಹರಿವು	2394 ಕ್ಯೂಸೆಕ್
ಹೊರಹರಿವು	1000 ಕ್ಯೂಸೆಕ್


ಹಸಿರು ನಮ್ಮ ಉಸಿರು

ಉತ್ತಮ ಬದುಕಿಗೆ ರಂಗಭೂಮಿ ದಿವ್ಯೌಷಧ

ಜಾನಪದ ಅಕಾಡೆಮಿ ಸದಸ್ಯ ದೇವಾನಂದ ವರಪ್ರಸಾದ್ ಅಭಿಮತ

ಮೈಸೂರು, ಜು.8(ಎಂಟಿವೈ)– ಉತ್ತಮ ಬದುಕಿಗೆ ರಂಗಭೂಮಿ ದಿವ್ಯೌಷಧ ಎಂದು ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ದೇವಾನಂದ ವರಪ್ರಸಾದ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸಂಚಲನ ಮೈಸೂರು ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಸಂಚಲನ ಯುವ ರಂಗ ತರಬೇತಿ ಶಿಬಿರ –2024 ಅನ್ನು ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ರಂಗಭೂಮಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ವ್ಯಕ್ತಿತ್ವ ವಿಕಸನವಾಗಲಿದೆ. ಅಲ್ಲದೆ, ಬದುಕನ್ನು ರೂಪಿಸಿಕೊಳ್ಳುವುದನ್ನು ಹೇಳಿಕೊಡುವುದಲ್ಲದೆ, ಮೌಲ್ಯಯುತ ಬದುಕನ್ನು ಕಲಿಸುತ್ತದೆ. ಈ ಕಾರಣದಿಂದಲೇ ರಂಗಭೂಮಿ ಕ್ಷೇತ್ರಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ ಎಂದು ತಿಳಿಸಿದರು.



ಮೈಸೂರಿನ ಸಂಚಲನ ಮೈಸೂರು ಸಂಸ್ಥೆ ಆಯೋಜಿಸಿರುವ 'ಸಂಚಲನ ಯುವ ರಂಗ ತರಬೇತಿ ಶಿಬಿರ'ವನ್ನು ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ದೇವಾನಂದ ವರಪ್ರಸಾದ್ ಉದ್ಘಾಟಿಸಿದರು.

ಕರ್ನಾಟಕ ನಾಟಕ ಅಕಾಡೆಮಿ ಸದಸ್ಯೆ ಡಾ. ಜಾಹೀದ ಎಂ.ಎ ಮಾತನಾಡಿ, ಒಂದು ಸಾಧಾರಣ ಹಳ್ಳಿಯಿಂದ ಬಂದ, ಬಹಳ ಸಂಕೋಚ ಸ್ವಭಾವದ ನನ್ನಿಂದ ಏನೂ ಸಾಧಿಸಲಿಕ್ಕೆ ಸಾಧ್ಯವಿಲ್ಲ ಎಂದುಕೊಂಡಿದ್ದೆ. ಆದರೆ, ನನ್ನ ಬದುಕಿಗೆ ಮಾರ್ಗದರ್ಶಿಯಾಗಿ ಬಂದ ರಂಗಭೂಮಿ ನನ್ನನ್ನು ಕವಯತ್ರಿಯಾಗಿ, ನಟಿಯಾಗಿ, ನನ್ನ ಮಾತುಗಳನ್ನು ಸಮಾಜಕ್ಕೆ ತಲುಪಿಸುವ ಮಟ್ಟಕ್ಕೆ ಬೆಳೆಸಿದೆ ಎಂದು ಸ್ವ ಅನುಭವ ಹಂಚಿಕೊಂಡರು.

ಶಿಬಿರದಲ್ಲಿ ಭಾಗವಹಿಸುತ್ತಿರುವ ಯುವಕರು ರಂಗ ತರಬೇತಿ ಶಿಬಿರದಲ್ಲಿ ಪೂರ್ಣವಾಗಿ ತೊಡಗಿಕೊಳ್ಳಿ. ಇಲ್ಲಿ ಆಡಬಹುದು, ಕುಣಿಯಬಹುದು, ನೇರವಾಗಿ ನಿಮ್ಮ ತಪ್ಪುಗಳನ್ನು ತಿಳಿಸಿದಾಗ ತಿದ್ದಿಕೊಳ್ಳಬಹುದು. ಆ ರೀತಿಯ ಒಂದು ಮುಕ್ತ ವಾತಾವರಣ ರಂಗಭೂಮಿಯಲ್ಲಿ ಮಾತ್ರ ಲಭಿಸುತ್ತದೆ ಎಂದರು.

ರಂಗ ನಿರ್ದೇಶಕ ದಿಗ್ವಿಜಯ ಹೆಗ್ಗೋಡು ಅವರು ತಾವು ನಿರ್ದೇಶನ ಮಾಡುತ್ತಿರುವ ನಾಟಕದ ಬಗ್ಗೆ ಮಾತನಾಡುತ್ತಾ, ನಾವು ಈಗ ಹೇಳಹೊರಟಿರುವ ಕತೆ ನಮ್ಮದೇ ಕತೆ. ರಂಗಭೂಮಿ ಅಥವಾ ಯಾವುದೇ ಕಲೆ ಯಾವಾಗಲೂ ದಬ್ಬಾಳಿಕೆಯ ವಿರುದ್ಧ ಪುಟಿದೇಳುವ ಕೆಲಸವನ್ನು ಮಾಡುತ್ತಾ ಬಂದಿದೆ ಎಂದರು.

ಈ ಕಾಲಘಟ್ಟದಲ್ಲಿ ರಂಗಭೂಮಿಯಲ್ಲಿ ಯುವ ಮನಸ್ಸುಗಳು ಹೆಚ್ಚು ಹೆಚ್ಚು ತೊಡಗಿಕೊಳ್ಳುತ್ತಿರುವುದು ಬಹಳ ಸಂತೋಷದ ವಿಷಯ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಅತಿಥಿ ಉಪನ್ಯಾಸಕ ಡಾ.ನವೀನ್ ಮಾತನಾಡಿ, ಸಂಚಲನ ರಂಗ ಸಂಸ್ಥೆಯವರು ಪ್ರತಿವರ್ಷ ಯುವಕರಿಗೆ ಹಾಗೂ ಹೊಸ ಪ್ರತಿಭೆಗಳಿಗೆ ರಂಗಭೂಮಿಯನ್ನ ಪರಿಚಯಿಸುತ್ತಿರುವುದು ಶ್ಲಾಘನೀಯ ಎಂದರು.

ಸಂಚಲನ ಸಂಸ್ಥೆ ಅಧ್ಯಕ್ಷ ದೀಪಕ್ ಮೈಸೂರು ಮಾತನಾಡಿ, ಶಿಬಿರದ ಮೂಲಕ ಹೊಸ ಹೊಸ ಪ್ರತಿಭೆಗಳನ್ನು ಹೊರತರುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ದಿಗ್ವಿಜಯ ಹೆಗ್ಗೋಡು ಅವರ ನಿರ್ದೇಶನದಲ್ಲಿ ಶಿಬಿರಾರ್ಥಿಗಳು ಆಗಸ್ಟ್ ಮೊದಲ ವಾರದಲ್ಲಿ ಹೊಸ ನಾಟಕ ಪ್ರದರ್ಶನ ಮಾಡಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಡಾ. ಪೂರ್ಣಿಮಾ, ಶಿಬಿರಾರ್ಥಿಗಳು ಭಾಗವಹಿಸಿದ್ದರು.



1ನೇ ವರ್ಷದ ಸವಿನೆನಪು



ಲಾರಿ ಮಹದೇವ್ರವರು

ನಿಧನ: 9/7/2023

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ

ನಿಮ್ಮ ನೆನಪಿನಲ್ಲಿರುವ : ಕುಟುಂಬವರ್ಗ

ಭಾರಿ ಮಳೆಯಿಂದ...

ನಿಮ್ಮ ತಾರಸಿ ಸೋರುತ್ತಿದೆಯೇ?

ತಾರಸಿ, ಬಚ್ಚಲುಮನೆ, ಶೌಚಾಲಯಗಳು, ಬಿರಿಕು ಬಿಟ್ಟ ಚಪ್ಪಡಿಗಳು, ನೀರಿನ ಟ್ಯಾಂಕ್‌ಗಳು, ನೀರಿನ ಸಂಪ್‌ಗಳು, ಈಜು ಕೊಳ ಮುಂತಾದವುಗಳು, ಇವುಗಳ ದುರಸ್ಥಿಗಾಗಿ ಸಂಪರ್ಕಿಸಿ :

ನಾವು ನಿಮ್ಮ ಕಟ್ಟಡದ ರಕ್ಷಾಕವಚ

ಆಶೀರ್ವಾದ್ ವಾಟರ್ ಪ್ರೂಫಿಂಗ್ ಕಂಪೆನಿ

96111 86750

ಬೇಕಾಗಿದ್ದಾರೆ

1) ಲೇಡಿ ವಾರ್ಡನ್ - 2

2) ಪುರುಷರ ವಾರ್ಡನ್ - 1

ಊಟ ಮತ್ತು ವಸತಿ ಇರುತ್ತದೆ.
ಕಡ್ಡಾಯವಾಗಿ ಹಾಸ್ಟೆಲ್‌ನಲ್ಲಿ ಉಳಿಯಬೇಕು.
ಸಂಬಳ: 12,000 - 15,000, ಸ್ಥಳ: ಮೈಸೂರು.

Mob: 9964242430

REQUIRED

Professionally managed and industrial organization in hebbal industrial area requires the following candidates immediately

CHEMIST / PRODUCTION CHEMIST (MALE AND FEMALE)

BSc or Msc in chemistry with fresher and minimum 2 year working experience of quality control / Laborator analysis in the relevant field. Interested candidates may email their Cvs to

Labchemist23@gmail.com

ಕಾರ್ಯಕ್ರಮಗಳು ಹಾಗೂ ಸಭೆಗಳಿಗೆ

ವೈದ್ಯರ ಸಮುದಾಯ ಭವನ



ಆಲನಹಳ್ಳಿ, ಟಿ.ನರಸೀಪುರ ರಸ್ತೆ, ರಿಂಗ್ ರಸ್ತೆ ಜಂಕ್ಷನ್, ಮೈಸೂರು

ಸುಸಜ್ಜಿತ ಸಭಾಂಗಣ, ಡೈನಿಂಗ್ ಹಾಲ್, ಜನರೇಟರ್, ಪಾರ್ಕಿಂಗ್ ಸ್ಥಳ, ಇತ್ಯಾದಿ.

Call : 96111 72148, 94495 61722, 98451 29002

Office time 11 am to 6.00 pm on all days

ಶಿವಪ್ರಿಯ ಲೇಕ್‌ವ್ಯೂ ಲೇಔಟ್

Shivapriya

LAKEVIEW LAYOUT

APPROVED MUDA APPROVED



ರೆಡಿ ಟು ರಿಜಿಸ್ಟರ್

ನಿವೇಶನಗಳು ಮಾರಾಟಕ್ಕಿವೆ **30/40 & 20/30**

- ಮುಡಾ ಖಾತಾ
- ಸಂಪೂರ್ಣ ಅಭಿವೃದ್ಧಿ ಹೊಂದಿದ ಲೇಔಟ್
- ಬ್ಯಾಂಕ್ ಸಾಲ ಸೌಲಭ್ಯವಿದೆ

ಸ್ಥಳ: ಬೋಗಾದಿ-ಹುಯಿಲಾಳು ರಸ್ತೆ

ಮೈಸೂರಿನ ಹೊಸ ಪೆರಿಫೇರಲ್ ರಿಂಗ್ ರೋಡ್ ಹತ್ತಿರ

ಹುಣಸೂರು ಅಪ್ರೋಚ್ ರಸ್ತೆ ಹತ್ತಿರದಲ್ಲಿದೆ

ARKA PROPERTIES Let's Grow Together

CONTACT **9972602543**

www.arkaproperties.in

SCAN FOR DETAILS

IMKTA Since 2003

IMKTA TEACHER TRAINING PROGRAMS INDIA MYSORE

20 years of success in PreSchool Teacher Training and Placements



JOIN DIPLOMA MONTESSORI/ PRIMARY TEACHER TRAINING

DIPLOMA IN SPECIAL EDUCATION

- Learning Disability
- Autism
- ADHD Syndrome
- Slow Learners

GET PLACED IN INDIA, DUBAI, QATAR, UAE, SHARJAH, OMAN

- FOR SSLC, PUC OR ANY GRADUATES
- REGULAR/ SATURDAY CLASS
- 20 years of Success
- 30,000+ Alumni
- 800+ School Partnership
- 25 Branches in India

Admission Open

Alpha International School
Manandavadi Road, Near Ring Road Signal Junction, Srirampura, Mysore

Online course available

7829937469

WWW.IMKTA.IN

